

ಪ್ರಚೋದನೆ

ಲಂಕೇಶ್


ಜನವರಿ 22, 2014 ಪುಟ 20 ರೂ. 15/-



RSS ಅಂತರಂಗ



ಬೆನ್ನಿ ವಿರೋಧಿಸಿ
ರೆನ್ ಹಿಂದೆಯೂ
ನೋಡಿ



ಯಡ್ಡಿಗೆ
ಖೆಡ್ಡಾ ರೆಡಿ




ೋದಿಯೆಂಬ
್ರಮೆಗೆ
ೇಜ್ರಿಯೆಂಬ
್ರಹಣ!

ಮಂಡ್ಯ


‘ಮನಿ’ಗೆ ಒಲಿದ ಒಕ್ಕಲಿಗರು

ಕರಾವಳಿ



ಕಲ್ಲಡ್ಕ ಭಟ್ಟನ ಮತೋನ್ಮತ್ತ ಮಾತುಕತೆ

ರೈತರಿಗೆ ವಿಷ, ಕಾರ್ಪೊರೇಟ್ ಕಂಪನಿಗಳಿಗೆ ಸಾಲ



"ಸಾಲವನು ಕೊಂಬಾಗ ಹಾಲೋಗರ ಉಂಡಂತೆ
ಸಾಲಿಗನು ಬಂದು ಸೆಳೆವಾಗ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ"

ಈ ರೀತಿ ಕಿಬ್ಬದಿಯ ಕೀಲು ಮುರಿದುಕೊಳ್ಳುವುದು ಇರಲಿ, ಸಾಲ ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಲಕ್ಷಗಳಲ್ಲಿ ಏರುತ್ತಿದೆ. ಆದರೆ ದೇಶದ ಒಟ್ಟು ರೈತರು ಮಾಡಿರುವುದಕ್ಕಿಂತ ಹೆಚ್ಚಿನ ಸಾಲವನ್ನು ಕೆಲವು ನೂರು ಮಂದಿ ದೊಡ್ಡವರು ಮಾಡಿದ್ದಾರೆ. ಯಾವ ಬ್ಯಾಂಕ್‌ಗಳು ರೈತರಿಗೇ ಸಾಲವನ್ನು ಕೊಡಲು ನೂರೆಂಟು ಷರತ್ತುಗಳನ್ನು ಹಾಕುತ್ತವೆಯೋ, ಅವೇ ಬ್ಯಾಂಕ್‌ಗಳಿಂದಲೇ ಸಾಲ ಪಡೆದಿರುವ ಅವರಲ್ಲಿ ಒಬ್ಬರೂ ಆತ್ಮಹತ್ಯೆ ಮಾಡಿಕೊಂಡಿಲ್ಲ. ಬದಲಿಗೆ ಅವರಲ್ಲೇ ವಿಜಯ್ ಮಲ್ಯನಂಥವರು 'ನನ್ನ ಕಂಪೆನಿ ನಷ್ಟದಲ್ಲಿದೆ, ನೀವೇನು ಮಾಡುತ್ತಿದ್ದೀರಿ?' ಅಂತ ಸರ್ಕಾರಕ್ಕೇ ಧಮಕಿ ಹಾಕುತ್ತಿದ್ದಾರೆ.

ಸಿದ್ದರಾಮಯ್ಯನವರ ಸರ್ಕಾರವು ಅಂಬೇಡ್ಕರ್ ಮತ್ತು ದೇವರಾಜ ಅರಸ್ ನಿಗಮಗಳಿಂದ ನೀಡಲಾದ ಸಾಲಗಳನ್ನು ಮನ್ನಾ ಮಾಡಿದೆ. ಪ್ರಮಾಣವಚನ ಸ್ವೀಕರಿಸಿದ ದಿನ ಮಾಡಿದ ಈ ಮನ್ನಾದ ಘೋಷಣೆ ಇದೀಗ ಜಾರಿಗೆ ಬಂದಿದೆ. ಇಂದಿನ ಪತ್ರಿಕೆಗಳಲ್ಲಿ ಅದರ ಜಾಹೀರಾತೂ ಬಂದಿದೆ. ಈ ಬಡವರು ನಮ್ಮ ಸರ್ಕಾರದ ತಿಜೋರಿಯನ್ನು ಬರಿದು ಮಾಡಿಬಿಡುತ್ತಾರೆಂದು ಬಹಳಷ್ಟು ಜನರು ಅಂದುಕೊಳ್ಳುವ ಸಾಧ್ಯತೆಯಿದೆ. ಆದರೆ ನಮ್ಮ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಹಣವನ್ನು ಬರಿದು ಮಾಡುತ್ತಿರುವವರು ಯಾರು ಎಂದು ನೋಡಿದರೆ ಗಾಬರಿಯಾಗುತ್ತದೆ.


ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳು ಹಾಗೂ ರಾಜಕೀಯವಾಗಿ ಪ್ರಭಾವಿಗಳಾದವರು ನಮ್ಮ ಬ್ಯಾಂಕುಗಳಿಂದ ಸಾವಿರಾರು ಕೋಟಿಗಳ ಸಾಲವನ್ನು ಪಡೆದ ಈರಭದ್ರರು. ಸಾಲ ಮರುಪಾವತಿ ಮಾಡದೆ ರಾಜರಂತೆ ಮೆರೆಯುತ್ತಿರುವವರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಇಂಥಾ ಡಿಫಾಲ್ಟರ್‌ಗಳ ಬಗ್ಗೆ ಇತ್ತೀಚೆಗೆ ಸಿಬಿಐ ಪ್ರಾಥಮಿಕ ತನಿಖೆ ಆರಂಭಿಸಿದೆ.

ಬ್ಯಾಂಕುಗಳು ವಸೂಲಿಯಾಗದ ಸಾಲವನ್ನು ಒಂದು ನಿರ್ದಿಷ್ಟ ಅವಧಿಯ ನಂತರ **Non-Performing Asset (NPA)** ಎಂದು ವರ್ಗೀಕರಿಸುತ್ತವೆ. **2012**ರ ಮಾರ್ಚ್‌ನಲ್ಲಿ ವಸೂಲಿಯಾಗದ ಸಾಲದ ಮೊತ್ತ ಅರ್ಥಾತ್ ಎನ್‌ಪಿಎ ಒಟ್ಟು **61,558** ಕೋಟಿ ಇತ್ತು. ಅದೇ **2012**ರ ಡಿಸೆಂಬರ್ ವೇಳೆಗೆ ಎನ್‌ಪಿಎ ಮೊತ್ತ ಶೇಕಡ **50**ರಷ್ಟು ಹೆಚ್ಚಾಗಿ ಒಟ್ಟು **92,398** ಕೋಟಿಗಳಿಗೆ ಏರಿದೆ. ಅಂದರೆ ಕೇವಲ ಒಂಬತ್ತು ತಿಂಗಳ ಅವಧಿಯಲ್ಲಿ ನಮ್ಮ ಬ್ಯಾಂಕುಗಳು **30,840** ಕೋಟಿ ರೂ. ಮೊತ್ತವನ್ನು ವಸೂಲಿಯಾಗದ ಸಾಲ ಎಂಬ ಪಟ್ಟಿಗೆ ಸೇರಿಸಿವೆ. ಇದರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡ ಈ ಮೂರು ಬ್ಯಾಂಕ್‌ಗಳ ಮೊತ್ತವೇ **14,500** ಕೋಟಿಗಳು!

ಪಡೆದ ಸಾಲ ಮರುಪಾವತಿ ಮಾಡದವರ ಪಟ್ಟಿಯಲ್ಲಿ ದೊಡ್ಡ ಹೆಸರುಗಳೇ ಇವೆ. ಇವುಗಳಲ್ಲಿ ಕಿಂಗ್‌ಫಿಷರ್ ಏರ್‌ಲೈನ್ಸ್, ಡೆಕ್ಕನ್ ಕ್ರಾನಿಕಲ್, ಸುಜಲಾನ್ ಎನರ್ಜಿ, ಹೊಟೆಲ್ ಲೀಲಾ ವೆಂಚರ್, ಭಾರ್ತಿ ಶಿಪ್‌ಯಾರ್ಡ್, ಲಖಾನಿ ಫುಟ್‌ವೇರ್, ಮೋಸರ್‌ಬೇರ್, ಕೌಟಾನ್ಸ್ ರೀಟೈಲ್ ಮುಂತಾದುವು ಪ್ರಮುಖವಾದವುಗಳು. ಇವುಗಳ ಪೈಕಿ ವಿಜಯ್ ಮಲ್ಯ ಮಾಲಿಕತ್ವದ ಕಿಂಗ್‌ಫಿಷರ್ ಏರ್‌ಲೈನ್ಸ್ ಒಂದೇ **7,000** ಕೋಟಿಗಳಿಗಿಂತಲೂ ಅಧಿಕ ಮೊತ್ತವನ್ನು ಬಾಕಿ ಉಳಿಸಿಕೊಂಡು ಎನ್‌ಪಿಎ ಪಟ್ಟಿ ಸೇರಿದೆ.

ಕಳೆದ ಆಗಸ್ಟ್ **21**ರಂದು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಮುಖ್ಯ ವಿಚಕ್ಷಣಾಧಿಕಾರಿ(ಚೀಫ್ ವಿಜಿಲೆನ್ಸ್ ಆಫೀಸರ್)ಗಳ ಸಮ್ಮೇಳನ ನವದೆಹಲಿಯಲ್ಲಿ ನಡೆಯಿತು. ಈ ಸಭೆಯಲ್ಲಿ ಭಾಗವಹಿಸಿದ್ದ ಸಿಬಿಐ ಡೈರೆಕ್ಟರ್ ರಂಜಿತ್ ಸಿನ್ಹಾ ಎನ್‌ಪಿಎ ಸಮಸ್ಯೆಯ ಬಗ್ಗೆ ವಿವರವಾಗಿ ಮಾತನಾಡಿದ್ದರು. ಅವರ ಪ್ರಕಾರ ಈ ಸಾಲ ಪಡೆದವರು ಬಹಳ ಪ್ರಭಾವಿಗಳಾಗಿರುವುದರಿಂದ ಮಂಜೂರಾತಿಯಲ್ಲಿ ಪಾಲಿಸಬೇಕಾದ ಕಠಿಣ ನಿಯಮಗಳನ್ನು ಪಾಲಿಸಿಲ್ಲ; ಹಾಗೆಯೆ ವಸೂಲಾತಿಯ ವಿಷಯದಲ್ಲೂ ಬ್ಯಾಂಕುಗಳು ಶಿಸ್ತಿನಿಂದ ವ್ಯವಹರಿಸುತ್ತಿಲ್ಲ. ಕೆಲವು ಪ್ರಕರಣಗಳಲ್ಲಿ ಅಡಮಾನ ಇಡಲಾದ ಆಸ್ತಿಗಳು ಸಾಲದ ಮೊತ್ತದ ಶೇ **20**ಕ್ಕೂ ಸಮನಾಗುವುದಿಲ್ಲ. ಹೀಗೆ ಹಲವಾರು ಅಂಶಗಳನ್ನು ಎತ್ತಿ ತೋರಿಸಿದ ಸಿನ್ಹಾ ಅವರು ಈ ವಿದ್ಯಮಾನ ನಮ್ಮ ಆರ್ಥಿಕತೆಗೆ ಮಾರಕ ಎಂದು ಎಚ್ಚರಿಸಿದ್ದಾರೆ.







ಕಿಂಗ್‌ಫಿಷರ್ ಏರ್‌ಲೈನ್ಸ್ ಸಾಲದ ಸುಳಿಯಲ್ಲಿ ಸಿಲುಕಿದ್ದು ಆಡಳಿತಾತ್ಮಕ ವೈಫಲ್ಯ ಹಾಗೂ ಅಂದಾದುಂಧಿ ವೆಚ್ಚಗಳಿಂದಾಗಿ ಎಂಬುದು ಈಗಾಗಲೇ ಮಾಧ್ಯಮಗಳಲ್ಲಿ ಸಾಕಷ್ಟು ಬಾರಿ ಚರ್ಚೆಯಾಗಿದೆ. ಈ ಎನ್‌ಪಿಎ ಸಮಸ್ಯೆಯನ್ನು ಅರಿಯಲು ನಾವು ಒಂದೆರಡು ವಿಭಿನ್ನ ಪ್ರಕರಣಗಳನ್ನು ಪರಿಶೀಲಿಸುವುದು ಸೂಕ್ತವಾದೀತು.

ಹೈದರಾಬಾದ್‌ನ ವೆಂಕಟರಾಮ ರೆಡ್ಡಿ ಮತ್ತು ವಿನಾಯಕ ರೆಡ್ಡಿ ಎಂಬ ಸೋದರರ ಒಡೆತನದಲ್ಲಿರುವ ಮಾಧ್ಯಮ ಸಮೂಹ ಸಂಸ್ಥೆ ಡೆಕ್ಕನ್ ಕ್ರಾನಿಕಲ್ ಹೋಲ್ಡಿಂಗ್ ಲಿಮಿಟೆಡ್(ಡಿಸಿಎಚ್‌ಎಲ್)ನ ಉದಾಹರಣೆ ಉದ್ಯಮಿಗಳಿಗೆ ಹಾಗೂ ಬ್ಯಾಂಕುಗಳಿಗೆ ಹಲವು ಪಾಠಗಳನ್ನು ಕಲಿಸುತ್ತದೆ. ಈ ರೆಡ್ಡಿ ಬ್ರದರ್ಸ್ ಮಾಲಿಕತ್ವದ ಸಂಸ್ಥೆ ಅಡಿಯಲ್ಲಿ ಸುಮಾರು **11** ಲಕ್ಷ ಪ್ರಸಾರ ಸಂಖ್ಯೆ ಹೊಂದಿರುವ ದೇಶದ ಮೂರನೇ ಅತಿದೊಡ್ಡ ಆಂಗ್ಲ ಪತ್ರಿಕೆ ಡೆಕ್ಕನ್ ಕ್ರಾನಿಕಲ್ ಇದೆ. ಜೊತೆಗೆ ಫೈನಾನ್ಷಿಯಲ್ ಕ್ರಾನಿಕಲ್, ಏಷ್ಯನ್ ಏಜ್ ಎಂಬ ಆಂಗ್ಲ ಪತ್ರಿಕೆಗಳು, ಆಂಧ್ರಭೂಮಿ ಎಂಬ ಜನಪ್ರಿಯ ತೆಲುಗು ದಿನಪತ್ರಿಕೆಯೂ ಇದೆ. ನೂರಾರು ಕೋಟಿ ಆದಾಯವೂ ಇತ್ತೆನ್ನಿ. ಆದರೂ ಈ ಕಂಪನಿ ಮಾಡಿರುವ ಸಾಲ ಈಗ **3914** ಕೋಟಿಗಳು. ಅದೂ ಪತ್ರಿಕೆಯ ಕಾರಣಕ್ಕಾಗಿ ಅಲ್ಲ; ಬದಲಿಗೆ ತನ್ನ ಕಂಪನಿಯನ್ನು ಬೇರೆಬೇರೆ ಕ್ಷೇತ್ರಗಳಿಗೆ ಮನಸೋ ಇಚ್ಛೆ ವಿಸ್ತರಿಸಿದ ಕಾರಣಕ್ಕಾಗಿ.

ಇತ್ತೀಚೆಗೆ ಈ ಸಂಸ್ಥೆ ಏವಿಯೋಟೆಕ್ ಹೆಸರಿನಲ್ಲಿ ವಿಮಾನಯಾನ ಕ್ಷೇತ್ರಕ್ಕೂ ಕಾಲಿರಿಸಿದೆ. ವಿಮಾನಯಾನ ಕ್ಷೇತ್ರ ಬಂಡವಾಳವನ್ನು ನುಂಗಿಹಾಕುವ ಬಕಾಸುರನಿದ್ದಂತೆ. ಡೆಕ್ಕನ್ ಕಂಪನಿ ಹೂಡಿದ ಬಂಡವಾಳದ ಕತೆಯೂ ಹೀಗೇ ಆಯಿತು. ಒಡಿಸ್ಸಿ ಎಂಬ ಹೆಸರಿನಲ್ಲಿ ರೀಟೈಲ್ ಕ್ಷೇತ್ರ ಪ್ರವೇಶಿಸಿ, ದೇಶದ ಮಹಾನಗರಗಳಲ್ಲಿ ತಲೆಯೆತ್ತಿರುವ ಭಾರೀ ಮಾಲ್‌ಗಳಲ್ಲಿ ದುಬಾರಿ ವೆಚ್ಚದ ಮಳಿಗೆಗಳನ್ನು ತೆರೆದಿದೆ. ಆದರಿಂದ ಬರುವ ಆದಾಯ ಬಾಡಿಗೆಗೂ ಎಟುಕದೆ ಕೈ ಸುಟ್ಟುಕೊಂಡಿದೆ. ಡೆಕ್ಕನ್ ಚಾರ್ಜರ್ಸ್ ತಂಡದ ಮೂಲಕ ಐಪಿಎಲ್‌ನ ಫ್ರಾಂಚೈಸಿ ಪಡೆದು ಭಾರೀ ಪ್ರಚಾರ ಪಡೆದುಕೊಂಡಿತು. ಅಂತಿಮ ಫಲಿತಾಂಶದಲ್ಲಿ ಲಾಭ ಕಾಣಲಾಗದ ಕಂಪನಿ **100** ಕೋಟಿಗಳ ಫ್ರಾಂಚೈಸಿ ಶುಲ್ಕವನ್ನೂ ಪಾವತಿಸಲು ವಿಫಲವಾಗಿ, ಇದೇ ಕಾರಣಕ್ಕೆ ಫ್ರಾಂಚೈಸಿ ರದ್ದಾಯಿತು.

ಇಷ್ಟು ಮಾತ್ರವಲ್ಲ; ಹೈದರಾಬಾದ್ ರೇಸ್‌ಕ್ಲಬ್‌ನ ಕುದುರೆ ರೇಸಿನಲ್ಲೂ ಈ ಸಂಸ್ಥೆ ಬಹಳ ಸಕ್ರಿಯವಾಗಿದೆ. ವಿಶೇಷ ಖಾಸಗಿ ಜೆಟ್ ವಿಮಾನಗಳು ಇವರ ಒಡೆತನದಲ್ಲಿವೆ. ಜಗತ್ತಿನ ಅತ್ಯಂತ ಐಷಾರಾಮಿ ಕಾರುಗಳ ಸಂಗ್ರಹವೇ ಈ ರೆಡ್ಡಿ ಬ್ರದರ್ಸ್ ಬಳಿಯಿದೆ. ತಮ್ಮ ಐಷಾರಾಮಿ ದುಂದುವೆಚ್ಚದ ಜೀವನಶೈಲಿಯಿಂದಾಗಿ ಆಗಾಗ ಸುದ್ದಿಯಲ್ಲಿರುತ್ತಾರೆ.


ಇದೇ ಜುಲೈನಲ್ಲಿ ಡಿಸಿಎಚ್‌ಎಲ್ ಚೇರ್ಮನ್ ವೆಂಕಟರಾಮ ರೆಡ್ಡಿ ಮೇಲೆ ಸಿಬಿಐ ವಂಚನೆ ಕೇಸು ದಾಖಲಿಸಿಕೊಂಡಿದೆ. ತನ್ನ ಕಂಪನಿಯ ಷೇರುಗಳ ಬಗ್ಗೆ ಸುಳ್ಳು ದಾಖಲೆಗಳನ್ನು ತೋರಿಸಿ, **170** ಕೋಟಿಗಳನ್ನು ಪಡೆದು ವಂಚಿಸಿದ ಆರೋಪ ಇದೆ. ಕಂಪನಿಯ ವೈಸ್ ಚೇರ್ಮನ್ ಆಗಿದ್ದ ಪಿ.ಕೆ.ಅಯ್ಯರ್ ಈ ಎಲ್ಲ ವ್ಯವಹಾರಗಳ ಹಿಂದಿನ ಸೂತ್ರಧಾರ. ಪೊಲೀಸರು ಹುಡುಕಾಟ ಆರಂಭಿಸುತ್ತಿದ್ದಂತೆ ನಾಪತ್ತೆಯಾಗಿರುವ ಈತ ಇದುವರೆಗೆ ಪತ್ತೆಯಾಗಿಲ್ಲ.

ಮತ್ತೊಂದು ಪ್ರಕರಣ ಹೀಗಿದೆ

ಒಂದೆರಡು ವಾರಗಳ ಹಿಂದೆ ಗುಜರಾತ್‌ನ ರಾಜಧಾನಿ ಅಹಮದಾಬಾದ್ ನಗರದ ನವರಂಗಪುರ ಪೊಲೀಸ್ ಠಾಣೆಯಲ್ಲಿ ವಿಚಿತ್ರ ಕೇಸೊಂದು ದಾಖಲಾಯಿತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎಜಿಎಂ ಪ್ರವೀಣ್ ಮುರಳಿಯಾ ಎಂಬುವವರು ಸಾಯಿ ಇನ್‌ಫೋಸಿಸ್ಟಂನ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಸುನಿಲ್ ಕಕ್ಕಡ್ ಎಂಬುವವರು ಸಾಲ ಮರುಪಾವತಿ ಮಾಡದೆ ತಲೆಮರೆಸಿಕೊಂಡಿದ್ದಾನೆ; ಆತನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ದೂರು ನೀಡಿದ್ದರು.

ಇನ್ನೂ ಕುತೂಹಲಕಾರಿ ವಿಷಯವೆಂದರೆ ಸುನಿಲ್ ಕಕ್ಕಡ್‌ನ ಸಹೋದರ ಸಮೀರ್ ಕಕ್ಕಡ್ ಜೂನ್ **28**ರಿಂದ ತನ್ನ ಅಣ್ಣ ಕಾಣೆಯಾಗಿರುವುದಾಗಿ ಜೂನ್ **30**ರಂದೇ ವಸ್ತ್ರಪುರ್ ಪೊಲೀಸರಿಗೆ ಕಂಪ್ಲೈಂಟ್ ಕೊಟ್ಟಿದ್ದ. ಇದಾದ ಒಂದೆರಡು ದಿನಗಳಲ್ಲೇ ಕಂಪನಿಯ ನೌಕರರು ಸುನಿಲ್ ವಿರುದ್ಧ ಕಳೆದ **9** ತಿಂಗಳಿನಿಂದಲೂ ಸುಮಾರು **1,400** ನೌಕರರಿಗೆ ಸಂಬಳ ಕೊಡದೆ ವಂಚಿಸಿರುವುದಾಗಿ ಆರೋಪಿಸಿ ಪೊಲೀಸ್ ಕಂಪ್ಲೈಂಟ್ ನೀಡಿದ್ದರು. ಮಾತ್ರವಲ್ಲದೆ ಈ ನೌಕರರು ಸಮೀರ್ ಕಕ್ಕಡ್ ವಿರುದ್ಧವೂ ದೂರು ನೀಡಿದ್ದರು. ಯಾಕೆಂದರೆ ಆತನೂ ಸಹ ಕಂಪನಿಯ ಡೈರೆಕ್ಟರುಗಳಲ್ಲಿ ಒಬ್ಬನಾಗಿದ್ದು ಈ ನಾಟಕೀಯ ಬೆಳವಣಿಗೆಗಳು ನಡೆಯುವ ಕೆಲವು ವಾರಗಳ ಮೊದಲಷ್ಟೆ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ. ದೂರು ದಾಖಲಿಸಿಕೊಂಡಿರುವ ಪೊಲೀಸರಿಗೆ ಇದುವರೆಗೆ ತಿಳಿದುಬಂದಿರುವ ಸಂಗತಿಯೆಂದರೆ ಜೂನ್ **28**ರಂದು ಸುನಿಲ್ ಕಕ್ಕಡ್ ಅಹಮದಾಬಾದ್‌ನಿಂದ ವಿಮಾನ ಏರಿ ಮುಂಬೈಗೆ ಹೋಗಿದ್ದಾನೆ ಎಂಬುದು. ಅಲ್ಲಿಂದ ಆತ ಮತ್ತೆಲ್ಲಿಗೆ ಹೋಗಿದ್ದಾನೆ ಎಂಬುದು ಸದ್ಯಕ್ಕೆ ನಿಗೂಢ ಪ್ರಶ್ನೆ.

ವಾಸ್ತವದಲ್ಲಿ ಸುನಿಲ್ ಕಕ್ಕಡ್‌ನ ಎಸ್ಕೇಪ್ ಡ್ರಾಮಾ



ಬಹಳ ಪೂರ್ವನಿಯೋಜಿತವಾಗಿತ್ತು. ಅಮೆರಿಕದ ನೆಲೆಸಿರುವ ಆತನ ಹೆಂಡತಿ ಜೂನ್ ಮೊದಲ ವಾರದ ಭಾರತಕ್ಕೆ ಬಂದು ಕೆಲವು ಬ್ಯಾಂಕ್‌ಗಳ ಲಾಕರ್‌ಗಳ ಖಾಲಿ ಮಾಡಿಕೊಂಡು ಹೋಗಿದ್ದಳು. ಕಂಪನಿಗೆ ಸೇರಿ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಅಳಿದುಳಿದ ಹಣವ ಜೂನ್ **14** ಮತ್ತು **24**ರಂದು ವಿದೇಶಗಳಲ್ಲಿರುವ ತನ್ನ ಕಂಪನಿಯ ಖಾತೆಗಳಿಗೆ ವರ್ಗಾವಣೆ ಮಾಡಿದ್ದ. ಅಮೆರಿ ಹಾಂಗ್‌ಕಾಂಗ್, ಸಂಯುಕ್ತ ಅರಬ್ ಎಮಿರೇಟ ಮುಂತಾದೆಡೆಗಳಲ್ಲಿ ವಿವಿಧ ಹೆಸರಿನಲ್ಲಿ ಕಂಪನಿಗಳ ಸ್ಥಾಪಿಸಿ, ಅಕ್ರಮವಾಗಿ ಇಲ್ಲಿನ ಹಣವನ್ನು ವರ್ಗಾಯಿ ದ್ದಾನೆಂದು ಸಾಯಿ ಇನ್‌ಫೋಸಿಸ್ಟಂನ ಮ್ಯಾನೇಜರುಗ ಆರೋಪಿಸುತ್ತಿದ್ದಾರೆ. ಸಾಯಿ ಇನ್‌ಫೋಸಿಸ್ಟಂ ಹಲವಾ ಬ್ಯಾಂಕುಗಳಿಗೆ ಸುಳ್ಳು ದಾಖಲೆಗಳನ್ನು ಒದಗಿಸಿ ಒ **1,035** ಕೋಟಿಗಳಷ್ಟು ಸಾಲ ಪಡೆದಿದೆ. ಹೀಗೆ ಹ ಕಳೆದುಕೊಂಡವರ ಪಟ್ಟಿಯಲ್ಲಿ ಕರ್ನಾಟಕ ಮೂಲದ ಕೆನ ಬ್ಯಾಂಕ್ ಮತ್ತು ವಿಜಯಾ ಬ್ಯಾಂಕ್‌ಗಳೂ ಇವೆ. 'ಸುದ್ದಿಗಳನ್ನು ಆಂಗ್ಲ ದೈನಿಕ 'ದಿ ಹಿಂದೂ-ಬ್ಯುಸಿನೆ ಲೈನ್' ಪತ್ರಿಕೆಯಲ್ಲಿ ಪ್ರಕಟಿಸಿ 'ಇದು ಮತ್ತೊಂದು ಸ ಹಗರಣವಾಗಲಿದೆ'ಯೆಂದು ಎಚ್ಚರಿಸಿತ್ತು.

ಇಷ್ಟೆಲ್ಲಾ ನಡೆದು ಮೂರು ತಿಂಗಳ ಕಾಲ ಬ್ಯಾಂ ಆಡಳಿತ ಮಂಡಳಿ ಸುನಿಲ್ ಮೇಲೆ ಯಾವುದೇ ಕ್ರ ತೆಗೆದುಕೊಳ್ಳದಿರಲು ಕಾರಣವೇನು? **201** ಸೆಪ್ಟೆಂಬರ್‌ನಿಂದಲೂ ಕಂಪನಿಯ ನೌಕರರಿಗೆ ಸಂ ಕೊಡದೇ ಇರುವುದು, ನೌಕರರು ನಿತ್ಯ ಸಂಬಳಕ ಪರದಾಡುತ್ತಿದ್ದದ್ದು ಬ್ಯಾಂಕ್‌ಗಳ ಗಮನಕ್ಕೆ ಬರ ಇಲ್ಲವೆಂದರೆ ಅದಕ್ಕೆ ಏನು ಹೇಳುವುದು? ಬ್ಯಾಂಕ್‌ನವ ಮೀನಮೇಷ ಎಣಿಸಲೂ ಕಾರಣವಿದೆ. ಏನೆಂದರೆ ಸುನಿಲ್ ಕಕ್ಕಡ್ ರಾಜಕೀಯವಾಗಿ ಪ್ರಭಾವಶಾಲಿ ಈತನ ಕಂಪನಿ ಗುಜರಾತ್ ಸರ್ಕಾರ ಆಯೋಜಿ ವೈಬ್ರೆಂಟ್ ಗುಜರಾತ್ ಸಮಾವೇಶದಲ್ಲಿ ಪ್ಲಾಟಿನಂ ಶ್ರೇಣಿ ಪ್ರಾಯೋಜಕತ್ವ ಪಡೆದುಕೊಂಡಿತ್ತು. ಈ ಕಂಪನಿ ಒಡೆತನದ **14** ಸ್ಥಿರ ಆಸ್ತಿಗಳನ್ನು ಅಡಮಾನ ಇಟ್ಟ ಅವುಗಳನ್ನು ಹರಾಜು ಹಾಕಿದರೂ ಸಾಲದ ಮೊ ಕಾಲುಭಾಗವೂ ಬರುವುದಿಲ್ಲ. 'ಭವಿಷ್ಯದ ಪ್ರಧಾ ಮೋದಿಯ ಗುಜರಾತ್‌ನಲ್ಲಿ ಅಭಿವೃದ್ಧಿಯೋ ಅಭಿವ ಎಂದು ಇವೇ ಕಂಪೆನಿಗಳು ಅರಚುತ್ತಿರುವುದರ ಹಿಂ ಕಾರಣ ಇಂತಹ ಸವಲತ್ತುಗಳೇ ಆಗಿವೆ.

ಹೀಗೆ ಹೇಳುತ್ತಾ ಹೋದರೆ ಇಂಥಾ ಕತೆಗ ಕೊನೆಯೇ ಇಲ್ಲ. ಸಣ್ಣಪುಟ್ಟ ಉದ್ಯಮಿಗಳು ಕೆಲವು ಲಕ್ಷ ಸಾಲ ಪಡೆದು, ಅವುಗಳನ್ನು ಸಕಾಲಕ್ಕೆ ಪಾವತಿ ಮಾ ಹೋದಲ್ಲಿ ಬ್ಯಾಂಕ್‌ಗಳು ಹೇಗೆ ವ್ಯವಹರಿಸುತ್ತವೆ ಎಂಬುದ ನಾವು ನೋಡಿದ್ದೇವೆ. ರೈತರ ಸಾಲ, ಸಬ್ಸಿಡಿಗಳ ವಿ ಬಂದಾಗ ಪ್ಯಾನೆಲ್ ಚರ್ಚೆಗಳನ್ನು ನಡೆಸಿ ಕೂಗಾಡ ಮಾಧ್ಯಮಗಳಲ್ಲಿ ಇವು ಮಹತ್ವವನ್ನು ಪಡೆದುಕೊಳ್ಳುವುದಿ ಸಾಮಾಜಿಕ ಜಾಲತಾಣಗಳಲ್ಲಿ ಮೇಲ್ಮಧ್ಯಮ ವರ್ಗ ಅಸಹನೆ ವ್ಯಕ್ತಪಡಿಸುವುದಿಲ್ಲ, ಆರ್ಥಿಕ ತಜ್ಞರು ಅಪಾಯ ಬಗ್ಗೆ ಎಚ್ಚರಿಸುವುದಿಲ್ಲ!

ಕೇವಲ ಸಾಲಮನ್ನಾ ಮಾತ್ರವಲ್ಲ; ಸಾಲ ಅಡ್ಜಸ್ಟ್‌ಮೆಂಟ್‌ಗೂ ವ್ಯವಸ್ಥೆ

ಈ ರೀತಿ ಸಾಲಮನ್ನಾ ಮಾಡಲಾಗುತ್ತಿರುವುದರ ಜೊತೆಗೆ ಇನ್ನೊಂದು ಅಡ್ಜಸ್ಟ್‌ಮೆಂಟ್ ಸಹ ನಡೆಯುತ್ತಿದೆ. ಆರ್ಥಿಕ ಹಿಂಜರಿತ, ಕಾನೂನಾತ್ಮಕ ತೊಡಕುಗಳಿಂದ ಯೋಜನೆಯ ಜಾರಿಯಲ್ಲಿ ವಿಳಂಬ ಮುಂತಾದ ಕಾರಣಗಳಿಂದ ತೊಂದರೆಗೆ ಸಿಲುಕಿರುವ ಸಾಲ ಪಡೆದ ಕಾರ್ಪೊರೇಟ್ ಕಂಪನಿಗಳಿಗೆ ಸಹಾಯ ಮಾಡುವ ದೃಷ್ಟಿಯಿಂದ ಸರ್ಕಾರ **2001**ರಲ್ಲಿ **Corporate Debt Restructuring** (ಕಾರ್ಪೊರೇಟ್ ಸಾಲಗಳ ಪುನರ್‌ರಚನೆ) ಸಿಡಿಆರ್ ಪದ್ಧತಿಯನ್ನು ಜಾರಿಗೆ ತಂದಿದೆ. ಇದರಲ್ಲಿ ರಿಸರ್ವ್ ಬ್ಯಾಂಕ್‌ನ ಪಾತ್ರ ನಿರ್ಣಾಯಕವಾದುದು. ಈ ಸಿಡಿಆರ್ ವ್ಯವಸ್ಥೆಯಡಿ ಸಾಲಗಳಿಗೆ ವಿಧಿಸಿರುವ ಬಡ್ಡಿ ದರವನ್ನು ಕಡಿತಗೊಳಿಸುವುದು, ಸಾಲದ ಅವಧಿಯನ್ನು ವಿಸ್ತರಿಸುವುದು ಅಥವಾ ಸಾಲವನ್ನು ಸದರಿ ಕಂಪನಿಯ ಈಕ್ವಿಟಿಯಾಗಿ ಪರಿವರ್ತಿಸುವುದು - ಇವೇ ಮುಂತಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ಸಿಡಿಆರ್ ಪದ್ಧತಿ ಪ್ರಾರಂಭವಾದಾಗಿನಿಂದ **362** ಪ್ರಕರಣಗಳಿಗೆ ಅನುಮೋದನೆ ನೀಡಲಾಗಿದೆ. ಇದರ ಒಟ್ಟು ಮೊತ್ತ **2,12,000** ಕೋಟಿ ರೂಪಾಯಿಗಳು! ಈ ವಿದ್ಯಮಾನ ದಿನೇದಿನೇ ವಿಪರೀತ ಏರಿಕೆಯಾಗುತ್ತಿದ್ದು, ಆತಂಕಕಾರಿ ಮಟ್ಟ ತಲುಪಿದೆ. **2012**ರ ಒಂದೇ ವರ್ಷದ **86** ಪ್ರಕರಣಗಳಲ್ಲಿ **70,000** ಕೋಟಿ ಮೊತ್ತದ ಸಾಲವನ್ನು ಹೀಗೆ ಪುನರ್‌ರಚಿಸಲಾಗಿದೆ!

ಸಾಲ ಪಡೆಯಲು ಕಾರ್ಖಾನೆ ತೆರೆಯುವ ಅಗತ್ಯವೂ ಇಲ್ಲ

2011ರ ಜೂನ್‌ನಲ್ಲಿ **1500** ಕೋಟಿ ಮೊತ್ತದ ವಂಚನೆಯ ಮತ್ತೊಂದು ಹಗರಣ ಗುಜರಾತ್‌ನ ವಡೋದ ಜಿಲ್ಲೆಯಲ್ಲಿ ನಡೆದಿತ್ತು. ಸರ್ಕಾರದ ಸಬ್ಸಿಡಿಗಳನ್ನು ಪಡೆದುಕೊಂಡು ಜೈವಿಕ ಇಂಧನ ತಯಾರಿಕೆ ಹೆಸರಿನಲ್ಲಿ ವ್ಯವಹರಿಸು ಬಯೋಟರ್ ಇಂಡಸ್ಟ್ರೀಸ್ ಎಂಬ ಕಂಪನಿ ಬೋಗಸ್ ದಾಖಲಾತಿಗಳನ್ನು ಕೊಟ್ಟು ಬ್ಯಾಂಕ್ ಆಫ್ ಮಹಾರಾ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಓರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಎಂಬ ಮೂ ಬ್ಯಾಂಕುಗಳಿಂದ ಒಟ್ಟು **1,500** ಕೋಟಿ ಸಾಲ ಪಡೆದು ಪಂಗನಾಮ ಹಾಕಿದೆ.

ಈ ಕಂಪನಿಯ ಕಾರ್ಯಾಚರಣೆಯೂ ವಿಶಿಷ್ಟವಾದುದು. ಈ ಕಂಪನಿ ಜೈವಿಕ ಇಂಧನವನ್ನು ತಯಾರಿಸಿ ಪುಸ್ತಕದಲ್ಲಿ ಮಾತ್ರ. ರೈತರಿಂದ ಕಚ್ಚಾವಸ್ತುಗಳ ಖರೀದಿಯಿಂದ ಹಿಡಿದು ಜೈವಿಕ ಇಂಧನ ವಿತರಣೆಯವರೆಗೆ ಎ ಹಂತಗಳನ್ನೂ ಕಪೋಲಕಲ್ಪಿತವಾಗಿ ಕೇವಲ ಕಾಗದಪತ್ರದ ಮೇಲೆಯೇ ರೂಪಿಸಿ ಷೇರುಮಾರುಕಟ್ಟೆ, ಸರ್ಕಾ ಬ್ಯಾಂಕುಗಳು ಎಲ್ಲರನ್ನೂ ವಂಚಿಸಿತ್ತು. ಈ ಪ್ರಕರಣ ಕೂಡ ಸಿಬಿಐ ಪಟ್ಟಿಯಲ್ಲಿದೆ. ಅಂದಹಾಗೆ **2013**ರ ಮೇ ಈ ಕಂಪನಿಗೆ ವಿಶೇಷ ಆರ್ಥಿಕ ವಲಯ (ಎಸ್‌ಇಜಡ್) ರಚಿಸಲು **118** ಹೆಕ್ಟೇರ್ (ಸುಮಾರು **300** ಎ ಭೂಮಿಯನ್ನು ಒದಗಿಸಿರುವುದಾಗಿ ಸರ್ಕಾರದ ವೆಬ್‌ಸೈಟ್‌ನ ಪ್ರಕಟಣೆ ಹೇಳುತ್ತದೆ.

ವಿಕ್ರಂ ಎಂಬ ನಟನನ್ನು ಕುರಿತು



• ಗೌರಿ ಲಂಕೇಶ್
editorlankesh@gmail.com

ತೆಕ್ಕ ಹುಡುಗನಾಗಿದ್ದಾಗಿನಿಂದಲೂ ಕೆನ್ನಿಗೆ ಸಿನಿಮಾ ಗುವ ಆಸೆ. ಈ ಕನಸನ್ನು ನನಸಾಗಿಸಿಕೊಳ್ಳಲು ಮಾಡಿಕೊಂಡ ತಯಾರಿ ಒಂದೆರಡಲ್ಲ. ಶಾಲಾ ಗಳಲ್ಲಿ ನಟಿಸುವುದರಿಂದ ಪ್ರಾರಂಭವಾದ ಅವನ ತರಬೇತಿ ಕಾಲೇಜಿನ ಹಂತದಲ್ಲೂ ಮುವರೆಯಿತು. ಇನ್ನೇನು ಕಾಲೇಜಿನಲ್ಲಿ ಕೊನೆಯ ಎನ್ನುವಾಗ ಒಂದು ಅಂತರಕಾಲೇಜು ನಾಟಕ ಮುಲ್ಲಿ ಭಾಗವಹಿಸಿ ಅತ್ಯುತ್ತಮ ನಟ ಎಂಬ ಮುನ್ನು ಗೆದ್ದ. ಗೆದ್ದ ಹುರುಪಿನಲ್ಲಿ ಮಿತ್ರನೊಬ್ಬನ ಕೂತು ಬೈಕ್ ಮೇಲೆ ಮನೆಗೆ ಹೋಗುತ್ತಿದ್ದಾಗ ತಲೆಕೆಳಗಾಯಿತು.

ತ್ರ ಓಡಿಸುತ್ತಿದ್ದ ಬೈಕ್ ಲಾರಿಯೊಂದಕ್ಕೆ ಡಿಕ್ಕಿ ವ ರಭಸಕ್ಕೆ ಹತ್ತಿರದಲ್ಲೇ ಇದ್ದ ಕಬ್ಬಿಣದ ಕಂಬಗಳೇ ಹೋಗಿದ್ದವು. ಆ ಅಪಘಾತದಲ್ಲಿ ಮಿತ್ರನಿಗೆ ಕೊಂಚವೂ ಗಳಾಗಿರಲಿಲ್ಲ. ಆದರೆ ಕೆನ್ನಿಯ ಒಂದು ಕಾಲು ಯಿಂದ ಪಾದದ ತನಕ ಚಿಂದಿಯಾಗಿತ್ತು. ಕೂಡಲೇ ನ್ನು ಆಸ್ಪತ್ರೆಗೆ ಸೇರಿಸಲಾಯಿತು. ಮಾಂಸಖಂಡವೆಲ್ಲ ಹೋಗಿದ್ದ ಮೂಳೆ ಜಜ್ಜಿ ಹೋಗಿದ್ದ ಕೆನ್ನಿಯ ನೋಡಿದ ವೈದ್ಯರು "ಇದನ್ನು ಸರಿ ಮಾಗುವುದಿಲ್ಲ. ಮಂಡಿಯಿಂದ ಇಡೀ ಕಾಲನ್ನೇ ತಾಕಬೇಕು" ಎಂದರು. 'ಆದರೆ ಮಗನ ಕಾಲು ಸುವುದಕ್ಕೆ ಒಪ್ಪದ ಕೆನ್ನಿಯ ತಾಯಿ ಕೆನ್ನಿಯನ್ನು ಮು ಸ್ಪೆಷಾಲಿಟಿ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿನ "ಇವನ ಕಾಲನ್ನು ಉಳಿಸಲು ಪ್ರಯತ್ನಿಸುತ್ತೇವೆ. ಗ್ಯಾಂಗ್ರೀನ್ ಆದರೆ ನಮ್ಮಿಂದಲೂ ಸಾಧ್ಯವಿಲ್ಲ". ಆಗ ಕಾಲಿಗೆ ಚಿಕಿತ್ಸೆ ಪಡೆಯಲಾರಂಭಿಸಿದ ಕೆನ್ನಿ ರು ತಿಂಗಳುಗಳ ಕಾಲ ಆಸ್ಪತ್ರೆಯಲ್ಲಿಯೇ ಬೇಕಾಯಿತು. ಅಪಾರ ನೋವನ್ನು ಕೊಳ್ಳಬೇಕಾಯಿತು. ಅಪಘಾತ ಸಂಭವಿಸಿದ ನಂತರದ ವರ್ಷಗಳಲ್ಲಿ 23 ಬಾರಿ ಕಾಲಿಗೆ ಆಪರೇಶನ್ ಕೊಳ್ಳಬೇಕಾಯಿತು. ಆದರೂ ಕೆನ್ನಿ ಎಂದೂ ತನ್ನ ತ್ಸಾಹವನ್ನು ಕಳೆದುಕೊಳ್ಳಲಿಲ್ಲ. ನಟನಾಗಬೇಕೆಂಬ ಶಯದಿಂದ ಹಿಂಸೆ ಸರಿಯಲಿಲ್ಲ.

ತ್ತಿಗೂ ಕೆನ್ನಿಯ ಕಾಲು ಸಂಪೂರ್ಣವಾಗಿ ಗಿಲ್ಲ. ಈಗಲೂ ಕಾಲು ನೋವು ಕಾಡುತ್ತದೆ. ಮೇಲಿನ ಚರ್ಮ ಅಪಘಾತದ ತೀವ್ರತೆಯನ್ನು ಸುತ್ತದೆ. ಸತತ ವ್ಯಾಯಾಮದಿಂದಾಗಿ ಕೆನ್ನಿ ಕೊಂಡಾಗ ಕಾಲನ್ನು ಸ್ವಲ್ಪಮಟ್ಟಿಗೆ ಮಡಚಬಹುದು. ಆತನಿಗೆ ಚಕ್ಕಂಬಕ್ಕಳ ಹಾಕಿಕೊಂಡು ವುದಿಲ್ಲ, ಮದುವೆ ತರಹದ ದೃಶ್ಯಗಳಲ್ಲಿ ಕೆನ್ನಿಯನ್ನು ಗ ಆ ಸಿನಿಮಾದ ನಿರ್ದೇಶಕರು ಒಂದಿಷ್ಟು ಟ್ರಿಕ್ಸ್ ಮಾಡಬೇಕಾಗುತ್ತದೆ.


ನ್ನಿ ಬೇರೆ ಯಾರೂ ಅಲ್ಲ, ನಟನೆಗೆ ರಾಷ್ಟ್ರಪ್ರಶಸ್ತಿ ದ, ಅಪಾರ ಸಂಖ್ಯೆಯ ಅಭಿಮಾನಿಗಳನ್ನು ವ ತಮಿಳು ನಟ ವಿಕ್ರಮ್. ಆತನ ಮೂಲ ನೆದಿ. ಚಿತ್ರಲೋಕದಲ್ಲಿ ಆತ ಇಟ್ಟುಕೊಂಡಿರುವ ವಿಕ್ರಮ್.


ವಿಕ್ರಮ್ ಎಂತಹ ನಟನೆಂದರೆ ತಾನು ಒಂದು ಲ್ಲಿ ಮಾಡುತ್ತಿರುವ ಪಾತ್ರವಾಗಿ ತನ್ನನ್ನೇ ಸಿಕೊಳ್ಳಲು ಬಯಸುವ ಮನುಷ್ಯ. ಇತ್ತೀಚಿನ ತಿಂಗಳುಗಳಿಂದ ಯಾರೂ ವಿಕ್ರಂನನ್ನು ಲ್ಲ. ಆತನೂ ಬೇಕಂತಲೇ ಹೊರಗೆ ಎಲ್ಲೂ ದಿರಲಿಲ್ಲ. ಆದರೆ ಕೆಲವಾರಗಳ ಹಿಂದೆ ವಿಕ್ರಂ ಕಾರ್ಯಕ್ರಮದಲ್ಲಿ ಪ್ರತ್ಯಕ್ಷವಾದಾಗ ಆತನನ್ನು ಕಂಗಾಲಾದರು. ಅವನಿಗೆ ವಿಚಿತ್ರ ರೋಗ ದು ಗಾಬರಿಯಾದರು. ಯಾಕೆಂದರೆ ವಿಕ್ರಂ ತಲೆ ಬೋಳಿಸಿಕೊಂಡಿದ್ದರು. ಅವರ ದೇಹದ ತೂಕವೂ ಇಳಿದು ಅವರು ತುಂಬಾ ಸಣ್ಣಗಾಗಿದ್ದರು.


ಆದರೆ ಇದು ಕೂಡ ವಿಕ್ರಂ ಒಂದು ಹೊಸ ಸಿನಿಮಾಕ್ಕೆ ಮಾಡಿಕೊಂಡಿರುವ 'ತಯಾರಿ'. ಅವರು ದೊಡ್ಡ ಬಡ್ಜೆಟ್ಟಿನ 'ಐ' ಎಂಬ ತಮಿಳು ಚಿತ್ರದಲ್ಲಿ ಮುದುಕನ ಪಾತ್ರ ಮಾಡುತ್ತಿದ್ದಾರಂತೆ. ಆ ಪಾತ್ರಕ್ಕೆ ಸೂಕ್ತವಾಗಿ ಕಾಣಲು ವಿಕ್ರಂ ತಮ್ಮ ದೇಹದ ತೂಕವನ್ನು 80 ಕೆ.ಜಿ.ಯಿಂದ 60 ಕೆ.ಜಿ.ಗೆ ಇಳಿಸಿಕೊಂಡಿದ್ದಾರೆ. "ಇನ್ನೂ ಐದು ಕೆ.ಜಿ. ಕಡಿಮೆ ಆಗಬೇಕಿದೆ" ಎನ್ನುವ ವಿಕ್ರಂ ಈಗ ಒಂದು ದಿನಕ್ಕೆ ತಿನ್ನುತ್ತಿರುವುದು ಒಂದು ಮೊಟ್ಟೆಯ ಬಿಳಿ ಭಾಗ, ಒಂದು ಗ್ಲಾಸ್ ಕ್ಯಾರೆಟ್ ಜ್ಯೂಸ್ ಮತ್ತು ಒಂದು ಚಪಾತಿ ಮಾತ್ರ. "ಯಾಕೆ ಹೀಗೆ ನಿಮ್ಮನ್ನು ದಂಡಿಸಿಕೊಳ್ಳುತ್ತಿದ್ದೀರಿ. ಬರೀ ಮೇಕಪ್‌ನಿಂದಲೇ ಮುದುಕನ ಹಾಗೆ ಕಾಣಿಸಿಕೊಂಡರೆ ಸಾಲದೆ?" ಎಂದು ಕೇಳಿದರೆ ವಿಕ್ರಂ ಕೊಡುವ ಉತ್ತರ: "ಇಲ್ಲ. ಹಾಗೆಲ್ಲ ಮಾಡಿದರೆ ಸರಿಹೋಗುವುದಿಲ್ಲ. ನಾನು ಒಂದು ಪಾತ್ರವಾಗಿ ಮಾತ್ರ ನಟಿಸಕೂಡದು, ಬದಲಾಗಿ ನಾನೇ ಆ ಪಾತ್ರವಾಗಬೇಕು."

ವಿಕ್ರಂ ಸಾಮಾನ್ಯ ನಟನಲ್ಲ. ಅವರಲ್ಲಿ ಅಪಾರ ಶ್ರದ್ಧೆ ಮತ್ತು ಪ್ರತಿಭೆ ಎರಡೂ ಇದೆ. ಆದರೂ ಅವರಿಗೆ ಯಶಸ್ಸು ಸುಲಭವಾಗಿ ಸಿಗಲಿಲ್ಲ. ಕಾಲೇಜಿನಲ್ಲಿದ್ದಾಗ ಸಂಭವಿಸಿದ ಅಪಘಾತದಿಂದ ಕೊನೆಗೂ ಚೇತರಿಸಿಕೊಂಡ ನಂತರ ವಿಕ್ರಂ ನಾಟಕಗಳಲ್ಲಿ ನಟಿಸುವುದನ್ನು ಮುಂದುವರೆಸಿದರು. ಹತ್ತಾರು ಇಂಗ್ಲಿಷ್ ನಾಟಕಗಳಲ್ಲಿ ಅವರ ಪ್ರತಿಭೆಯನ್ನು ಕಂಡು ವಿಮರ್ಶಕರು ಕೊಂಡಾಡಿದರು. ಒಂದೆರಡು ಜಾಹೀರಾತು ಮತ್ತು ಚಿಕ್ಕಪುಟ್ಟ ಧಾರಾವಾಹಿಗಳಲ್ಲೂ ನಟಿಸಿದರು. ಆದರೆ ತಮಿಳು ಚಿತ್ರಲೋಕದಲ್ಲಿ ಮಿಂಚಬೇಕೆಂಬ ಅವರ ಕನಸು ನನಸಾಗುವ ಸೂಚನೆಗಳೇ ಕಾಣುತ್ತಿರಲಿಲ್ಲ. ಅವರು ಕೆಲಸವಿಲ್ಲದೆ ಇರುವುದನ್ನು ನೋಡಲಾಗದೆ ಅವರ ಪತ್ನಿ ಶೈಲಜ "ಹೋಗಲಿ, ಟಿವಿ ಸೀರಿಯಲ್‌ಗಳಲ್ಲಾದರೂ ನಟಿಸಿ" ಎಂದರೆ "ಬೇಡ. ನಾನು ಚಿಕ್ಕತೆರೆಯ ನಟನಾದರೆ ಚಿತ್ರರಂಗ ನನ್ನತ್ತ ಕಣ್ಣೆತ್ತಿಯೂ ನೋಡುವುದಿಲ್ಲ" ಎಂದರು.

ಆದರೂ ಜೀವನೋಪಾಯಕ್ಕೆ ಏನನ್ನಾದರೂ ಮಾಡಬೇಕಲ್ಲ? ಅದಕ್ಕೆ ಪರಿಹಾರವಾಗಿ ವಿಕ್ರಂ ಕಂಡುಕೊಂಡ ದಾರಿ ಬೇರೆ ನಟರ ಪಾತ್ರಗಳಿಗೆ ತನ್ನ ದನಿ ಕೊಡುವುದು. ಅದರಲ್ಲೂ ವಿಕ್ರಂ ಎಂತಹ ಶ್ರದ್ಧೆ ತೋರಿದರೆಂದರೆ ಅವರು ಹಲವಾರು ಸಿನಿಮಾಗಳಲ್ಲಿ ನಟ ಪ್ರಭುದೇವ ಮತ್ತು ಅಬ್ಬಾಸ್‌ಗೆ ಹೊಂದುವಂತೆ ತಮ್ಮ ದನಿಯನ್ನು ಡಬ್ ಮಾಡಿದರು. ಇದರ ಮಧ್ಯೆ ನಟನೆ ಮತ್ತು ನೃತ್ಯದಲ್ಲಿ ಬೇರೆಯವರಿಗೆ ತರಬೇತಿ ನೀಡುತ್ತಿದ್ದರು.







ಕೊನೆಗೂ ಚಿತ್ರಲೋಕದಿಂದ ವಿಕ್ರಂ ಅನ್ನು ಹುಡುಕಿಕೊಂಡು ಹಲವು ಅವಕಾಶಗಳು ಬಂದವು. ಆದರೆ ಅವರು ಆರಂಭದಲ್ಲಿ ನಟಿಸಿದ ಮೂರು-ನಾಲ್ಕು ಚಿತ್ರಗಳನ್ನು ಖ್ಯಾತ ನಿರ್ದೇಶಕರೇ ನಿರ್ದೇಶಿಸಿದ್ದರೂ ಅವೆಲ್ಲ ಬಾಕ್ಸ್ ಆಫೀಸಿನಲ್ಲಿ ತೋಪಾದವು. ಇಂತಹ ಸನ್ನಿವೇಶದಲ್ಲಿ ಬೇರೆ ಯಾರಾದರು ಇದ್ದಿದ್ದರೆ ಅವರು ಚಿಕ್ಕಪುಟ್ಟ ಪಾತ್ರಗಳನ್ನೂ ಸ್ವೀಕರಿಸಿ ಪೋಷಕ ನಟರಾಗಿ ಮುಂದುವರೆಯುತ್ತಿದ್ದರು. ಆದರೆ ತಾನು ತಮಿಳು ಸಿನಿಮಾದಲ್ಲಿ ಹೀರೋ ಆಗಲೇಬೇಕೆಂದು ನಿರ್ಧರಿಸಿದ ವಿಕ್ರಂ ಚಿಕ್ಕಪುಟ್ಟ ಪಾತ್ರಗಳನ್ನು ನಿರಾಕರಿಸುತ್ತಾ ಹತ್ತು ವರ್ಷಗಳ ಕಾಲ ತಮಿಳು ಚಿತ್ರರಂಗದ ಅಂಚಿನಲ್ಲೇ ಉಳಿದುಕೊಂಡರು.

ಕೊನೆಗೂ ಅವರಿಗೆ ಬ್ರೇಕ್ ನೀಡಿದ್ದು ಅವರ ಮಿತ್ರರಾದ ಬಾಲಾ ಎಂಬುವವರು ನಿರ್ದೇಶಿಸಿದ 'ಸೇತು' ಚಿತ್ರ. ('ಸೇತು' ಚಿತ್ರ 'ಹುಚ್ಚ' ಎಂದು ಕನ್ನಡದಲ್ಲಿ ರಿಮೇಕ್ ಆಗಿ ಅದರಲ್ಲಿ ಸುದೀಪ್ ನಟಿಸಿದ್ದರು.) 'ಸೇತು' ಚಿತ್ರದಲ್ಲಿ ವಿಕ್ರಂ ಅವರದ್ದು ಪ್ರೇಮಿಯೊಬ್ಬ ಹುಚ್ಚನಾಗುವ ಪಾತ್ರ. ಸಾಮಾನ್ಯವಾಗಿ ಸಿನಿಮಾಗಳನ್ನು ಅದರ ಕತೆ ಇರುವಂತೆ ಆರಂಭದಿಂದ ಕೊನೆಯತನಕ ಚಿತ್ರಿಸುವುದಿಲ್ಲ. ಬೇರೆಬೇರೆ ದೃಶ್ಯಗಳನ್ನು ಬೇರೆಬೇರೆ ಸಂದರ್ಭಗಳಲ್ಲಿ ಚಿತ್ರಿಸಿ ಕೊನೆಗೆ ಎಡಿಟಿಂಗ್ ಟೇಬಲ್ ಮೇಲೆ ಅದಕ್ಕೆ ಒಂದು ಕತೆಯ ರೂಪ ಕೊಡಲಾಗುತ್ತದೆ. ಆದರೆ 'ಸೇತು' ಚಿತ್ರದಲ್ಲಿ ನಾಯಕ ನಟ ಕಟ್ಟುಮಸ್ತಾದ ಯುವಕನಾಗಿ ಆರಂಭಗೊಂಡು ಮಧ್ಯದಲ್ಲಿ ಹುಚ್ಚನಾಗಿ ದೈಹಿಕವಾಗಿ ಸೊರಗಿಹೋಗುವ ಕತೆ ಇದ್ದಿದ್ದರಿಂದ ಅದನ್ನು ಆರಂಭದಿಂದ ಕೊನೆಯ ತನಕ ಚಿತ್ರಿಸುವ ಯೋಜನೆಯನ್ನು ನಿರ್ದೇಶಕ ಬಾಲಾ ಹಾಕಿಕೊಂಡಿದ್ದರು. ಅದಕ್ಕೆ ಸರಿಯಾಗಿ ವಿಕ್ರಂ ಕೂಡ ಚಿತ್ರದ ಎರಡನೆ ಅರ್ಧಕ್ಕೆ ತಮ್ಮ ದೈಹಿಕ ತೂಕವನ್ನು ಇಳಿಸಲು ಒಪ್ಪಿಕೊಂಡಿದ್ದರು.

1997ರಲ್ಲಿ ಚಿತ್ರದ ಚಿತ್ರೀಕರಣ ಪ್ರಾರಂಭವಾಯಿತು. ನಿರ್ಮಾಪಕನ ಹತ್ತಿರ ಹೆಚ್ಚಿನ ದುಡ್ಡಿರಲಿಲ್ಲವಾದ್ದರಿಂದ ಚಿತ್ರೀಕರಣ ಕಷ್ಟಪಟ್ಟು ಮುಂದಕ್ಕೆ ಸಾಗಿತು. ಚಿತ್ರದ ಅರ್ಧಭಾಗ ಮುಗಿಯುತ್ತಿರುವಾಗಲೇ ಬಾಲಾ ಮತ್ತು ವಿಕ್ರಂ ಅವರ ಹೆಗಲ ಮೇಲೆ ದುರಾದೃಷ್ಟ ಹತ್ತು ಕೂತಿತು. ಯಾಕೆಂದರೆ ಅದೇ ಹೊತ್ತಿಗೆ ತಮಿಳು ಸಿನಿಮಾ ಕಾರ್ಮಿಕರು ಸ್ಟ್ರೈಕ್ ಘೋಷಿಸಿದಾಗ ಚಿತ್ರೀಕರಣವನ್ನು ನಿಲ್ಲಿಸಬೇಕಾಯಿತು. ಈ ಬ್ರೇಕ್‌ನಿಂದಾಗಿ ಸಿಕ್ಕ ಅವಕಾಶವನ್ನು ಬಳಸಿಕೊಂಡ ವಿಕ್ರಂ ಚಿತ್ರದಲ್ಲಿನ ತಮ್ಮ ಮುಂದಿನ ಭಾಗಕ್ಕೆ ತಮ್ಮ ದೇಹದ ತೂಕವನ್ನು ಇಳಿಸಿಕೊಂಡರು. ಸದ್ಯದಲ್ಲೇ ಸ್ಟ್ರೈಕ್ ಅಂತ್ಯಗೊಳ್ಳುತ್ತೆ ಎಂದುಕೊಂಡಿದ್ದ ವಿಕ್ರಂ ಸ್ಟ್ರೈಕ್ ಸಂದರ್ಭದಲ್ಲಿ ವಿಧಿ ಇಲ್ಲದೆ ತಮ್ಮ ದೇಹದ ತೂಕವನ್ನು ಕಡಿಮೆಯಾಗಿಯೇ ಇಟ್ಟುಕೊಳ್ಳಬೇಕಾಯಿತು. ಆದರೆ ಕಾರ್ಮಿಕರ ಸ್ಟ್ರೈಕ್ ಬರೋಬ್ಬರಿ ಆರು ತಿಂಗಳ ಕಾಲ ಮುಂದುವರೆದಾಗ ವಿಕ್ರಂ ಅವರ ದೈಹಿಕ ಸ್ಥಿತಿಯೂ ಹಾಗೇ ಮುಂದುವರೆಯಿತು. ಕೊನೆಗೂ ಸ್ಟ್ರೈಕ್ ಮುಗಿದು ಚಿತ್ರೀಕರಣವನ್ನು ಪುನರ್ ಆರಂಭಿಸಲು ಬಾಲಾ ಮತ್ತು ವಿಕ್ರಂ ಸಜ್ಜಾಗುತ್ತಿದ್ದಂತೆ ಇನ್ನೊಂದು ಆಘಾತ ಅವರಿಗೆ ಎದುರಾಯಿತು. ಅಷ್ಟು ಹೊತ್ತಿಗೆ ಚಿತ್ರದ ನಿರ್ಮಾಪಕರ ಜೇಬು ಖಾಲಿಯಾಗಿದ್ದರಿಂದ ಅವರು ಚಿತ್ರವನ್ನು ಕೈಬಿಡುವ ನಿರ್ಧಾರ ತೆಗೆದುಕೊಂಡಿದ್ದರು.

ಚಿತ್ರವನ್ನು ನಿಲ್ಲಿಸದಂತೆ ನಿರ್ಮಾಪಕರನ್ನು ವಿಕ್ರಂ ಪರಿಪರಿಯಾಗಿ ಬೇಡಿಕೊಂಡರು. ಕೊನೆಗೂ ಅದಕ್ಕೆ ಒಪ್ಪಿಕೊಂಡ ನಿರ್ಮಾಪಕ ಕೈಲಾದಾಗ ಸಿನಿಮಾ ಮುಂದುವರೆಸುತ್ತೇನೆಂದು ಹೇಳಿದರು ಮತ್ತು ಜನವರಿ 1998ರಲ್ಲಿ ಚಿತ್ರೀಕರಣ ಪ್ರಾರಂಭವಾಯಿತು. ನಿರ್ಮಾಪಕ ಆಗೀಗ ಹಣ ಕೊಡುತ್ತಿದ್ದರಿಂದ ಬಾಲಾ ಮತ್ತು ವಿಕ್ರಂ ಕಷ್ಟಪಟ್ಟು 1999ರಲ್ಲಿ ಚಿತ್ರವನ್ನು ಸಂಪೂರ್ಣಗೊಳಿಸಿದರು. ಆಗ ಅವರಿಗೆ ಇನ್ನೊಂದು ಸವಾಲು ಎದುರಾಯಿತು. ಅದು ಬಾಲಾ ನಿರ್ದೇಶಕನ ಮೊದಲ ಚಿತ್ರ. ಅದಕ್ಕೂ ಮುನ್ನ ವಿಕ್ರಂ ನಟಿಸಿದ್ದ ಚಿತ್ರಗಳು ಫ್ಲಾಪ್ ಆಗಿದ್ದರು. ಈ ಕಾರಣಗಳಿಂದಾಗಿ ಯಾವ ವಿತರಕನೂ 'ಸೇತು' ಚಿತ್ರವನ್ನು ಕೊಂಡುಕೊಳ್ಳಲು ಮುಂದಾಗಲಿಲ್ಲ. ವಿಕ್ರಂ ಹೆಂಡತಿಯೇ ಹಣ ಹಾಕಿ ಪ್ರಿವ್ಯೂಗಳನ್ನು ಆಯೋಜಿಸುತ್ತಿದ್ದರು. ತಿಂಗಳಾನುಗಟ್ಟಲೆ ಹೀಗೆ ನೂರಾರು ಪ್ರಿವ್ಯೂಗಳನ್ನು ಏರ್ಪಡಿಸಿದರೂ, ನೂರಾರು ಜನ 'ಸೇತು' ನೋಡಿ ಮೆಚ್ಚಿದರೂ ಸಿನಿಮಾವನ್ನು ಯಾರು ಖರೀದಿಸಲಿಲ್ಲ.


ಕೊನೆಗೆ ವಿಧಿ ಇಲ್ಲದೆ ನಿರ್ಮಾಪಕರೇ ಯಾವ ಪ್ರಚಾರವೂ ಇಲ್ಲದೆ 'ಸೇತು'ವನ್ನು ಒಂದು ಕಟಿದಾ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಿದರು. ಮೊದಲನೆ ದಿನ ಚಿತ್ರಮಂದಿರಕ್ಕೆ ಬಾಲಾ ಮತ್ತು ವಿಕ್ರಂ ಹೋದರು – ಸಿನಿಮಾ ನೋಡಲಲ್ಲ, ಪ್ರೇಕ್ಷಕರ ಪ್ರತಿಕ್ರಿಯೆಯನ್ನು ನೋಡಲು. ಸಿನಿಮಾ ಮುಗಿದನಂತರ ಪ್ರೇಕ್ಷಕನೊಬ್ಬ "ಬೋ. . . ಮಕ್ಕಳು, ನಾಗು ಕಣ್ಣೀರಿಡುವಂತೆ ಮಾಡಿದ್ರು" ಎಂದದ್ದನ್ನು ಕೇಳಿ ಇಬ್ಬರೂ ಥ್ರಿಲ್ ಆದರು. ಸನ್ ಟಿವಿ 'ಸೇತು' ಬಗ್ಗೆ ಒಳ್ಳೆಯ ವಿಮರ್ಶೆ ಕೊಟ್ಟಿತು. ಇತರೆ ತಮಿಳು ಪತ್ರಿಕೆಗಳು ಮೆಚ್ಚುಗೆಯನ್ನು ವ್ಯಕ್ತಪಡಿಸಿದವು. ಜನರ ಬಾಯಿ ಮಾತಿನಿಂದ ಚಿತ್ರ ಪ್ರಚಾರ ಪಡೆದು ಕೊನೆಗೂ ಹಿಟ್ ಆಯಿತು. ಅಲ್ಲಿಂದ ವಿಕ್ರಂ ವೃತ್ತಿ ಬದುಕು ಬದಲಾಯಿತು. ರಾತ್ರಿ ಬೆಳಗಾಗುವ ಹೊತ್ತಿಗೆ ವಿಕ್ರಂ ತಮಿಳು ಚಿತ್ರರಂಗದ ಪ್ರಮುಖ ನಟರಲ್ಲಿ ಒಬ್ಬ ಎನಿಸಿಕೊಂಡರು.


ಅಂದಹಾಗೆ, 'ಸೇತು' ಚಿತ್ರ ಹಿಂದಿಯಲ್ಲೂ ರಿಮೇಕ್ ಆಗಿ ಅದರಲ್ಲಿ ಸಲ್ಮಾನ್ ಖಾನ್ ನಟಿಸಿದ್ದ. ಅದು ಚಿತ್ರೀಕರಣಗೊಳ್ಳುತ್ತಿರುವಾಗ ವಿಕ್ರಂನನ್ನು ಭೇಟಿಯಾದ ಸಲ್ಮಾನ್ "ಈಗ ಎಷ್ಟು ಚಿತ್ರಗಳಲ್ಲಿ ನಟಿಸುತಿದ್ದೀಯಾ?" ಎಂದು ಕೇಳಿದನಂತೆ. ಅದಕ್ಕೆ ವಿಕ್ರಂ "ಒಂದು ಚಿತ್ರದಲ್ಲಿ" ಎಂದು ಉತ್ತರಿಸಿದರಂತೆ. "ಹೌದಾ? ಎಷ್ಟು ದಿನಗಳಿಂದ?" ಎಂದು ಸಲ್ಮಾನ್ ಮರು ಪ್ರಶ್ನಿಸಿದನಂತೆ. ಆಗ ವಿಕ್ರಂ "ಎರಡು ವರ್ಷಗಳಿಂದ" ಎಂದರಂತೆ. "ಅಯ್ಯೋ. ನಾನು ಈಗ ಎಷ್ಟು ಚಿತ್ರಗಳಲ್ಲಿ ನಟಿಸುತ್ತಿದ್ದೀನಿ ಗೊತ್ತ? 23 ಚಿತ್ರಗಳಲ್ಲಿ. ನೀನೂ ಹಾಗೆ ಮಾಡಬೇಕು. ಒಂದು ಚಿತ್ರಕ್ಕೆ ಎರಡು ವರ್ಷಗಳನ್ನು ಕೊಟ್ಟರೆ ನಿನಗೇನು ಸಿಗುತ್ತೆ?" ಎಂದು ಸಲ್ಮಾನ್ ತಮಾಷೆ ಮಾಡಿದನಂತೆ.


'ಸೇತು' ನಂತರ ವಿಕ್ರಂ ನಟಿಸಿದ್ದ 'ಅನ್ನಿಯನ್' ಚಿತ್ರವೂ ಸೂಪರ್ ಹಿಟ್ ಆಗಿತ್ತು. ಆದರೆ ಅದ್ಯಾಕೋ ಅದಾದ ಮೇಲೆ ಬಿಡುಗಡೆಗೊಂಡ ಅವರ ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲಿ ದೊಡ್ಡ ಸದ್ದು ಮಾಡಿಲ್ಲ. ಈಗ ಅವರು ನಟಿಸುತ್ತಿರುವ 'ಐ' ಚಿತ್ರವೂ ಕಳೆದ ಒಂದು ವರ್ಷದಿಂದ ತಯಾರಾಗುತ್ತಿದೆ. ಅದನ್ನು ಖ್ಯಾತ ನಿರ್ದೇಶಕ ಶಂಕರ್ ನಿರ್ದೇಶಿಸುತ್ತಿದ್ದಾರೆ. ಅಷ್ಟೇ ಅಲ್ಲ, ಅದು ತಮಿಳು ಚಿತ್ರರಂಗದಲ್ಲೇ ಅತಿ ದುಬಾರಿ ಚಿತ್ರವಾಗಲಿದೆ ಎಂಬ ಸುದ್ದಿಯೂ ಹಬ್ಬಿದೆ. ಅಂದರೆ ವಿಕ್ರಂ ಅವರ ಮೇಲೆ ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹೂಡಲಾಗಿದೆ. 'ಐ' ಸಿನಿಮಾ ಗೆದ್ದು ನಿರ್ಮಾಪಕರಿಗೂ ಲಾಭ ಬಂದು, ತಾನೂ ಪ್ರೇಕ್ಷಕರಿಂದ ಸೈ ಎನಿಸಿಕೊಳ್ಳಬೇಕಿದ್ದರೆ ತನ್ನೆಲ್ಲವನ್ನು ಚಿತ್ರಕ್ಕೆ ಪ್ರಾಮಾಣಿಕವಾಗಿ ಅರ್ಪಿಸಬೇಕೆಂಬ ಕಾಳಜಿಯೇ ವಿಕ್ರಂ ಈಗ ಪಾತ್ರಕ್ಕೆ ಎಲ್ಲ ರೀತಿಯಲ್ಲೂ ತಮ್ಮನ್ನು ಒಗ್ಗಿಸಿಕೊಳ್ಳುವಂತೆ ಮಾಡಿದೆ.


ವಿಕ್ರಂ ಎಂಬ ಪ್ರತಿಭಾವಂತ ನಟನ ಬಗ್ಗೆ ಇತ್ತೀಚೆಗೆ 'ಕ್ಯಾರವಾನ್' ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಲೇಖನವನ್ನು ಓದಿದ ಮೇಲೆ ಅವರನ್ನು ಕುರಿತು ಬರೆಯಬೇಕೆನಿಸಿತು. ●

ಮಂಡ್ಯ ಒಕ್ಕಲಿಗರ ಚುನಾವಣೆ: ಸ್ವಾಭಿ'ಮನಿ'ಗೆ ಒಲಿದ ಕುಲಬಾಂಧವರು


ನಾರಾಯಣ ಮೂರ್ತಿ


ಚೆಟ್ಟೀಗೌಡ


ಶಿವಲಿಂಗಯ್ಯ


ಬೊಮ್ಮಯ್ಯ

ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ನಿರೀಕ್ಷೆಯಂತೆ ಹಣಬಲವೇ ಮೇಲುಗೈ ಸಾಧಿಸಿದೆ. ಮಂಡ್ಯ ಜಿಲ್ಲೆಯ ಬಹುತೇಕ ಸ್ವಾಭಿಮಾನಿ ಒಕ್ಕಲಿಗರು ಸ್ವಾಭಿ'ಮನಿ'ಗೆ ಬೆಲೆ ಕೊಡುತ್ತಾರೆಂಬ ಮರ್ಮ ಅರಿತಿದ್ದ ಡಿ.ಎನ್.ಚೆಟ್ಟೀಗೌಡ, ಡಾ.ಬಿ.ಸಿ.ಬೊಮ್ಮಯ್ಯ, ಹೆಚ್.ನಾರಾಯಣ ಮೂರ್ತಿ ಹಾಗೂ ಡಾ.ಬಿ.ಶಿವಲಿಂಗಯ್ಯ ಕಾಸು ಚೆಲ್ಲಿ ನಿರ್ದೇಶಕ ಹುದ್ದೆಯ ಪೈರು ಕುಯ್ದಿದ್ದಾರೆ. ಜಿಲ್ಲೆಯ ಒಕ್ಕಲಿಗ ಬಾಂಧವರು ಜನಾಂಗದ ಅಭಿವೃದ್ಧಿಗೋಸ್ಕರ ಹಣ-ಮದ್ಯ-ಬಾಡೂಟ- ಉಡುಗೊರೆಗಳಿಗೆ ಮನಸೋಲದೆ ಉತ್ತಮ ವ್ಯಕ್ತಿಗೆ ಮಣೆ ಹಾಕುತ್ತಾರೆಂಬ ನಂಬಿಕೆಯಲ್ಲಿ ಸ್ಪರ್ಧಿಸಿದ್ದ ಬಹುತೇಕ ಅಭ್ಯರ್ಥಿಗಳು ಮೂರಂಕಿ ದಾಟದೆ ಹೀನಾಯವಾಗಿ ಸೋತಿದ್ದಾರೆ. ಮಂಡ್ಯ ಜಿಲ್ಲೆ ಈಗಲೂ ಜೆಡಿಎಸ್‌ನ ಭದ್ರಕೋಟೆ ಎಂಬ ಭ್ರಮೆಯಲ್ಲಿ ಪ್ರತ್ಯೇಕ ಸಿಂಡಿಕೇಟ್ ಮಾಡಿಕೊಂಡು ಖಾಡಕ್ಕಿಳಿದಿದ್ದ ಮಾಜಿ ಶಾಸಕ ಎಂ.ಶ್ರೀನಿವಾಸ್, ಹಾಲಿ ಎಂಎಲ್‌ಸಿ ಬಿ.ರಾಮಕೃಷ್ಣ ಚಲುವರಾಯಸ್ವಾಮಿ ಶಿಷ್ಯ ನೆಲ್ಲಿಗೆರೆ ಬಾಲು ಮಕಾಡೆ ಮಗುಚಿಕೊಂಡಿದ್ದಾರೆ. ಈ ಸಲ ಗೆದ್ದು 7ನೇ ಬಾರಿಗೆ ಒಕ್ಕಲಿಗರ ಸಂಘ ಪ್ರವೇಶಿಸುವುದಲ್ಲದೆ ಅಧ್ಯಕ್ಷನೂ ಆಗಬಹುದೆನ್ನುವ ಶ್ರೀನಿವಾಸ್ ಕನಸು ಎದುರಾಳಿಗಳ ಹಣದ ಹೊಳೆಯಲ್ಲಿ ಅದೃಸ್ಸಿಗೂ ಇಲ್ಲದಂತೆ ಕೊಚ್ಚಿಹೋಗಿದೆ.


ಚೆಟ್ಟೀಗೌಡನ 'ಮನಿ' ಮಸಲತ್ತು


ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಪ್ರಪ್ರಥಮವಾಗಿ ಕಾಂಚಾಣದ ರುಚಿ ಹತ್ತಿಸಿದ್ದೇ ನಾಗಮಂಗಲದ ಡಿ.ಎನ್.ಚೆಟ್ಟೀಗೌಡ. ಕಳೆದ ಚುನಾವಣೆಯಲ್ಲಿ ಓಟಿಗೆ ನೋಟು ಕೊಟ್ಟು ಗೆದ್ದು ಬಂದಿದ್ದ ಚೆಟ್ಟೀಗೌಡ ಈ ಬಾರಿಯೂ ಅದೇ ತಂತ್ರ ರಿಪೀಟ್ ಮಾಡಿ ಯಶ ಕಂಡಿದ್ದಾನೆ. ಕಳೆದ ಚುನಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮುಂಡಾಮೋಚಿದ ದುಡ್ಡನ್ನೆಲ್ಲ ಓಟಿಗೆ ಸಾವಿರದಂತೆ ಚೆಲ್ಲಾಡಿ ನಿರ್ದೇಶಕನಾಗಿದ್ದ ಚೆಟ್ಟೀಗೌಡ ನಂತರ ಬೆಂಗಳೂರು ಸೇರಿಕೊಂಡು ಜಿಲ್ಲೆಯ ಒಕ್ಕಲಿಗರನ್ನೇ ಮರೆತಿದ್ದ. ಆತನಿಗೆ ಮತ್ತೆ ಕುಲಬಾಂಧವರು ನೆನಪಾಗಿದ್ದು ಈ ಬಾರಿಯ ಚುನಾವಣೆಯಲ್ಲೇ. ಗೆದ್ದು ನಾಪತ್ತೆಯಾಗಿದ್ದ ಚೆಟ್ಟೀಗೌಡನಿಗೆ ಈ ಸಲ ಮತ ಹಾಕಲು ಸಾಧ್ಯವೇ? ಎಂಬ ಮಾತು ಜಿಲ್ಲೆಯಲ್ಲಿ ವ್ಯಾಪಕವಾಗಿಯೇ ಕೇಳಿಬರುತ್ತಿತ್ತು. ಇತರೆ ಅಭ್ಯರ್ಥಿಗಳು ಹಣ-ಮದ್ಯ-ಬಾಡೂಟಗಳನ್ನು ಪ್ರತಿ ಹೋಬಳಿ ಕೇಂದ್ರಗಳಲ್ಲಿ ಮಾಡುತ್ತಾ ಮತದಾರರನ್ನು ಸೆಳೆಯುತ್ತಿದ್ದಾಗಲೂ ಚೆಟ್ಟೀಗೌಡ ಮದ್ಯ-ಬಾಡೂಟ ಹಾಕುವುದಿರಲಿ, ಮತದಾರರಿಗೆ ತನ್ನ ಮುಖದರ್ಶನವನ್ನೇ ಮಾಡಿಸಿರಲಿಲ್ಲ. ಆದರೆ ಚುನಾವಣೆಗೆ ಎಂಟತ್ತು ದಿನವಿರುವಾಗ ಕೋಟಿ-ಕೋಟಿ ಹಣದ ಥೈಲಿ ಸಮೇತ ಅಖಾಡಕ್ಕೆ ಕಾಲಿಟ್ಟ ಚೆಟ್ಟೀಗೌಡ ಅಕ್ಷರಶಃ ಅಬ್ಬರಿಸತೊಡಗಿದ್ದ. ಜಿಲ್ಲೆಯ ಸುಮಾರು 28 ಸಾವಿರ ಮತದಾರರಿಗೆ ಒಂದು ಓಟಿಗೆ ಸಾವಿರ ರೂ. ರೇಟ್ ಫಿಕ್ಸ್ ಮಾಡಿ ತನ್ನ ಹೆಸರನ್ನು ಚಾಲ್ತಿಗೆ ತರತೊಡಗಿದ. 'ಚೆಟ್ಟೀಗೌಡ ನಾಗಮಂಗಲದಲ್ಲಿ ಕೊಟ್ಟಂತೆ, ಇವತ್ತು ಮದ್ದೂರಿಗೆ ಹೊಡೆದ್ನಂತೆ, ನಾಳೆ ಮಂಡ್ಯಕ್ಕೆ ಬರ್ತಾನಂತೆ' ಎಂಬ ಮಾತು ಸ್ವಾಭಿ'ಮನಿ'ಒಕ್ಕಲಿಗರಲ್ಲಿ ಮಾರ್ದನಿಸಿತ್ತು. ಅವನ ಲೆಕ್ಕಾಚಾರ ಸುಳ್ಳಾಗಲಿಲ್ಲ. ಆತ ಖರ್ಚು ಮಾಡಿದ ಅಜಮಾಸು 3 ಕೋಟಿಗೂ ಅಧಿಕ ಹಣಕ್ಕೆ ಸರಿಯಾಗಿ 16,374 ಮತಗಳು ಅವನ ಅಕೌಂಟಿಗೆ ಬಿದ್ದು ಜಿಲ್ಲೆಯಲ್ಲಿ ಮೊದಲನೇ ಸ್ಥಾನವನ್ನೇ ದಕ್ಕಿಸಿಕೊಟ್ಟಿತ್ತು.


ಬಂಡವಾಳಶಾಹಿಗಳ ಅಬ್ಬರ

ಬಹುದೊಡ್ಡ ಗುರಿಯೊಂದಿಗೆ ಕಣಕ್ಕಿಳಿದಿದ್ದ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷ ಡಾ.ಬಿ.ಶಿವಲಿಂಗಯ್ಯ ನಾಲ್ಕನೇ ಸ್ಥಾನಕ್ಕೆ ಲಗ್ಗೆ ಹಾಕಿದ್ದಾರೆ. ಎಸ್.ಬಿ.ಎಜುಕೇಷನ್ ಟ್ರಸ್ಟ್ ಮಾಲೀಕರಾಗಿ ಮಂಡ್ಯದ ಎಲ್ಲಾ ದಿಕ್ಕುಗಳಲ್ಲಿಯೂ ಶಾಲೆ-ಕಾಲೇಜುಗಳನ್ನು ತೆರೆದಿರುವ ಬಿ.ಶಿವಲಿಂಗಯ್ಯ ಒಂದು ಓಟಿಗೆ ಫಿಕ್ಸ್ ಮಾಡಿದ ರೇಟು 500 ರೂಪಾಯಿ! ಪತ್ನಿ ಜಿಲ್ಲಾ ಕಸಾಪ ಅಧ್ಯಕ್ಷೆ ಮೀರಾಶಿವಲಿಂಗಯ್ಯನವರನ್ನು ಮುಂದಿಟ್ಟುಕೊಂಡು ನಾನಾ ತಂತ್ರಗಾರಿಕೆಯನ್ನು ನಡೆಸಿ 14,026 ಮತಗಳನ್ನು ಪಡೆದು ನಾಲ್ಕನೇ ಸ್ಥಾನದಲ್ಲಿ ಠಿಕಾಯಿಸಿದ್ದಾರೆ. ಇಷ್ಟೂ ದಿನ ಜನಾಂಗದ ಬಗ್ಗೆ ಚಕಾರ ಎತ್ತದಿದ್ದ ವೈಟ್‌ಕಾಲರ್ ಶಿವಲಿಂಗಯ್ಯ ಚುನಾವಣೆ ಪ್ರಚಾರದಲ್ಲಿ ಒಕ್ಕಲಿಗರ ಅಭಿವೃದ್ಧಿಗೆ ಮಾತಿನ ಮಂಟಪವನ್ನೇ ಕಟ್ಟಿದ್ದರು. ಚೆಟ್ಟೀಗೌಡ, ನಾರಾಯಣಮೂರ್ತಿ, ಎಂ.ಶ್ರೀನಿವಾಸ್ ಸಿಂಡಿಕೇಟ್‌ನ ಅಬ್ಬರದ ಮುಂದೆ ಒಕ್ಕಲಿಗ ಬಾಂಧವರ ಅಭಿವೃದ್ಧಿ ಎಂಬ ಬೊಗಳೆ ಮಾತು ಮಂಕಾದಂತೆ ಕಂಡುಬಂದಿದ್ದರಿಂದ ಹುಷಾರಾದ ಶಿವಲಿಂಗಯ್ಯ ಒಂದು ಓಟಿಗೆ 500 ರೂ. ಹಂಚಿದ್ದರು. ತಮಾಷೆ ಎಂದರೆ ತಾನೊಬ್ಬ ಸುಸಂಸ್ಕೃತೆ, ಹಣ-ಹೆಂಡ ಹಂಚುವುದು ತಪ್ಪು ಎಂಬಿತ್ಯಾದಿಯಾಗಿ ಸಭೆ-ಸಮಾರಂಭಗಳ ವೇದಿಕೆಯಲ್ಲಿ ಕಥೆ ಹೊಡೆಯುತ್ತಿದ್ದ ಮೀರಾ ಮೇಡಂ ಪತಿದೇವರು ಓಟಿಗೆ 500 ರೂ. ಹಂಚುತ್ತಿದ್ದಾಗ ಎತ್ತ ಹೋಗಿದ್ದರೋ ಕಾಣೆ.

'ನಮ್ಮ ಕುಟುಂಬಕ್ಕೆ ರಾಜಕಾರಣದ ಆಸೆ ಇಲ್ಲ' ಎನ್ನುತ್ತಲೇ ಪತಿ ಶಿವಲಿಂಗಯ್ಯನವರನ್ನು ಚುನಾವಣೆಗೆ ಇಳಿಸಿ ಮೀರಾ ಮೇಡಂ ರಾಜಕಾರಣಕ್ಕೆ ಕಾಲಿರಿಸಿದ್ದಾರೆ.


ಎಂ. ಶ್ರೀನಿವಾಸ್


ಬಿ. ರಾಮಕೃಷ್ಣ


ನೆಲ್ಲಿಗೆರೆ ಬಾಬು

ತಾಲ್ಲೂಕು ಕಸಾಪ ಅಧ್ಯಕ್ಷರನ್ನು ಬದಲಾಯಿಸಿ ಸ್ವಜಾತಿ ಅಧ್ಯಕ್ಷರನ್ನು ಪ್ರತಿಷ್ಠಾಪಿಸಿದ್ದಲ್ಲದೆ ತಮ್ಮ ಸಂಸ್ಥೆಗಳಲ್ಲಿರುವ ಸಿಬ್ಬಂದಿ-ವಿದ್ಯಾರ್ಥಿಗಳನ್ನು ಬಳಸಿಕೊಂಡು ಪತಿ ಶಿವಲಿಂಗಯ್ಯನವರನ್ನು ಗೆಲ್ಲಿಸಿಕೊಂಡಿರುವ ಮೀರಾ ಮೇಡಂ ಇನ್ನು ಮುಂದಾದರು 'ನೈತಿಕ' ಉಪನ್ಯಾಸ ಹೊಡೆಯುವುದನ್ನು ನಿಲ್ಲಿಸುವುದೇ ಲೇಸು.

ನಾರಾಯಣಮೂರ್ತಿ ಚಮಕ್

ಕಳೆದ ಬಾರಿ ಸೋತಿದ್ದ ನಾಗಮಂಗಲದ ಹೆಚ್.ಎಂ.ನಾರಾಯಣಮೂರ್ತಿ ಈ ಬಾರಿ ಸಂಪೂರ್ಣ ಸರಂಜಾಮುಗಳನ್ನು ಸಿದ್ಧಪಡಿಸಿಕೊಂಡೇ ಕಣಕ್ಕಿಳಿದಿದ್ದ ಮಾಜಿ ಸಚಿವ ಹೆಚ್.ಟಿ.ಕೃಷ್ಣಪ್ಪನವರ ಸಹೋದರ ಮಗನಾದ ನಾರಾಯಣಮೂರ್ತಿ ಸಹಕಾರಿ ಕ್ಷೇತ್ರದಲ್ಲಿ ಮಾಡಿದ್ದ ಕೋಟ್ಯಂತರ ರೊಕ್ಕವನ್ನು ನೀರಿನಂತೆ ಹರಿಸಿ 14,824 ಮತಗಳೊಂದಿಗೆ 3ನೇ ಸ್ಥಾನ ಪಡೆದಿದ್ದಾರೆ.

ನಾಗಮಂಗಲದ ಒಕ್ಕಲಿಗ ಕುಲಬಾಂಧವರು ಚೆಟ್ಟೀಗೌಡನಂತೆಯೇ ನಾರಾಯಣಮೂರ್ತಿಯ ಕಾಸಿನ ಋಣಕ್ಕೆ ತಲೆಬಾಗಿ ಅತಿಹೆಚ್ಚು ಮತ ನೀಡಿ ನಿರ್ದೇಶಕರನ್ನಾಗಿಸಿದ್ದಾರೆ. ಅಂತಿಮ ಸುತ್ತಿನವರೆಗೂ 5ನೇ ಸ್ಥಾನದಲ್ಲಿದ್ದ ನಾರಾಯಣಮೂರ್ತಿ ನಾಗಮಂಗಲದಲ್ಲಿ 4569 ಮತ ಪಡೆದು ಗೆಲುವಿನ ಕೇಕೆ ಹಾಕಿದ್ದಾರೆ. ನಾಗಮಂಗಲದವರೇ ಆದ ಚೆಟ್ಟೀಗೌಡನಿಗೆ 5063 ಮತ, ನೆಲ್ಲಿಗೆರೆ ಬಾಲುಗೆ 4623 ಮತ ನೀಡುವ ಮೂಲಕ ನಾಗಮಂಗಲದ ಮತದಾರರು ಅಭಿಮಾನ ಮೆರೆದಿದ್ದಾರೆ. ಇಲ್ಲಿ ಬೇರೆ ಅಭ್ಯರ್ಥಿಗಳಿಗೆ ಅಷ್ಟೊಂದು ಮತ ನೀಡಿಲ್ಲ.

ಡಾ.ಬಿ.ಸಿ.ಬೊಮ್ಮಯ್ಯ ತಂತ್ರಗಾರಿಕೆ

ಕಳೆದ ಬಾರಿ ಸೋತಿದ್ದರೂ ದೂರವಾಗದೆ ಒಕ್ಕಲಿಗ ಕುಲಬಾಂಧವರಿಗೆ ಒಂದಷ್ಟು ಆರೋಗ್ಯ ಸೇವೆಗಳನ್ನು ಮಾಡಿದ್ದ ಡಾ.ಬಿ.ಸಿ.ಬೊಮ್ಮಯ್ಯನವರ ಪರವಾಗಿ ಜಿಲ್ಲೆಯಲ್ಲಿ ಆರಂಭದಿಂದಲೂ ಉತ್ತಮ ಮಾತುಗಳು ಕೇಳಿಬರುತ್ತಿದ್ದವು. ಅದೇ ಹುಮ್ಮಸ್ಸಿನಲ್ಲಿ ಮೊದಮೊದಲು ಹಣಕೊಡದೆ ಚುನಾವಣೆ ಮಾಡುವ ಹುರುಪಿನಲ್ಲಿ ಜಿಲ್ಲೆ ಸುತ್ತಿದ ಬೊಮ್ಮಯ್ಯನವರಿಗೆ ಚೆಟ್ಟೀಗೌಡ, ನಾರಾಯಣಮೂರ್ತಿ, ಬಿ.ಶಿವಲಿಂಗಯ್ಯನವರ ಓಟು ಖರೀದಿಯ ವಾ[...] ಅರ್ಥವಾಗಿತ್ತು. ಕಳೆದ ಬಾರಿ ಕಡಿಮೆ ಅಂತರದಲ್ಲಿ ಸೋ[...] ಅವರಿಗೆ ತಾನೂ ಹಣ ಹಂಚದಿದ್ದರೆ ಈ ಸಲವೂ ಸೋ[...] ಶತಸ್ಸಿದ್ಧ ಎಂಬ ದಿಗಿಲು ಶುರುವಾಗುತ್ತಿದ್ದಂತೆ [...] ಭಾಮಮ್ಮೈದ-ಕಮ್-ಅಂಬಿ ಶಿಷ್ಯ ಸಾತನೂರಿನ ಚಂ[...] ಮುಂದಾಳತ್ವದಲ್ಲಿ ಬೇಲೂರು ಸೋಮಶೇಖ[...] ಪುರುಷೋತ್ತಮ ಮೊದಲಾದವರ ಮೂಲಕ ಕೆಲವೊಂ[...] ಕಡೆ ಓಟಿಗೆ 500 ರೂ. ಹಂಚಿಸಿದ್ದರು.

ಒಕ್ಕಲಿಗ ಸಂಘದ ಚುನಾವಣೆಯಲ್ಲಿ ಹಣವೇ ಪ್ರಧಾ[...] ಪಾತ್ರ ವಹಿಸುವುದರ ಬಗ್ಗೆ ಮೊದಲಿನಿಂದಲ[...] ವಿರೋಧಿಸಿಕೊಂಡೇ ಬಂದಿದ್ದ ಡಾ.ಬೊಮ್ಮಯ್ಯ ಕ[...] ಕಡೇಗಳಿಗೆಯಲ್ಲಿ ಹಣ ಹಂಚಿಯೇ ಗೆದ್ದು ಬರಬೇಕಾದ[...] ವಿಪರ್ಯಾಸವೇ ಸರಿ. ನಾಗಮಂಗಲದ ಬೂ[...] ತೆರೆಯುವವರೆಗೂ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯ[...] ಮುನ್ನಡೆ ಕಾಯ್ದುಕೊಂಡು ಪ್ರಥಮ ಸ್ಥಾನದಲ್ಲಿದ್ದ ಬೊಮ್ಮ[...] ನಾಗಮಂಗಲದಲ್ಲಿ ಚೆಟ್ಟೀಗೌಡನ ಮನಿಪವರ್ ಮುಂ[...] 15,161 ಮತ ಪಡೆದು 2ನೇ ಸ್ಥಾನಕ್ಕೆ ತೃಪ್ತಿ ಪಟ್ಟಿದ್ದಾ[...]

ಶ್ರೀನಿವಾಸ್ ಸಿಂಡಿಕೇಟ್‌ಗೆ ಸೋಲು

7ನೇ ಬಾರಿಗೆ ಗೆದ್ದು ಒಕ್ಕಲಿಗರ ಸಂಘದ ಅಧ್ಯಕ್ಷನಾಗ[...] ಹೊರಟಿದ್ದ ಮಾಜಿ ಶಾಸಕ ಎಂ.ಶ್ರೀನಿವಾಸ್ [...] ಸಿಂಡಿಕೇಟನ್ನು ಗೆಲ್ಲಿಸಿಕೊಳ್ಳುವುದಿರಲಿ ಸ್ವತಃ ತಾ[...] ಗೆಲ್ಲಲಾಗದೆ ಸೋಲಿಗೆ ಶರಣಾಗಿದ್ದಾರೆ. ಬಿ.ರಾಮಕೃಷ್ಣ ಹಾ[...] ನೆಲ್ಲಿಗೆರೆ ಬಾಲು ಜೊತೆ ಸಿಂಡಿಕೇಟ್ ಮಾಡಿಕೊಂ[...] ಎಂ.ಶ್ರೀನಿವಾಸ್ ಇತರರಂತೆ ಹಣ ಹಂಚದಿರುವ ಏಕಮ[...] ಕಾರಣದಿಂದ ಸೋತಿದ್ದಾರೆ. ಸಂಘದ ಅಧ್ಯಕ್ಷನಾಗಲು ಜಿಲ್ಲೆ[...] ಕುಲಬಾಂಧವರು ಕೈಜೋಡಿಸುತ್ತಾರೆಂದು ನ[...] ಸರಿಯಾಗಿ ಹಣ ಹಂಚದ ಶ್ರೀನಿವಾಸ್‌ರ[...] ಮತದಾರ ಐದನೇ ಸ್ಥಾನಕ್ಕೆ ತಳ್ಳಿದ್ದಾನೆ. ಚೆಟ್ಟೀಗೌ[...] ನಾರಾಯಣಮೂರ್ತಿ, ಶಿವಲಿಂಗಯ್ಯ[...] ಮೊದಲಾದವರೆಲ್ಲ ಒಬ್ಬೊಬ್ಬರೇ 500 ರೂಪಾ[...] ಹಂಚುತ್ತಿರುವುದು ತಿಳಿದ ಮೇಲೂ ಶ್ರೀನಿವಾ[...] ಸಿಂಡಿಕೇಟ್ ತಮ್ಮ ಮೂರು ಅಭ್ಯರ್ಥಿಗಳ[...] ಸೇರಿ 500 ರೂ. ಹಂಚಲು ಹೋಗಿದ್ದು ಮ[...] ಕಡೆ ಗಳಿಗೆಯಲ್ಲಿ ಕಾಸಿಲ್ಲ ಎಂದು ಮಂಡ್ಯ ನ[...] ಕಸಬಾ ಹೋಬಳಿಗೆ ನಯಾಪೈಸೆಯನ್ನೂ [...] ಹೋದದ್ದು ಭಾರೀ ಏಟನ್ನೇ ನೀಡಿದೆ. ಜಿಲ್ಲೆ[...] 4 ಕಡೆ ಜೆಡಿಎಸ್ ಶಾಸಕರೇ ಇರುವುದರಿ[...] ಜೆಡಿಎಸ್‌ನವರೇ ಆದ ತಮಗೆ ಪ[...] ಕಾರ್ಯಕರ್ತರು ಹಾಗೂ ಕುಲಬಾಂಧವರು [...] ನೀಡುವುದು ಗ್ಯಾರಂಟಿ ಎಂಬುದು ಶ್ರೀನಿವಾ[...] ಸಿಂಡಿಕೇಟ್‌ನ ಲೆಕ್ಕಾಚಾರವಾಗಿತ್ತು. ಈ ನಿಟ್ಟಿ[...] ಚಲುವರಾಯಸ್ವಾಮಿಯೂ ಸೇರಿದಂತೆ ಎಲ್ಲಾ ಶಾಸ[...] ಶ್ರೀನಿವಾಸ್ ಸಿಂಡಿಕೇಟ್‌ಗೆ ಮತ ಕೊಡಿಸುವಲ್ಲಿ ಸಂಪೂ[...] ವಿಫಲರಾಗಿದ್ದಾರೆ. ಫಲಿತಾಂಶದ ನಂತರ 'ಏಕಾಂಗಿಯ[...] ಮತ ಕೇಳಿದ್ದರೆ ಕನಿಷ್ಠ ಪಕ್ಷ ತಾನಾದರು ಗೆಲ್ಲು[...] ಸಿಂಡಿಕೇಟ್ ಮಾಡಿಕೊಂಡು ತಪ್ಪು ಮಾಡಿದೆ' [...] ಜ್ಞಾನೋದಯ ಶ್ರೀನಿವಾಸ್‌ಗೆ ಆದಂತಿದೆ.

ಎಂ.ಶ್ರೀನಿವಾಸ್ 11,956 ಮತ ಪಡೆದು [...] ಸ್ಥಾನಕ್ಕೆ, ನೆಲ್ಲಿಗೆರೆ ಬಾಲು 9795 ಮತ ಪಡೆದು [...] ಸ್ಥಾನಕ್ಕೆ, ಡಾ.ಲೋಕೇಶ್‌ಬಾಬು 9302 ಮತ ಪ[...] 7ನೇ ಸ್ಥಾನಕ್ಕೆ, ಬಿ.ರಾಮಕೃಷ್ಣ 8451 ಮತ ಪ[...] 8ನೇ ಸ್ಥಾನಕ್ಕೆ, ಮೂಡ್ಯ ಚಂದ್ರು 8201 ಮತ ಪ[...] 9ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ.

■ ಮಂಡ್ಯ ನಾಗೇ[...]

ಒಕ್ಕಲಿಗ ಮತಬಾಂಧವರು ಆಲೋಚಿಸಬೇಕಿದೆ

ಕೋಟಿ-ಕೋಟಿ ಹಣ ಚೆಲ್ಲಿದರಷ್ಟೇ ಗೆಲುವು ಸಾಧ್ಯ ಎಂಬುದನ್ನು ಒಕ್ಕಲಿಗ ಸಂಘದ ಚುನಾವಣಾ ಫಲಿತಾಂಶ ಎತ್ತಿ ತೋರಿಸಿದೆ. ಜನಾಂಗದ ಅಭಿವೃದ್ಧಿಗಾಗಿ ಚಂಬಲಿಸಿ ಎಂದ ಒಳ್ಳೆಯ ಅಭ್ಯರ್ಥಿಗಳು ಕೂಡ ಹಣ ಹಂಚದಿದ್ದರೆ ಗೆಲ್ಲಲು ಅಸಾಧ್ಯ ಎಂಬುದನ್ನು ಫಲಿತಾಂಶ ಮನದಟ್ಟಾಗಿಸಿದೆ. ಜಿಲ್ಲೆಯ ಶೇ.80ರಷ್ಟು ಒಕ್ಕಲಿಗ ಮತದಾರರು ಹಣ ನೀಡುವ ಅಭ್ಯರ್ಥಿಗಳಿಗೇ ಮಾನ್ಯತೆ ನೀಡಿದ್ದಾರೆ. ಹಣ ಚೆಲ್ಲಿ ನಿರ್ದೇಶಕನಾದವನು ಜನಾಂಗದ ಅಭಿವೃದ್ಧಿಗೆ ದುಡಿಯುವುದಿಲ್ಲ ಎಂಬ ಸಣ್ಣ ಸತ್ಯ ಒಕ್ಕಲಿಗ ಬಾಂಧವರಿಗೆ ಎಲ್ಲಿಯವರೆಗೆ ಅರಿವಾಗುವುದಿಲ್ಲವೋ ಅಲ್ಲಿಯವರೆಗೂ ಒಕ್ಕಲಿಗ ಸಂಘದಿಂದ ಅಭಿವೃದ್ಧಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಈ ಬಗ್ಗೆ ಒಕ್ಕಲಿಗ ಬಾಂಧವರು ಆಲೋಚಿಸದಿದ್ದರೆ ಖಂಡಿತಾ ಇಡೀ ಸಮುದಾಯಕ್ಕೇ ಆಪತ್ತು ಕಾದಿದೆ.

ರಾವಳಿ: ಬುರ್ನಾಸ್ ಭಟ್ಟನ ಮತೋನ್ಮತ್ತ ಮಾತುಗಾರಿಕೆ!!








ಾವಳಿಯನ್ನು ಕೋಮು ಅಗ್ನಿಕುಂಡವಾಗಿಸಿ ಮೈ ಕಾಯಿಸಿಕೊಳ್ಳುವ ಚೆಡ್ಡಿ 'ಡಾನ್' ಕಲ್ಲಡ್ಕ ಪ್ರಭಾಕರ ಭಟ್ಟ ಮತ್ತೆ ಬಾಲ ಬಿಚ್ಚುತ್ತಿದ್ದಾನೆ. ವಿವಾರ ಬಂಟ್ವಾಳದ ಗುರುಪುರ ಎಂಬ ಕಮ್ಯುನಲಿ ಸೆನ್‌ಸೇಟಿವ್ ಲ್ಲಿ ಹಿಂದೂ ಸಂಗಮ ಎಂಬ ಕಾವಿ-ಚೆಡ್ಡಿಗಳ ಕೋಮು ಕಲಹೋತ್ಸತ್ತಿ ಈ ಸಂಘ ಪರಿವಾರದ ಸೈತಾನ ಕ್ರಿಶ್ಚಿಯನ್ ಮತ್ತು ಮುಸ್ಲಿಮರ ಯಿಗೆ ಬಂದಂತೆ ಬೊಗಳಿ ಬಹುದಿನದ ತೆವಲು ತೀರಿಸಿಕೊಂಡಿದ್ದಾನೆ. ಲೋಕಸಭೆ ಚುನಾವಣೆಯಲ್ಲಿ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಆದಂಥ ನ, ಸೋಲು ಆಗಬಾರದೆಂದು ಕೋಮು ಗಲಭೆ ಎಬ್ಬಿಸುವ ಾರಿಕೆಗೆ ಬಿದ್ದಿದ್ದಾನೆ ಭಟ್ಟ! ದುರಂತವೆಂದರೆ, ದಕ್ಷಿಣ ಕನ್ನಡ ಮತ್ತು ಜಿಲ್ಲೆಯ ನಾಲ್ಕು ಕಾಂಗ್ರೆಸ್ ಮಂತ್ರಿಗಳು ಭಟ್ಟನ ರಕ್ತ ಬೀಜಾಸುರ ಡೂ ಕಾಣದಂತಿದ್ದಾರೆ!!


ಕಲಶೋತ್ಸವ, ಗೋ-ರಕ್ಷಣೆ, ಚರ್ಚ್-ಮಸೀದಿ ದಾಳಿಗಳಂಥ ಮತಾಂಧ ತುಕ್ಕು ಹಿಡಿದಾಗ ಕಲ್ಲಡ್ಕ ಭಟ್ಟ ಕರಾವಳಿ ಹಳ್ಳಿಗಳಲ್ಲಿ ಉಂಡಾಡಿ ಬರುವ ಸ್ಕೆಚ್ ಹಾಕತೊಡಗಿದ್ದ. ಭಟ್ಟ ಅದೆಷ್ಟೇ ಹಾರಾಡಿದರೂ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವುದರಿಂದ ಮೊದಲಿನ ಅನಾಹುತ, ಮಾನ-ಪ್ರಾಣಹರಣವೇನೂ ಆಗದೆಂಬ ಭಾವನೆ ದಕ್ಷಿಣ ಕನ್ನಡ ಮತ್ತು ಉಡುಪಿ ಜನರಲ್ಲಿ ಬಂದಿತ್ತು. ಆದರಿದು ಬರೀ ಭ್ರಮೆ ಆಗಿತ್ತು; ಭಟ್ಟನ ಕೋಮು ಕ್ರೌರ್ಯಕ್ಕೆ ಕಡಿವಾಣ ಹಾಕಲು ಕರಾವಳಿಯ ಹೊಣೆಗೇಡಿ ಮಂತ್ರಿ ಚತುಷ್ಟಯರಿಂದ ಆಗಲೇ ಇಲ್ಲ. ಇಂಥದೊಂದು ಜರೂರತ್ತಿನ ಸೆಕ್ಯುಲರ್ ಆಡಳಿತ ಅವಶ್ಯಕತೆಯ ಅರಿವು ಈ ಅವಿವೇಕಿ ಮಂತ್ರಿಗಳಿಗೆ ಬರಲೇ ಇಲ್ಲ, ಈ ಜನದ್ರೋಹಿ ಮಂತ್ರಿಗಳ ಯಜಮಾನನಂತಿರುವ ಜನಾರ್ದನ ಪೂಜಾರಿಯೇ ಸಾರ್ವಜನಿಕವಾಗಿ ಯಾವ ಮುಜುಗರವೂ ಇಲ್ಲದೆ ಕಲ್ಲಡ್ಕ ಭಟ್ಟನ ಅಪ್ಪಿ ಮುದ್ದಾಡತೊಡಗಿದರು. ಕಾಂಗ್ರೆಸಿಗರ ಸಾಫ್ಟ್ ಹಿಂದೂತ್ವ ಏನಿದೆಯಲ್ಲ, ಅದು ಕಲ್ಲಡ್ಕನ ಕಡಕ್ ಅನೈತಿಕ ಪೊಲೀಸ್‌ಗಿರಿಯ ಪುಂಡಾಟ-ಪಾತಕಕ್ಕೆ ಹಿತಕರ ವಾತಾವರಣ ನಿರ್ಮಾಣ ಮಾಡಿಬಿಟ್ಟಿತು.


ಬಿಜೆಪಿ ಸರ್ಕಾರದ ದರ್ಬಾರಿನಲ್ಲಿ ಹಿಂದೂತ್ವದ ಅಂಧ ಕಾನೂನು, ಅನ್ಯಾಯ ಬಾರಿಸುತ್ತಲೇ ಕಳೆದಿದ್ದಾನೆ. ಜನ ಈತನನ್ನು ಗೆಲ್ಲಿಸಿದ್ದಕ್ಕೆ ಪಶ್ಚಾತ್ತಾಪ ಪಡುತ್ತಿದ್ದಾರೆ. ಹೀಗಾಗಿ ಆತನಿಗೆ ಕಲ್ಲಡ್ಕನ ಭಂಡ ಭಾಷಣ ಒಂದೇ ಈಗ ಬಂಡವಾಳ! ಚೆಡ್ಡಿ-ಕಾವಿ ಸಂಗಮದಲ್ಲಿದ್ದ ಮತ್ತೊಬ್ಬ ಮಹಾನುಭಾವ ಮನುವಾದಿ ಸೂಲಿಬೆಲೆ ಚಕ್ರವರ್ತಿಯಂತೂ ಸಶಸ್ತ್ರ ದಾಳಿಗಳನ್ನು ಸಾಬಿಗಳು ಮತ್ತು ಕ್ರೈಸ್ತರ ಮೇಲೆ ಮಾಡುವಂತೆ ಹಿಂದೂ ಹರಾಮಿಗಳಿಗೆ ಪ್ರಚೋದಿಸಿದ್ದಾನೆ. ತನ್ನ ವಾರಿಗೆಯ ಸಂಘ ಪರಿವಾರಿಗಳು ಒಂದಲ್ಲ ಒಂದು ಅಧಿಕಾರ ಬಿಜೆಪಿಯಲ್ಲಿ ಹಿಡಿದಿರುವುದರಿಂದ ತಲೆ ಕೆಡಿಸಿಕೊಂಡಿರುವ ಸೂಲಿಬೆಲೆ ಮುಂದೊಂದು ಅಧಿಕಾರ ಸ್ಥಾನ ಹಿಡಿಯಲೇಬೇಕೆಂಬ ಛಲದಿಂದ ಕೋಮು ಸಾಮರಸ್ಯ ಕೆಡಿಸುವ ಕುಚೋದ್ಯದ ಭಾಷಣ ಕಂಡ-ಕಂಡಲ್ಲಿ ಬಗಿಯುತ್ತಿದ್ದಾನೆ. ಆ ಕ್ಯಾಸೆಟ್ ಬಿಜೆಪಿ ಮಹಾಮಹಿರ ಎದುರು ರೀ-ಪ್ಲೇ ಮಾಡಿ 'ಲಾಭ' ಮಾಡಿಕೊಳ್ಳುವ ಜುಜುಬಿ ಆಲೋಚನೆ ಈತನದು, ಪಾಪ! ಹಾಗಾಗಿ ಎಲ್ಲಾದರೊಂದು ಕಡೆ ಕೋಮು ಬೆಂಕಿ ಹಚ್ಚಿದರೇ ಅದೇ ತನಗೆ 'ಮೆರಿಟ್' ಆಗುತ್ತದೆಂಬ ಹವಣಿಕೆ ಸೂಲಿಬೆಲೆಯದು.

















ಪುಂಡರಿಗೆ ಅನೈತಿಕ ಪೊಲೀಸ್‌ಗಿರಿಯ ದೀಕ್ಷೆ ನೀಡಿದ್ದ ಈ ಪೋಲಿಗಳಲ್ಲಿ ತೆವಲಿನ ಆಸೆ ಹುಟ್ಟಿಸಿತ್ತು ಆರೆಸ್ಸೆಸ್ ಗ್ಯಾಂಗ್. ಅದೆಂದರೆ, ಶೀಲ-ೋಧಿಸುವ ನೆಪದಲ್ಲಿ ಅಸಹಾಯಕ ಹುಡುಗಿಯರ ಮೈ-ಕೈ ಮುಟ್ಟಿ ನೈತಿಕ' ಅತ್ಯಾಚಾರ ಮಾಡೋದಾಗಿತ್ತು. ಈ ಅನೈತಿಕ ಪಡೆಗಳ ವಿಂದ ಕಂಗಾಲಾಗಿದ್ದ ಕರಾವಳಿಯ ಜನರು ಕಳೆದ ವಿಧಾನಸಭೆ ದೆಯಲ್ಲಿ ಬಿಜೆಪಿ ಸೂತ್ರಧಾರ ಕಲ್ಲಡ್ಕ ಭಟ್ಟನ ಮುಖ-ಮೂತಿ ನೋಡದೆ ಯೂಲೆಗೆ ದಬ್ಬಿದ್ದರು.

ಮುಖಭಂಗಿತನಾಗಿ ಬಿಲ ಸೇರಿದ್ದ ಭಟ್ಟ ಬುಸುಗುಡುತ್ತಲೇ ಇದ್ದು; ಿಕ ಅಲ್ಪಸಂಖ್ಯಾತರ ಮೇಲೆ ಚೆಡ್ಡಿ ಸೈನ್ಯ ಛೂ-ಬಿಟ್ಟು ಚಲಾವಣೆಗೆ ಜಾರಿ ಅಡ್ಡೆಗಳಂತಾಗಿದ್ದ ಪೊಲೀಸ್ ಠಾಣೆಗಳು ಕಾಂಗ್ರೆಸ್ ಆಡಳಿತದಲ್ಲಿ ಯಥಾವತ್ ಮುಂದುವರಿದವು! ವೆಂಕಟೇಶ್ ಪ್ರಸನ್ನ, ವಿನಯ್ ಗಾಂವ್ಕರ್... ಮುಂತಾದ ಕಲ್ಲಡ್ಕಭಟ್ಟನ ಆರ್ಡರ್ಲಿಗಳು ಜಿಲ್ಲೆಯಲ್ಲೇ ಮತ್ತಷ್ಟು ಪೊಗದಸ್ತಾಗಿ ಬೇರು ಬಿಟ್ಟರು. ಕೇಸರೀಕರಣದ ಆಡಳಿತಶೈಲಿ ಬದಲಾಗಲೇ ಇಲ್ಲ. ಹಾಗಾಗಿ ಅನೈತಿಕ ಪೊಲೀಸ್ ಪಾಪಿಗಳ ಹಲ್ಲೆ-ಮಾನಹಾನಿ-ಸುಲಿಗೆ-ಅವಮಾನದಿಂದ ಹೈರಾಣಾಗುವ ಮುಸ್ಲಿಮ್-ಕ್ರಿಶ್ಚಿಯನ್ ಹುಡುಗರ ಮತ್ತು ಹಿಂದೂ ಹುಡುಗಿಯರ ಸಂಖ್ಯೆಯೇನೂ ಕಡಿಮೆಯಾಗಲಿಲ್ಲ.

ರಮಾನಾಥ ರೈ-ಸೊರಕೆ-ಖಾದರ್-'ಅಭಯ' ಜೈನ್‌ಗಳ ಉದಾಸೀನದಿಂದ ಜಿಲ್ಲಾಡಳಿತ ಎಂಬುದು ಬಿಜೆಪಿ ಪಾರುಪತ್ಯದ ಹ್ಯಾಂಗೋವರ್‌ನಲ್ಲೇ ಉಳಿದು ಬಿಟ್ಟದೆ! ಅಧಿಕಾರಶಾಹಿ ಕೇಸರೀಕರಣ-ಚೆಡ್ಡೀಕರಣ ಕರಾಮತ್ತು ನಾಜೂಕಾಗಿ ನಡೆಸುತ್ತಲೇ ಇದೆ. ಸೋಕಾಲ್ಡ್ ಸೆಕ್ಯುಲರ್ಸ್ ಕಾಂಗ್ರೆಸ್ ಅಧಿಕಾರಕ್ಕೇರಿ ವರ್ಷ ಮುಕ್ಕಾಲು ಕಳೆದರೂ ಅಸಲಿ ಜಾತ್ಯತೀತರು-ಅಲ್ಪಸಂಖ್ಯಾತರು ನೆಮ್ಮದಿಯ ನಿಟ್ಟುಸಿರು ಬಿಡಲಾಗುತ್ತಿಲ್ಲ. ಅಪಮಾನ-ಅಪನಂಬಿಕೆ-ಆತಂಕ ಕರಾವಳಿಯಲ್ಲಿ ಹೊಗೆಯಾಡಿಸುತ್ತಲೇ ಇದೆ. ಜಿಲ್ಲೆಯಲ್ಲಿ ತುಂಬಿಕೊಂಡಿರುವ ಚೆಡ್ಡಿ-ಕಾವಿ ಬುದ್ಧಿಯ ಅಧಿಕಾರಿಗಳಿಂದಾಗಿ ಅನೈತಿಕ ಪೊಲೀಸರ ಹಾವಳಿ ಹೆಚ್ಚಾಗಿದೆ. ಇದೆಲ್ಲ ಗೊತ್ತಿದ್ದೂ ಉಡುಪಿ ಹಾಗೂ ದಕ್ಷಿಣ ಕನ್ನಡ ಮಂತ್ರಿ ಮಾನ್ಯರು ಹಾಗೇ ಸುಮ್ಮನಿದ್ದಾರೆ...

ಕಾಂಗ್ರೆಸ್‌ನ ಮತಿಗೇಡಿ ಆಡಳಿತಗಾರರ 'ಮೃದು ಹಿಂದೂತ್ವ'ದ ಹಿಕಮತ್ತಿನಿಂದಾಗಿ ಕರಾವಳಿ ಕೋಮು ಕೀಚಕ ಕಲ್ಲಡ್ಕ ಭಟ್ಟನ ಆಡಂಬೋಲವಾಗೇ ಉಳಿದುಕೊಂಡಿದೆ ಎಂಬುದಕ್ಕೆ ಮೊನ್ನೆ ರವಿವಾರ ಇಳಿಸಂಜೆ ಹೊತ್ತಲ್ಲಿ ಗುರುಪುರದಲ್ಲಿ ನಡೆದ ಹಿಂದೂ ಹರಾಮಿ ಹಿರೇಮಣಿಗಳ ಸಂಗಮ ಒಂದು ನಿಚ್ಚಳ ನಿದರ್ಶನದಂತಿದೆ. ಕರಾವಳಿಯ ನೆಮ್ಮದಿ ಕೆಡಿಸುವ ರಹಸ್ಯ ಕಾರ್ಯಸೂಚಿಯ ಈ ಅನಾಹುತಕಾರಿ ಪ್ರಹಸನದಲ್ಲಿ ಆರೆಸ್ಸೆಸ್ ರಿಂಗ್‌ಮಾಸ್ಟರ್ ಕಲ್ಲಡ್ಕ ಭಟ್ಟರು ಪ್ರಧಾನ ಪಾತಕಿ ಪಾತ್ರ! ಆತನ ಪಾದುಕಾ ಪೂಜಾರಿ ನಳಿನ್‌ಕುಮಾರ್ ಕಟೀಲ್ ಎಂಬ ಹೇತ್ಲಾಂಡಿ ಸಂಸದನದು ಭಟ್ಟಂಗಿ ವೇಷ. ಸಂಘಪರಿವಾರದ 'ಖಾಲಿ ಡಬ್ಬಿ' ಎಂದೇ ಕುಖ್ಯಾತನಾಗಿರುವ ಆವಾಜುಗಾರ ಸೂಲಿಬೆಲೆ ಚಕ್ರವರ್ತಿಯದು ಕತ್ತಿವರಸೆ ನಟನೆ.

ಗುರುಪುರದ ವಜ್ರದೇಹಿ ಮಠದ ಆವರಣದಲ್ಲಿ ಆಯೋಜಿಸಲಾಗಿದ್ದ ಅನ್ಯ ಧರ್ಮವನ್ನು ಬೈದು ಬೊಬ್ಬೆ ಹೊಡೆಯುವ ಸಂಗಮದಲ್ಲಿ ಬರೋಬ್ಬರಿ ಅರ್ಧ ಗಂಟೆ ಗಂಟಲು ಹರಿದುಕೊಂಡ ಕಲ್ಲಡ್ಕ ಭಟ್ಟ. ಅಲ್ಪಸಂಖ್ಯಾತರ ಅವಮಾನಿಸಿ, ಅಪಹಾಸ್ಯ ಮಾಡಿ, ಅಶ್ಲೀಲ-ಅಶುದ್ಧ ಪ್ರಾಸ ಬಳಸಿ ಕೇಕೆ ಹಾಕಿದ್ದಾನೆ! ತನಗೆ ಕಾಂಗ್ರೆಸ್‌ನ ಜಿಲ್ಲಾ ಮಂತ್ರಿಗಳದ್ದಾಗಲಿ, ಆ ಸರ್ಕಾರದ್ದಾಗಲಿ ಕೇರ್ ಇಲ್ಲ ಎಂದು ಪರೋಕ್ಷವಾಗಿ ತೋರಿಸಿಕೊಂಡು ಹಿಂದೂ ಯುವಕರ ಕೆರಳಿಸುವ ಪ್ರಯತ್ನ ಮಾಡಿದ್ದಾನೆ. ಹೇಳಿಕೇಳಿ ಗುರುಪುರ-ಕೈಕಂಬ ಮುಸ್ಲಿಮ್ ಬಾಹುಳ್ಯ ಏರಿಯಾ. ಅಲ್ಲಿ ನಿಂತು ಮುಸ್ಲಿಮರ ಬೈದರೆ ಖಂಡಿತ ಕೋಮು ಸಂಘರ್ಷವಾಗುತ್ತದೆ. ತನ್ಮೂಲಕ ಮುಂಬರುವ ಎಲೆಕ್ಷನ್‌ನಲ್ಲಿ ಬಿಜೆಪಿಗೆ ಅನುಕೂಲ ವಾಗುತ್ತದೆ ಎಂಬ ಲೆಕ್ಕಾಚಾರ ಭಟ್ಟನದು. ಭಟ್ಟ ಕ್ರಿಶ್ಚಿಯನ್-ಮುಸ್ಲಿಮ್ ಮಹಿಳೆಯ ರನ್ನೂ ಅಶ್ಲೀಲವಾಗಿ ಮೂದಲಿಸಿದಾಗ, ಆ ಧರ್ಮಗಳ ಆಚಾರ-ವಿಚಾರ-ಧರ್ಮಗುರುಗಳ ಬಗ್ಗೆ ಕೊಳಕಾಗಿ ಭಾಷಣ ಬಿಗಿದಾಗ ಕರ್ಮಗೇಡಿ ಎಂಪಿ ಕಟೀಲ್ ಚಪ್ಪಾಳೆ ಬಾರಿಸುತ್ತ ಗುರುಗಳ ಆಲಾಪಕ್ಕೆ ಪಕ್ಕ ಸಂಗೀತ ಒದಗಿಸುತ್ತಿದ್ದ!

ಮಾನಗೇಡಿ ಕಟೀಲ್ ಈ ನಾಲ್ಕೂವರೆ ವರ್ಷ ಎಂಪಿಯಾಗಿ 'ಪಿಟೀಲು'

ಒಟ್ಟಿನಲ್ಲಿ ಕರಾವಳಿಯಲ್ಲಿ ಅನೈತಿಕ ಪೊಲೀಸ್ ಪಡೆಯ ಡೈರೆಕ್ಟರ್ ಜನರಲ್ ಕಲ್ಲಡ್ಕ ಭಟ್ಟ ಲೋಕಸಭೆ ಎಲೆಕ್ಷನ್‌ಗೆ ಭರ್ಜರಿ ತಯಾರಿ ನಡೆಸಿದ್ದಾನೆ. ಇದು ಅಸಲೀ ಪೊಲೀಸರಿಗೆ ಮತ್ತು ಜಿಲ್ಲಾಡಳಿತಕ್ಕೆ ಗೊತ್ತಿಲ್ಲವಾ? ಗುಪ್ತಚರ ದಳ ಏನು ಮಾಡುತ್ತಿದೆ? ಸೆಕ್ಯುಲರ್ ಸಿದ್ದು ಕರಾವಳಿ ಭಾಗದ ತನ್ನ ನಿದ್ದಂಡಿ ಮಂತ್ರಿಗಳಿಗೆ ಅಂಕುಶವಿಟ್ಟು ಎಬ್ಬಿಸುವುದು ಯಾವಾಗ? ಕೇಸರಿ ಆಡಳಿತದ ಕರಿನೆರಳಲ್ಲೇ ಇರುವ ಕರಾವಳಿಗರಿಗೆ ಮುಕ್ತಿ ಎಂದು?

ಇದು ಭಯ ಬಿದ್ದಿರುವ ಕರಾವಳಿಗರ ಪ್ರಶ್ನೆ!!

■ ಶುದ್ದೋಧನ

...ಟ್ಟ ಬೊಗಳಿದ್ದೇನು?

ಂದೂಗಳೇ, ನಿಮ್ಮ ಮಗಳನ್ನು ಬ್ಯಾರಿ (ಮುಸ್ಲಿಮ್) ಹುಡುಗರೊಂದಿಗೆ ಬಿಡಬೇಡಿ. ಅವರೊಂದಿಗೆ ಮಾತಾಡಿದಳೆಂದರೆ, ಅವಳು ಹೋದ !

ಬ್ಯಾರಿ ಹುಡುಗರು ಸೆಂಟ್ರಲ್ ಮಾರ್ಕೆಟ್‌ನಲ್ಲಿ ಕೂಲಿ ಮಾಡುತ್ತಾರೆ; ಸೆಂಟ್ ಹೊಡೆದುಕೊಂಡು ಹಿಂದೂ ಹುಡುಗೀರ ಪಕ್ಕ ಬಂದು ಇಂಥ ಬ್ಯಾರಿ ಹುಡುಗರ ಜತೆ ನಿಮ್ಮ ಮಗಳು ಮಾತಾಡುವಂತಿಲ್ಲ. ಮೂಢನಂಬಿಕೆ ನಿಷೇಧ ಕಾನೂನು ತರುತ್ತಿದ್ದಾರೆ, ಮಾರಾಯ್ರೆ... ನಮ್ಮ ಲ್ಲಿ ಮೂಢನಂಬಿಕೆಯೇ ಇಲ್ಲ. ಇದ್ದರೆ ಅದು ಬ್ಯಾರಿಗಳಲ್ಲಿ. ಬುರ್ಖಾ ಿ, ಸುನ್ನತ್ ಮಾಡೋದು ಮೂಢನಂಬಿಕೆ ಅಲ್ವಾ? ಅವರದು (ಸುನ್ನತ್) ಹೋಗಿವೆ ಮಾರಾಯ್ರೆ... ಅದಕ್ಕೇ ಅವರು 'ಅಂಗವಿಕಲರು'. ಅವ್ರಿಗೆ ವಿಶೇಷ ಸೌಲಭ್ಯ... ಚಿಕ್ಕ ಮಕ್ಕಳ ತಂದು ಕತ್ತರಿಸುತ್ತಾರಲ್ಲ ತ್ಯಾಚಾರ ಅಲ್ವಾ...?

ಬ್ಯಾರಿಗಳು ಕಚಡಾ ಜನಗಳು... ಇಂಥವರ ಬೆಂಬಲಿಸಿದ್ದೇವಲ್ಲಾ! ಲ್ಲಿ ಕೆಲವರು ನೇರ ಬ್ಯಾರಿಗಳು; ಕೆಲವರು ಅರೆ ಬ್ಯಾರಿಗಳು... ನಡೆಯೋದೆಲ್ಲ ಆ ಯು.ಟಿ. ಖಾದರ್‌ನ ಕ್ಷೇತ್ರದಲ್ಲಿ... ಇಂಥವರನ್ನು ೂತದ ಎದುರು ನಿಲ್ಲಿಸ್ತೇವೆ... ಇವರಿಗೆ ನಂಬಿಕೆ ಇದೆಯಾ...? ಗೌರವ ಹೋಗುವುದಿಲ್ಲವಾ?

ಶ್ಚಿಯನ್ ಶಾಲೆಗೆ ಹೋಗುವ ಹಿಂದೂ ವಿದ್ಯಾರ್ಥಿಗಳು ನಮ್ಮ 'ಫಾದರ್ ಇದ್ದಾನೆ' ಅಂತಾರೆ. ನಮಗೆ (ಹಿಂದೂಗಳಿಗೆ) ಫಾದರ್ ಒಬ್ಬನೇ. ತಾಯಿ ಬೇಕಿದ್ದರೆ ಹತ್ತು ಇರಬಹುದು. ಫಾದರ್ ಒಬ್ಬನೇ. ಅವರಿಗೆ (ಕ್ರಿಶ್ಚಿಯನ್ನರಿಗೆ) ಹಾಗಲ್ಲ... ಆ ಫಾದರ್‌ನ ಂದು ಕರೆದರೆ ಸಾಕು...

ರವಿಲ್ಲದ ನೀಚ ನಾಲಗೆಯ ಭಟ್ಟನ ಈ ಅಪದ್ಧ ಕೇಳಿ ತಲೆ ಬ್ಬ ಆತನ ಮುಸುಡಿಗೇನಾದರೂ ಪವಿತ್ರ 'ಗೋಮಯ' ತಂದು ನಾರು ಹೋಗೆ? ಜಿಲ್ಲಾಡಳಿತ ತಾನೆ? ಕಾಂಗ್ರೆಸ್‌ನ ಕಪಟಿ ಮಂತ್ರಿಗಳು ಭಟ್ಟನ ಬಾಲ ಕಟ್ ಮಾಡಲು ಬಿದ್ದು ಸರ್ಕಾರಕ್ಕೆ ಇರುವ ಭಯವಾದರೂ ಭಟ್ಟನಲ್ಲಿ ಕೆಟ್ಟ ಭಟ್ಟ-ಸೊಟ್ಟ ಸರ್ಕಾರದ ನಡುವೆ ಸಿಕ್ಕಿ ಬಿದ್ದಿರುವ ದ ದುರಂತ!!

ಕೂಗು ಮಾರಿ ಮೇಲೆ ಕೇಸು!!

ಸಂಘ ಪರಿವಾರದ ಕೂಗು ಮಾರಿ ಕಲ್ಲಡ್ಕ ಭಟ್ಟ ಮೊನ್ನೆ ರವಿವಾರ ಬಂಟ್ವಾಳ ತಾಲ್ಲೂಕಿನ ಗುರುಪುರ ಎಂಬಲ್ಲಿ ನಡೆದ ಹಿಂದೂ ಸಮಾವೇಶದಲ್ಲಿ ಮುಸ್ಲಿಮ್‌ರ ವಿರುದ್ಧ ಅವಹೇಳನಕಾರಿಯಾಗಿ ಮತ್ತು ಪ್ರಚೋದನಕಾರಿಯಾಗಿ ಭಾಷಣ ಮಾಡಿದ್ದಾನೆಂದು ಬಜ್ಪೆ ಪೊಲೀಸ್ ಠಾಣೆಯಲ್ಲಿ ಕೇಸೊಂದು ದಾಖಲಿಸಲಾಗಿದೆ. ಗುರುಪುರದ ಮಹ್ಮದ್ ಉಸ್ಮಾನ್-ಹಿಂದೂ ಸಂಗಮದಲ್ಲಿ ಸಮುದಾಯಗಳ ಮಧ್ಯೆ ದ್ವೇಷ ಹುಟ್ಟಿಸುವಂಥ ಮತ್ತು ಸಮಾಜದ ಶಾಂತಿ ಕೆಡಿಸುವಂಥ ಭಾಷಣ ಭಟ್ಟ ಬಿಗಿದಿದ್ದಾನೆಂದು ದೂರು ಕೊಟ್ಟಿದ್ದಾರೆ. ಮುಸ್ಲಿಮರ ಧಾರ್ಮಿಕ ವಿಚಾರಗಳನ್ನು ಸಾರ್ವಜನಿಕವಾಗಿ ಭಟ್ಟ ಅವಹೇಳನ ಮಾಡಿದರೆ; ನಮೋ ಬ್ರಿಗೇಡ್‌ನ ಚಕ್ರವರ್ತಿ ಸೂಲಿಬೆಲೆ ಶಸ್ತ್ರ ಹಿಡಿದು ಹಿಂಸೆಗಿಳಿವಂತೆ ಪ್ರಚೋದಿಸಿದ್ದಾನೆಂದು ದೂರಿನಲ್ಲಿ ಹೇಳಲಾಗಿದೆ.



ಭಟ್ಟನ ವಿರುದ್ಧ ಬಜ್ಪೆ ಪೊಲೀಸರೇನೋ ಸೆಕ್ಷನ್ 153(ಎ) ಮತ್ತು 295(ಎ) ಪ್ರಕಾರ ಕೇಸು ರಿಜಿಸ್ಟರ್ ಮಾಡಿದ್ದಾರೆ. ಆದರೆ ಭಟ್ಟನ ಬಂಧನವಾಗುವುದಾ? ಆತನಿಗೆ ಭಾರತದ ಸಂವಿಧಾನದ ಧರ್ಮ ಸಹಿಷ್ಣುತೆ ಕಾನೂನು ಕಲಿಸೀತಾ? ಎಂಬುದೇ ಈಗ ಎದ್ದಿರುವ ಪ್ರಶ್ನೆ. ಇಂಥ ಸಾಧ್ಯತೆ ತೀರಾ ಕಡಿಮೆ. ಬಿಜೆಪಿ ಸರ್ಕಾರ ಇದ್ದಾಗ ಇದೇ ಭಟ್ಟ ಉಪ್ಪಿನಂಗಡಿಯಲ್ಲಿ ಇದಕ್ಕಿಂತಲೂ ಗಬ್ಬುನಾಥದ ಭಾಷಣ ಮಾಡಿದ್ದ. ಆಗಲೂ ಆತನ ಮೇಲೆ ಎಫ್‌ಐಆರ್ ಆಗಿತ್ತು. ಆರೋಪಿ ಅಂದಿನ ಗೃಹಮಂತ್ರಿ ಅಶೋಕ್, ಮಂಗಳೂರು ಪೊಲೀಸ್ ಕಮೀಷನರ್ ಸೀಮಂತ್‌ಕುಮಾರ್ ಕಂಕುಳಲ್ಲೇ ಕುಂತಿರುತ್ತಿದ್ದ. ಆದರೂ ಆತನನ್ನು ಕಂಬಿ ಹಿಂದೆ ದಬ್ಬುವ ಧೈರ್ಯ ಯಾರೂ ಮಾಡಿರಲಿಲ್ಲ.

ಈಗ ಕಾಂಗ್ರೆಸ್ ಸರ್ಕಾರವೇನೂ ಇದೆ. ಆದರೆ ಕಾಂಗ್ರೆಸ್‌ನ ವಯೋವೃದ್ಧ ಸೋಕಾಲ್ಡ್ ಸೆಕ್ಯುಲರ್ ಲೀಡರ್ ಶ್ರೀಮಾನ್ ಬಿಜೆಪಿ (ಬಿ. ಜನಾರ್ದನ್ ಪೂಜಾರಿ) ಕ್ರಿಮಿನಲ್ ಭಟ್ಟನ ಖಾಸಾ ಆದ್ಮಿಯಾಗಿದ್ದಾರೆ. ಜಿಲ್ಲಾ ಮಂತ್ರಿಗಳಾದ ರೈ-ಸೊರಕೆ-'ಭಯ' ಜೈನ್‌ಗಳು ಅದ್ಯಾಕೋ ಭಟ್ಟನ ಮರ್ಜಿಯಲ್ಲಿರುವಂತೆ ಆಡುತ್ತಿದ್ದಾರೆ. ಜಗಳ ಗಂಟ ಭಟ್ಟನನ್ನು ಕಾನೂನಿನ ಕುಣಿಕೆಗೆ ಸಿಲುಕಿಸಲು ಸಿಕ್ಕಿರುವ ಈ ಅವಕಾಶ ಕಾಂಗ್ರೆಸಿಗರು ತಪ್ಪಿಸಿಕೊಂಡರೆ, ಕರಾವಳಿಗರು ಆ ಪಕ್ಷಕ್ಕೆ ಲೋಕಸಭೆ ಎಲೆಕ್ಷನ್‌ನಲ್ಲಿ ಪಾಠ ಕಲಿಸಿಯಾರು!



ನಾ.ಡಿಸೋಜಾರ ಜನಪರ ಕಾಳಜಿಯೂ, ಸಮ್ಮೇಳನದ ಗೊಂದಲವೂ...

ಪುಟ್ಟ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಅಖಿಲ ಭಾರತ 80ನೇ ಕನ್ನಡ ಸಮ್ಮೇಳನ ಹಲವು ಗೊಂದಲಗಳು ಹಾಗೂ ವಿವಾದದಿಂದ ಮುಕ್ತಾಯವಾಯಿತು. ಮಡಿಕೇರಿಯ ಜನಸಂಖ್ಯೆ 40,000. ಅದಕ್ಕಿಂತ ಹೆಚ್ಚು ಜನ ಇಲ್ಲಿಗೆ ಸಮ್ಮೇಳನಕ್ಕಾಗಿ ಆಗಮಿಸಿದ್ದು ಅದನ್ನು ತಡೆದುಕೊಳ್ಳುವ ಶಕ್ತಿ ಮಡಿಕೇರಿಗೆ ಇಲ್ಲ, ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಿಲ್ಲದ ಪ್ರದೇಶವಿದು. ಇದ್ದ ಶಾಲೆಕಾಲೇಜುಗಳಲ್ಲಿ ಕನಿಷ್ಠ ಸೌಕರ್ಯಗಳನ್ನು ನೀಡಿ ಅತಿಥಿಗಳನ್ನು ಉಳಿಸಿಕೊಳ್ಳಲಾಗಿತ್ತು. ಇದು ತಿಳಿದಿದ್ದರೂ ಪ್ರಕೃತಿ ಸೌಂದರ್ಯದ ಬೀಡನ್ನು ಸಾಹಿತ್ಯ ಸಮ್ಮೇಳನದ ಹೆಸರಲ್ಲಿ ನೋಡಲು ಜನಸಾಗರವೇ ಮಡಿಕೇರಿಗೆ ಹರಿದುಬಂದಿತ್ತು.

ಸಮ್ಮೇಳನ ಕೊನೆಗೂ ಅಕ್ಷರಜಾತ್ರೆ ಆಗಲೇ ಇಲ್ಲ, ಜನ ಮರುಳೋ ಜಾತ್ರೆ ಮರುಳೋ ಎನ್ನುವಂತೆ ಅದು ಜನಜಾತ್ರೆಯಾಗಿತ್ತು, ಯಾವುದೇ ಗೋಷ್ಠಿಯಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ ಕಂಡುಬರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಯಕ್ಕೆ ಸರಿಯಾಗಿ ಆಗಮಿಸಿದ್ದು ವಿಶೇಷವಾಗಿತ್ತು, ಕೊಡಗಿನಲ್ಲಿ ಎದ್ದಿರುವ ಪ್ರತ್ಯೇಕತೆ ಹಾಗೂ ಸ್ವಾಯತ್ತತೆ ಕೂಗಿಗೆ ಉತ್ತರವಾಗಿ ಕೂಡಿಬಾಳುವುದರಲ್ಲಿಯೇ ಸ್ವರ್ಗಸುಖವಿದೆಯೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನವಿರಾಗಿ ಹೇಳಿದರು. ಸಾಹಿತ್ಯ ಸಮಾರಂಭದಲ್ಲಿ ರಾಜಕಾರಣಿಗಳ ಪಾತ್ರ ಗೌಣ ಎಂದು ಹೇಳಿದ ಅವರು ಅದರಂತೆ ದೀರ್ಘ ಭಾಷಣವನ್ನು ಮಾಡದೆ ಸಾಹಿತಿಗಳಿಗೆ ಹೆಚ್ಚಿನ ಅವಕಾಶ ನೀಡಿದರು. ಅಲ್ಲದೆ ಬೆಳಗಾವಿಯಲ್ಲಿ ಎಂ.ಇ.ಎಸ್. ಶಾಸಕರ ಪುಂಡಾಟವನ್ನು ಸಹಿಸುವುದಿಲ್ಲ





ಎಂಬ ಎಚ್ಚರಿಕೆಯ ಜೊತೆಯಲ್ಲಿ ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ಪಡೆಯುವುದು ಒಳಿತು, ಆದರೆ ಯಾವುದೇ ಭಾಷೆಯನ್ನು ಒಂದು ಮಾಧ್ಯಮವಾಗಿ ಕಲಿಯುವುದರಲ್ಲಿ ತಪ್ಪಿಲ್ಲ ಎಂದು ಹೇಳುವ ಮೂಲಕ ಸರಕಾರ ಕನ್ನಡದ ಪರವಾಗಿದೆ ಎಂಬ ಸಂದೇಶವನ್ನು ರವಾನಿಸಿದರು.

ಸಮ್ಮೇಳನದಲ್ಲಿ ಸೌಮ್ಯ ಸ್ವಭಾವದ ಸಮ್ಮೇಳನಾಧ್ಯಕ್ಷ ನಾ.ಡಿಸೋಜ ಹಲವು ಅವಮಾನಗಳನ್ನು ಸಾಹಿತ್ಯ ಪರಿಷತ್ತಿನಿಂದಲೂ, ಸಾರ್ವಜನಿಕರಿಂದಲೂ ಅನುಭವಿಸಬೇಕಾಗಿ ಬಂದದ್ದು ಒಂದು ವಿಷಾದಕರ ವಿಚಾರವಾಗಿತ್ತು.

ರಾಜ್ಯ ಸಾಹಿತ್ಯ ಪರಿಷತ್ತಾಗಲೀ, ಕೊಡಗು ಜಿಲ್ಲಾ ಸಾಹಿತ್ಯ ಪರಿಷತ್ತಿನ ಘಟಕವಾಗಲೀ ಈ ಸಮ್ಮೇಳನವನ್ನು ಏತಕ್ಕಾಗಿ ನಡೆಸುತ್ತಿದ್ದೇವೆ ಎಂಬುದರ ಕಲ್ಪನೆ ಇಟ್ಟುಕೊಂಡಂತೆ ಕಾಣಲೇ ಇಲ್ಲ, ಸಮ್ಮೇಳನ ಮುಗಿದರೆ ಸಾಕು ಎಂಬ ಧಾವಂತ ಅವರಲ್ಲಿ ಕಂಡುಬಂತು. ಒಂದು ಉತ್ತಮವಾದ ಮತ್ತು ಯೋಗ್ಯವಾದ ಸಮ್ಮೇಳನ ನಡೆಸಬೇಕು ಎಂಬ ಮನೋಭಾವ ಅವರಲ್ಲಿ ಕಾಣಲೇ ಇಲ್ಲ.

ಆರಂಭದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ತಿಕ್ಕಲು ಸ್ವಭಾವದ ಅರೆಬರೆ ಮಾಹಿತಿಯುಳ್ಳ ಅಡ್ಡಂಡ ಕಾರ್ಯಪ್ಪ ಹಿಂದಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಕೋ.ಚೆನ್ನಬಸಪ್ಪ ಕೊಡವರನ್ನು ತನ್ನ ಕೃತಿ 'ಟೀಪೂ ಸುಲ್ತಾನ'ದಲ್ಲಿ ಅವಮಾನಿಸಿದ್ದಾರೆ ಎಂದು ಕ್ಯಾತೆ ತೆಗೆದು ಅವರನ್ನು ಸಮ್ಮೇಳನದಲ್ಲಿ ಭಾಗವಹಿಸಲು ಬಿಡುವುದಿಲ್ಲ ಎಂದು ಹೇಳಿ ಗೊಂದಲವೆಬ್ಬಿಸಿದರು. ಕೋ.ಚೆ. ಕ್ಷಮೆ ಯಾಚಿಸಬೇಕು ಎಂದು ಪಟ್ಟು ಹಿಡಿದರು. ಅಡ್ಡಂಡ ಕಾರ್ಯಪ್ಪ ಹೇಳಿಕೇಳಿ ಚೆಡ್ಡಿ ವ್ಯಕ್ತಿ, ಹಾಗಾಗಿ ಆತನಿಗೆ ಚೆಡ್ಡಿಗಳು ಬೆಂಬಲ ನೀಡಿದರು. ಕೋ.ಚೆ. ಟಿಪ್ಪುವನ್ನು ವೈಭವೀಕರಿಸಿದ್ದಾರೆ ಎಂದು ಹೇಳಿ ಟಿಪ್ಪು ವೈಭವೀಕರಣ ವಿರೋಧಿ ಸಮಿತಿಯೆಂದು ದಿಢೀರ್ ತಂಡವೊಂದನ್ನು ರಚಿಸಿಕೊಂಡು ಪ್ರತಿಭಟನೆಗೆ ನಿಂತರು.

ಅದರ ವಿರುದ್ಧ ರಾಜ್ಯ ಮತ್ತು ಜಿಲ್ಲೆಯ ಪ್ರಗತಿಪರರು ಮಾತನಾಡಬೇಕಾಗಿತ್ತು, ಅಷ್ಟರಲ್ಲಿ ಟಿಪ್ಪು ಮುಸಲ್ಮಾನರ ಆಸ್ತಿ ಎನ್ನುವಂತೆ ಎಸ್.ಡಿ.ಪಿ.ಐ. ಸೇರಿ ಹಲವು ಮುಸ್ಲಿಮ್ ಸಂಘಟನೆಗಳು ಪ್ರತಿಭಟನೆಗೆ ಇಳಿದವು. ಇವರ ಈ ವರ್ತನೆ ಕೊಡಗು ಜಿಲ್ಲೆಯ ಪ್ರಗತಿಪರರಿಗೆ ಇರಿಸುಮುರಿಸು ಉಂಟುಮಾಡಿತು. ಹಾಗಾಗಿ ಕೋ.ಚೆ. ಏನು ಹೇಳಿದ್ದಾರೆ ಎನ್ನುವುದಕ್ಕಿಂತ ಅದೊಂದು ಹಿಂದೂ ಮುಸ್ಲಿಮ್ ವಿವಾದ ಎಂದು ಬಿಂಬಿಸಲ್ಪಟ್ಟಿತು. ಈ ನಡುವೆ ಚೆಡ್ಡಿಗಳ ಈ ವರ್ತನೆಯ ವಿರುದ್ಧ ಧ್ವನಿ ಎತ್ತಿದ್ದು ಎ.ಕೆ.ಸುಬ್ಬಯ್ಯ ಮತ್ತು ಕೆ.ಆರ್.ವಿದ್ಯಾಧರ ಮಾತ್ರ. ಇದರಿಂದಾಗಿ ಕೋ.ಚೆ. ತನ್ನ ಕೃತಿಯಲ್ಲಿ ಏನು ಹೇಳಿದ್ದಾರೆ ಎಂಬುದು ಚರ್ಚೆ ಆಗಲೇ ಇಲ್ಲ, ಸಾಹಿತ್ಯ ಸಮ್ಮೇಳನದಲ್ಲಿ ಬೌದ್ಧಿಕ ದಿವಾಳಿತನ ಎಷ್ಟಿದೆ ಎಂಬುದು ಇಲ್ಲಿ ಕಂಡುಬಂತು.

ಕೋ.ಚೆ. ತನ್ನ ಸಂಗ್ರಹ ಕೃತಿ 'ಟಿಪೂ ಸುಲ್ತಾನ'ದಲ್ಲಿ ಕೊಡವರು ಸ್ಥಳೀಯರಲ್ಲ ಎಂಬ ವಾಸ್ತವ ವಿಚಾರ ಬಿಟ್ಟು ಉಳಿದ ವಿಚಾರದಲ್ಲಿ ಕೊಡವರನ್ನು ಒಟ್ಟು ವೈಭವೀಕರಿಸಿದ್ದೇ ಆಗಿತ್ತು, ಕೃತಿಯನ್ನೆ ಓದದೆ ಕೊಡವ ಸಮಾಜಗಳು ಕೂಡ ಪ್ರತಿಭಟನೆಗೆ ಇಳಿದದ್ದು ಒಂದು ದುರಂತ. ಕೊನೆಗೆ ತನ್ನ ವಿಚಾರದಲ್ಲಿ ಗಟ್ಟಿತನ ಇಟ್ಟುಕೊಂಡಿದ್ದ ಕೋ.ಚೆ. ಬಗ್ಗುವುದಿಲ್ಲ ಎಂದು ಕಂಡಾಗ ಚೆಡ್ಡಿಗಳ ಚಾನಲ್ ಸುವರ್ಣದಲ್ಲಿ ಚರ್ಚೆ ಎಂಬುವುದನ್ನು ಇಡಿಸಿಕೊಂಡು ಕೋ.ಚೆ. ಅವರಿಂದ ಕೊಡವರಿಗೆ ಅವಮಾನ ಮಾಡಿಲ್ಲ, ಆದರೂ ಕೊಡವರ ಮನಸ್ಸಿಗೆ ನೋವಾಗಿದ್ದರೆ ವಿಷಾದಿಸುತ್ತೇನೆ ಎಂದು ಬಲವಂತವಾಗಿ ಹೇಳಿಸುವ ಮೂಲಕ ಟಿಪ್ಪು ವೈಭವೀಕರಣ ವಿರೋಧಿ ಸಮಿತಿ ಆ ಚಾನಲ್‌ನಲ್ಲಿಯೇ ಪ್ರತಿಭಟನೆ ಹಿಂದಕ್ಕೆ ಪಡೆಯಿತು. ವ್ಯಕ್ತಿ ಸ್ವಾತಂತ್ರ್ಯಕ್ಕೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಮನ್ನಣೆ ನೀಡಿದ ಮತ್ತು ನೀಡುತ್ತಿರುವ ನೀನಾಸಂನಲ್ಲಿ ಕಾರ್ಯಪ್ಪನಂತಹ ಹುಳುಗಳು ತರಬೇತಿ ಪಡೆದದ್ದು ಕೂಡ ಒಂದು ದುರಂತವೇ ಸರಿ.

ಸಮ್ಮೇಳನದ ಮೆರವಣಿಗೆಯಲ್ಲಿ ಸಮ್ಮೇಳನಾಧ್ಯಕ್ಷರ ಪತ್ನಿಯನ್ನು ತೆರೆದ ವಾಹನದಿಂದ ಕೆಳಗಿಳಿಸಿ ಅವಮಾನಿಸಿ ಗೊಂದಲ ಉಂಟುಮಾಡಿದ್ದು ಒಂದು ಕಡೆಯಾದರೆ ಸಮ್ಮೇಳನದಲ್ಲಿ ಮಾತನಾಡುತ್ತಿದ್ದ ಸಮ್ಮೇಳನಾಧ್ಯಕ್ಷ ನಾ.ಡಿಸೋಜರವರ ಭಾಷಣವನ್ನು ನಿಲ್ಲಿಸಲು ಹಾಲಂಬಿ ಚೀಟಿ ಕಳುಹಿಸಿ ಅವಮಾನಿಸಿದರು. ಮನನೊಂದ ಡಿಸೋಜ ಸಂಘಟಕರ ಆತುರದಿಂದ ನನ್ನ ಅರೆಬರೆ ಭಾಷಣವನ್ನು ಇಲ್ಲಿಗೇ ನಿಲ್ಲಿಸುತ್ತಿದ್ದೇನೆ ಎಂದು ಹೇಳಿದರು. ಆದರೆ ಸ್ವಾಗತಕ್ಕೆ ಒಂದು ಗಂಟೆ ಸಮಯ ತೆಗೆದುಕೊಂಡ ಸಚಿವ ಡಾ. ಮಹದೇವಪ್ಪರವರನ್ನು ನಿಯಂತ್ರಿಸುವ ಧೈರ್ಯ ಹಾಲಂಬಿಗೆ ಇರಲಿಲ್ಲ.

ಯೋಗ್ಯ ಮತ್ತು ಉತ್ತಮ ಸಮ್ಮೇಳನ ನಡೆಸುವುದು ಸಾಹಿತ್ಯ ಪರಿಷತ್ತಿನ ಉದ್ದೇಶವಾಗಿರಲಿಲ್ಲ, ಅವರ ಉದ್ದೇಶ ಕಾಟಾಚಾರದ ಸಮ್ಮೇಳನವನ್ನು ನಡೆಸುವುದಾಗಿತ್ತು, ಹಾಲಂಬಿ ರಾಜ್ಯದಲ್ಲಿ ಸರ್ವಾಧಿಕಾರಿಯಂತೆ ವರ್ತಿಸಿದರೆ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಪೈಪೋಟಿಗೆ ಇಳಿದಂತೆ ಜಿಲ್ಲೆಯ ಮಟ್ಟಿಗೆ ಸರ್ವಾಧಿಕಾರಿಯಾಗಿದ್ದರು. ಯಾರನ್ನು ಹೇಗೆ ಅವಮಾನಿಸಬೇಕು ಮತ್ತು ತನಗೆ ಬೇಕಾದವರಿಗೆ ಹೇಗೆ ಅವಕಾಶ ನೀಡಬೇಕು ಎಂಬುದನ್ನು ಅವರು ಕಾರ್ಯಕ್ರಮ ಪಟ್ಟಿಯಲ್ಲಿ ಪ್ರದರ್ಶಿಸಿದ್ದರು. ತನ್ನ ಮೂಗಿನ ನೇರಕ್ಕೆ ಸಮ್ಮೇಳನ ನಡೆಯಬೇಕು ಎನ್ನುವಂತೆ ವರ್ತಿಸಿ ಸುಂದರವಾಗಿ ಅರ್ಥಪೂರ್ಣವಾಗಿ ನಡೆಸಬಹುದಾಗಿದ್ದ ಸಮ್ಮೇಳನವನ್ನು ಒಂದು ಗೊಂದಲದ ಜಾತ್ರೆಯಾಗಿಸಿದ ಕೀರ್ತಿ ಟಿ.ಪಿ.ರಮೇಶ್‌ರವರಿಗೆ ಸಲ್ಲಬೇಕು.

ಆರಂಭದಿಂದಲೂ ಸಮ್ಮೇಳನ, ಸಮ್ಮೇಳನ ಸಮಿತಿ ಜನರ ಸಹಭಾಗಿತ್ವದಿಂದ ಕೂಡಿರಲಿಲ್ಲ; ಬಹುತೇಕ ಅಧಿಕಾರಿಗಳ ಉತ್ಸವವಾಗಿತ್ತು. ಜನಪರವಲ್ಲದ ಉದ್ಧಟವರ್ತನೆಯ ಉತ್ತರಭಾರತದ ಕಿರಿಯ ಐ.ಎ.ಎಸ್. ಅಧಿಕಾರಿ ಅನುರಾಗ್ ತಿವಾರಿ ಕೊನೆಯವರೆಗೂ ಸಾರ್ವಜನಿಕರ ಭಾಗವಹಿಸುವಿಕೆಗೆ ಹಾಗೂ ಮಾತಿಗೆ ಮನ್ನಣೆ ನೀಡಲೇ ಇಲ್ಲ, ಎಲ್ಲಿ ಜಿಲ್ಲಾಧಿಕಾರಿ ಹಣ ಬಿಡುಗಡೆ ಮಾಡುವುದಿಲ್ಲವೋ ಎಂದು ಟಿ.ಪಿ.ರಮೇಶ್ ಇದರ ವಿರುದ್ಧ ಧ್ವನಿ ಎತ್ತಲೇ ಇಲ್ಲ.

ಸಮ್ಮೇಳನಕ್ಕೆ ಎಂದಿನಂತೆ ಎರಡು ವೇದಿಕೆಗಳು ಇದ್ದವು. ಮುಖ್ಯ ವೇದಿಕೆ ಅದ್ದೂರಿ ವೇದಿಕೆಯಾಗಿದ್ದರೆ, ಸಮಾನಾಂತರ ವೇದಿಕೆ ಗೂಡಂಗಡಿಯ ರೀತಿಯಲ್ಲಿ ಇತ್ತು, ಆದರೆ ಈ ಗೂಡಂಗಡಿಯಲ್ಲಿ ಮುಖ್ಯ ವೇದಿಕೆಗಿಂತಲೂ ಉತ್ತಮವಾದ ಗೋಷ್ಠಿಗಳು ನಡೆದವು. ಈ ವೇದಿಕೆಯಲ್ಲಿ ಚಂ.ಪಾ., ಪ್ರೊ. ಕಾಳೇಗೌಡ ನಾಗವಾರರಂತಹ ಹಿರಿಯ ಸಾಹಿತಿಗಳನ್ನು ಕರೆಸಿ ವಿಚಾರಮಂಡನೆಗೆ ಅವಕಾಶ ಕಲ್ಪಿಸಲಾಯಿತು. ವಾಸ್ತವದಲ್ಲಿ ಈ ವಿಚಾರಗಳೆಲ್ಲವೂ ಮುಖ್ಯ ವೇದಿಕೆಯಲ್ಲಿಯೇ ಮಂಡನೆಯಾಗಬೇಕಿತ್ತು, ಆದರೆ ಇಂತಹ ಕಾರ್ಯಕ್ರಮ ನಡೆಯುವುದು ಯಾರಿಗೂ ತಿಳಿಯಲೇಬಾರದು ಎನ್ನುವ ರೀತಿಯಲ್ಲಿ ಧ್ವನಿವರ್ಧಕ ಹಾಗೂ ಬೆಳಕಿನ ವ್ಯವಸ್ಥೆಯನ್ನು ಮಾಡಲಾಗಿತ್ತು, ಜ್ವಲಂತ ಸಮಸ್ಯೆಗಳ ಬಗ್ಗೆ, ವಿವಾದಿತ ವಿಚಾರಗಳ ಬಗ್ಗೆ ಒಂದೇ ಒಂದು ಗೋಷ್ಠಿ ಇರಲಿಲ್ಲ, ಮುಖ್ಯ ವೇದಿಕೆಯಲ್ಲಿ ಮೊದಲ ದಿನ ನಡೆದ 'ಕೊಡಗು ಜಿಲ್ಲೆಯ ಮುಂದಿರುವ ಸವಾಲುಗಳು' ವಿಚಾರದಲ್ಲಿ ಯಾವುದೇ ಗಂಭೀರ ವಿಚಾರಗಳು ಇರಲಿಲ್ಲ, ಬಹುತೇಕ ವಿಚಾರಮಂಡನೆಗಳು ವಿಚಾರರಹಿತವಾಗಿದ್ದವು ಮತ್ತು ಸತ್ಯವನ್ನು ಹೇಳಲು ಹಿಂಜರಿದಿರುವುದು ಕಂಡು ಬಂತು. ಆಶಯ ನುಡಿಯಾಡಿದ ಹಂಪಿ ವಿಶ್ವವಿದ್ಯಾಲಯದ ಡಾ. ವಿಜಯ್ ಪೂಣಚ್ಚ ತಂಬಂಡರವರು ನಮ್ಮ ಒಟ್ಟು ಸಾಮಾಜಿಕ ರಚನೆ ಮಾಹತುಶಾಹಿ ಯುರೋಪಿಯನ್ನರು ಹಾಕಿಕೊಟ್ಟ ವ್ಯವಸ್ಥೆಯ ಮುಂದುವರಿದ ಭಾಗವಾದ ಕಾರಣ ನಮ್ಮ ಬುಡಕಟ್ಟು, ಹಿಂದುಳಿದ ಮತ್ತು ದಲಿತ ವರ್ಗಗಳು ಅವಕಾಶವಂಚಿತರಾಗಿಯೇ ಉಳಿದಿದ್ದಾರೆ ಬ್ರಿಟಿಷರ ಅನುಕರಣೆ ಮಾಡುವವರು ಮೇಲ್ವರ್ಗವಾಗಿ ರೂಪಿತಗೊಂಡಿದ್ದಾರೆ ಎನ್ನುವ ಗಂಭೀರ ಸತ್ಯವನ್ನು ಹೇಳಿದರು.

ಎರಡನೆಯ ದಿನ ನಡೆದ ಮೊದಲ ಗೋಷ್ಠಿಯಲ್ಲಿ ಚಂ.ಪಾ. ವಾತ್ರ ತಮ್ಮ ಎಂದಿನ ಶೈಲಿಯಲ್ಲಿ ಹಾಲಂಬಿಯವರನ್ನು ತಿವಿದು ಸಮ್ಮೇಳನಾಧ್ಯಕ್ಷರನ್ನು ಭಾಷಣ ನಿಲ್ಲಿಸಲು ಹೇಳಲು ಇವರ್‍ಯಾರು ಎಂದು ಪ್ರಶ್ನಿಸಿದರಲ್ಲದೆ, ಸರಕಾರ ಸ್ಪಂದಿಸದಿದ್ದರೆ ಸಾಹಿತ್ಯ ಪರಿಷತ್ತನ್ನು ಮುಚ್ಚುತ್ತೇನೆ ಎನ್ನಲು ಇವರಿಗೆ ಅಧಿಕಾರ ನೀಡಿದವರು ಯಾರು ಎಂದು ನೇರವಾಗಿ ಪ್ರಶ್ನಿಸುವ ಮೂಲಕ ಹಾಲಂಬಿಯವರ ಅಹಂಗೆ ನೇರ ಪೆಟ್ಟು ಕೊಟ್ಟರು.

ಡಾ. ಕಾಳೇಗೌಡರು ಜಾನಪದ ಕಲೆ ಉಳಿಸುವ ದೃಷ್ಟಿಯಿಂದ ರಾಜ್ಯದ ಹಿರಿಯ ಜಾನಪದ ಕಲಾವಿದರನ್ನು ಗುರುತಿಸಿ ಅವರಿಗೆ ಗೌರವಧನವನ್ನು ನೀಡಿ ಪ್ರಾಥಮಿಕ ಶಾಲೆಗಳಲ್ಲಿ ಗೌರವ ಶಿಕ್ಷಕರನ್ನಾಗಿ ನೇಮಿಸಬೇಕು, ಹಳ್ಳಿಗಾಡಿನ ಆತ್ಮಕತೆಗಳನ್ನು ಬರೆಸಬೇಕು, ಗ್ರಾಮೀಣ ಔತಣವನ್ನು ಪರಿಚಯಿಸಬೇಕು ಎನ್ನುವುದರ ಜೊತೆಯಲ್ಲಿ ನಮ್ಮಲ್ಲಿ ಶೌಚಾಲಯಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳಿವೆ ಎಂದು ಮಾರ್ಮಿಕವಾಗಿ ನುಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಬಸವರಾಜ ಕಲ್ಗುಡಿಯವರು ಸಂಶೋಧನೆಗಳು ವಿಫಲವಾಗುತ್ತಿವೆ, ಈ ಬಗ್ಗೆ ಯು.ಜಿ.ಸಿ. ಗಮನ ಹರಿಸಬೇಕು ಮತ್ತು ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ಇರುವ ವಿಚಾರಗಳ ಬಗ್ಗೆ ವಿಶ್ವವಿದ್ಯಾನಿಲಯ ಹೇಗೆ ಭಾಗವಹಿಸಬೇಕು ಎಂಬುದನ್ನು ಹೇಳಿದ್ದು ಬಿಟ್ಟರೆ ಬಹಳಷ್ಟು ಗೋಷ್ಠಿಗಳು ಜೊಳ್ಳಾಗಿದ್ದವು.

ಸಮ್ಮೇಳನಾಧ್ಯಕ್ಷ ನಾ.ಡಿಸೋಜರವರು ಎಷ್ಟು ಜನಪರವಾಗಿದ್ದಾರೆ ಮತ್ತು ಉತ್ತಮವಾದ ಚಿಂತನೆಗಳನ್ನು ಹೊಂದಿದ್ದಾರೆ ಎಂಬುದನ್ನು ಅವರು ಮುಕ್ತ ಸಂವಾದದಲ್ಲಿ ಪ್ರದರ್ಶಿಸಿದರು. ನಕ್ಸಲ್ ಸಮಸ್ಯೆಯ ಬಗ್ಗೆ ಅವರನ್ನು ಪ್ರಶ್ನಿಸಿದಾಗ ಈಗಾಗಲೇ ಹಲವು ನಕ್ಸಲರು ಮುಖ್ಯವಾಹಿನಿಗೆ ಬರುತ್ತೇವೆ ಎಂದು ಹೇಳಿರುವುದನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕು ಮತ್ತು ಅವರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ಹಾಕುವುದನ್ನು ನಿಲ್ಲಿಸಬೇಕು ಎಂಬುದನ್ನು ಹೇಳುವ ಮೂಲಕ ತನ್ನ ಕಾಳಜಿಯನ್ನು ಪ್ರದರ್ಶಿಸಿದರು.


ನಾ.ಡಿಸೋಜರವರ ಅಧ್ಯಕ್ಷೀಯ ಭಾಷಣದಲ್ಲಿ ಅವರು ಪಶ್ಚಿಮಘಟ್ಟದಲ್ಲಿ ಅತಿಯಾದ ಗಣಿಗಾರಿಕೆಯಿಂದಾಗಿ ಪರಿಸರ ನಾಶವಾಗುತ್ತಿದೆ, ಇದರ ಫಲವಾಗಿ ಕಸ್ತೂರಿ ರಂಗನ್ ಬಂದಿದೆ ಎಂದು ಉಲ್ಲೇಖಿಸಿದ್ದನ್ನು ಮತ್ತೆ ಅಡ್ಡಂಡ ಕಾರ್ಯಪ್ಪ ತಿರುಚಿ, ಈ ವರದಿ ಜಾರಿಗೆ ಬರಬೇಕು ಎಂದು ನಾ.ಡಿಸೋಜ ಹೇಳಿದ್ದಾರೆ, ಆದ್ದರಿಂದ ಅವರು ಕ್ಷಮೆ ಯಾಚಿಸಬೇಕು ಎಂದು ಜಿಲ್ಲೆಯ ಇಬ್ಬರು ಶಾಸಕರಿಂದ ಹೇಳಿಸಿದರು. ಅಲ್ಲದೆ ಅವರು ಕೊನೆಯ ದಿನ ಕ್ಷಮೆ ಯಾಚಿಸಬೇಕು ಮತ್ತು ಬಹಿರಂಗ ಅಧಿವೇಶನದಲ್ಲಿ ಡಾ. ಕಸ್ತೂರಿ ರಂಗನ್ ವರದಿಯನ್ನು ಅನುಷ್ಠಾನಕ್ಕೆ ತರಬಾರದು ಎಂಬ ನಿರ್ಣಯವನ್ನು ಕೈಗೊಳ್ಳಬೇಕು ಎಂದು ಫರ್ಮಾನು ಹೊರಡಿಸಿದರು. ಸಾಹಿತ್ಯ ಸಮ್ಮೇಳನದ ವೇದಿಕೆ ದೊರೆಯದೆ ಇದ್ದ ಹುಟ್ಟು ನಾಟಕಗಾರ ಅಡ್ಡಂಡ ಕಾರ್ಯಪ್ಪನಿಗೆ ಇಷ್ಟರಿಂದಲೇ ತೃಪ್ತಿ ಸಿಗಲಿಲ್ಲ, ಪತ್ರಿಕಾಗೋಷ್ಠಿ ಮುಗಿಸಿ ಕೂಡಲೇ ಕಾರ್ಯಕ್ರಮದ ಮುಖ್ಯ ವೇದಿಕೆಗೆ ಬಿ.ಜೆ.ಪಿ.ಯ ಮುಖಂಡರೊಂದಿಗೆ ಧಾವಿಸಿ ನಾ.ಡಿಸೋಜರವರು ಕ್ಷಮೆ ಯಾಚಿಸಬೇಕು ಎಂದು ಗೊಂದಲ ಎಬ್ಬಿಸಿದರು. ನಾ.ಡಿಸೋಜ ತಾನು ಹೇಳಿದ್ದು ಏನು ಎಂಬುದನ್ನು ತನ್ನ ಲಿಖಿತ ಭಾಷಣದಿಂದ ತಿಳಿದುಕೊಳ್ಳುವಂತೆ ಅವರಿಗೆ ತಿಳಿಸಿದರಲ್ಲದೆ ಕ್ಷಮೆ ಯಾಚಿಸುವ ವಿಚಾರಕ್ಕೆ ಹೋಗಲಿಲ್ಲ. ಇಷ್ಟರಲ್ಲೇ ತೃಪ್ತರಾದ ಬಿ.ಜೆ.ಪಿ.ಯವರು ತಾವೇನೋ ಸಾಧನೆ ಮಾಡಿದಂತೆ ನಿರ್ಗಮಿಸಿದರು.

ಈ ಸಾಹಿತ್ಯ ಸಮ್ಮೇಳನದಲ್ಲಿ ಶಿಕ್ಷಕ ವರ್ಗ ನಡೆದುಕೊಂಡ ರೀತಿ ಮಾತ್ರ ಹೇಸಿಗೆಯಾಗುವ ರೀತಿಯಲ್ಲಿ ಇತ್ತು, ಮೊದಲ ದಿನದಿಂದಲೇ ಒ.ಒ.ಡಿ. ದೃಢೀಕರಣಕ್ಕಾಗಿ ಪ್ರತಿಭಟನೆಗಳನ್ನು ನಡೆಸಿದರು. ಒ.ಒ.ಡಿ. ದೃಢೀಕರಣ ನೀಡುವ ವೇಳೆಯಲ್ಲಿ ಒಂದೇ ಮುಖವು ಹಲವು ಬಣ್ಣದ ಶರ್ಟು ಮತ್ತು ಟೋಪಿಯಲ್ಲಿ ಕಂಡುಬಂತು.

ಒಟ್ಟಿನಲ್ಲಿ ಸಮ್ಮೇಳನ ಸಾಹಿತ್ಯದ ಹೆಸರಿನಲ್ಲಿ ಕೊನೆಗೊಂಡಿತು. ಯಾರ್‍ಯಾರಿಗೆ ಏನೇನು ಲಾಭವಾಯಿತು ಎಂಬುದು ಮುಂದೆ ಬಹಿರಂಗವಾಗಬಹುದು.

● ಮನು ಶೆಣೈ

ಯಡ್ಡಿಗೆ ಖೆಡ್ಡಾ ರೆಡಿ



...ಮ್ಮೆ ಬಿಜೆಪಿ ವಿರುದ್ಧ ತಿರುಗಿ ಬಿದ್ದು ತಮ್ಮದೇ ...ಕ ಪಕ್ಷ ಕಟ್ಟಿದವರೆಲ್ಲ ಹೈರಾಣಾಗಿ ಮತ್ತೆ ಬಿಜೆಪಿಗೆ ...ದರೆಂದರೆ ಅದು ತಮ್ಮ ಗೋರಿಯನ್ನು ತಾವೇ ...ಡಿಕೊಂಡ ಹಾಗೆ ತಾನೆ?

...ಉದಾಹರಣೆಗೆ ಉಮಾಭಾರತಿ ಮತ್ತು ಕಲ್ಯಾಣ್‌ಸಿಂಗ್. ...ಸ್ ಪಾಳೇಗಾರಿಕೆ ವಿರುದ್ಧ ರೊಚ್ಚಿಗೆದ್ದು ಬಿಜೆಪಿ ...ತ್ರ ನಾಯಕರ ಜಾತಕ ಜಾಲಾಡಿದ ಇವರಿಬ್ಬರನ್ನೂ ... ಉಪಾಯವಾಗಿ ಬಿಜೆಪಿಗೆ ಬರಮಾಡಿಕೊಂಡರು. ...ೇ ಆಗದ ಹಾಗೆ ಮತ್ತೆಂದೂ ಮೇಲೇಳದ ಹಾಗೆ ...ಕುಯ್ದು ಮುಗಿಸಿಬಿಟ್ಟರು. ಈಗ ಯಡ್ಡಿಯ ಸರದಿ. ...ಕಲ್ಯಾಣ್‌ಸಿಂಗ್ ಮತ್ತು ಉಮಾಭಾರತಿಗೆ ಹೋಲಿಸಿದರೆ ...ಯೂರಪ್ಪ ಕರ್ನಾಟಕ ಕಂಡ ಬಂಗಾರಪ್ಪ ಮತ್ತು ...ೇಗೌಡ ನಂತರದ ಮಾಸ್ ಲೀಡರ್. ಕರ್ನಾಟಕದ ... ದೊಡ್ಡ ಜನಸಮೂಹವಾದ ಲಿಂಗಾಯತರ ನಾಯಕ .... ಸದಾನಂದಗೌಡರನ್ನು ಮುಂದಿಟ್ಟುಕೊಂಡು ಒಕ್ಕಲಿಗರ ... ಬುಟ್ಟಿಗೆ ಕೈ ಹಾಕಿದ್ದಾಗಲಿ, ಕಾಂಗ್ರೆಸ್‌ನಿಂದ ನಿರ್ಲಕ್ಷಿ... ಎಡಗೈ ದಲಿತರನ್ನು ಸಂಘಟಿಸಿದ್ದಾಗಲಿ. ಬೋವಿ ...ಗದ ಓಟ್ ಬ್ಯಾಂಕ್ ಹುಟ್ಟು ಹಾಕಿದ್ದಾಗಲಿ ಇವೆಲ್ಲವೂ ...ಯ ಮಾಸ್ ಲೀಡರ್ ಉದ್ದೇಶದ ಕಸರತ್ತುಗಳಷ್ಟೆ. ...ಮುಖ್ಯಮಂತ್ರಿಗಿರಿ ಕಳಕೊಂಡು ಜೈಲುವಾಸವನ್ನೂ ...ತು ತಾನೇ ಕಟ್ಟಿ ಬೆಳೆಸಿದ ಬಿಜೆಪಿಯ ವಿರುದ್ಧವೇ ...ಗಿಬಿದ್ದು ಕೆಜೆಪಿಯ ಮೂಲಕ ಕರ್ನಾಟಕದ ...ಕಾರಣದಲ್ಲಿ ಯಡ್ಡಿ ನಡೆಸಿದ ಬುಡಮೇಲು ಕೃತ್ಯಗಳೇನೂ ...ಯುದಲ್ಲ. ತನ್ನದೇ ಸ್ವಂತ ಪಕ್ಷ ಕಟ್ಟಿ ಆರು ಮಂದಿ ...ರನ್ನು ಗೆಲ್ಲಿಸಿಕೊಂಡಿದ್ದಕ್ಕಿಂತಲೂ ಯಡ್ಡಿಯ ತಾಕತ್ತಿದ್ದದ್ದು ...ಗ್ರೆಸ್ಸನ್ನು ಅಧಿಕಾರಕ್ಕೆ ತರುವಲ್ಲಿ ಮತ್ತು ಬಿಜೆಪಿಯನ್ನು ...ಮಗೊಳಿಸುವಲ್ಲಿ. ಹಾಗೆ ನೋಡಿದರೆ ಕರ್ನಾಟಕದ ...ಗೆ ಯಡ್ಡಿಯ ಪಾತ್ರ ಕೂಡ ನಗಣ್ಯವೇನಲ್ಲ.

...ಲೋಕಸಭಾ ಚುನಾವಣೆ ಇನ್ನೇನು ಸನ್ನಿಹಿತ ...ಂತೆಯೇ ಕೈಕಾಲು ಕಟ್ಟಿಯಾದರೂ ಯಡ್ಡಿಯನ್ನು ...ಗೆ ಕರೆತರುವ ಅನಿವಾರ್ಯತೆ ಅದರ ನಾಯಕರಿಗಿತ್ತು. ..., ಕೈ ಜೋಡಿಸದೇ ಹೋದರೆ ರಾಜ್ಯದಲ್ಲಿ ಒಂದೇ ... ಸೀಟು ಕೂಡ ಗೆಲ್ಲುವುದು ಕಷ್ಟವೆಂಬ ಸತ್ಯ ... ಗೊತ್ತಾಗಿತ್ತು. ಪರಿಸ್ಥಿತಿಯೇ ಹಾಗಿರುವಾಗ ...ಷ್ಟವಾದ ಷರತ್ತು ವಿಧಿಸಿಯೇ ಯಡ್ಡಿ ಪಟ್ಟು ...ಸಬಹುದಿತ್ತು. ಸಂಘ ಪರಿವಾರ ಒಪ್ಪಲಿ ಬಿಡಲಿ ... ಬಿಜೆಪಿಗೆ ಕರಂದ್ಲಾಜೆಯನ್ನು ಅಧ್ಯಕ್ಷೆಯಾಗಿಸುವಂತೆ ... ನಾಯಕ ಹಠ ಹಿಡಿಯುತ್ತಾರೆಂದೇ ಅವರ ಅನೇಕ ಬೆಂಬಲಿಗರು ನಂಬಿಕೊಂಡಿದ್ದರು. ಕನಿಷ್ಠ ಎಮ್ಮೆಲ್ಸಿ ಗಿರಿಯನ್ನಾದರೂ ಕರಂದ್ಲಾಜೆಗೆ ಕೊಡಮಾಡುವ ಪಟ್ಟು ಹಾಕಬಹುದಿತ್ತು, ಸೋಮಣ್ಣಗೆ ರಾಜ್ಯ ಬಿಜೆಪಿ ಅಧ್ಯಕ್ಷಗಾದಿ ಅಥವಾ ತನ್ನನ್ನೇ ವಿರೋಧಿ ನಾಯಕನನ್ನಾಗಿಸುವ ಪಟ್ಟು ಹಾಕಿಯೇ ಯಡ್ಡಿ ಬಿಜೆಪಿಗೆ ಕಾಲಿಡುತ್ತಾರೆಂಬುದು ಅವರ ಪರಮಾಪ್ತರ ನಂಬಿಕೆಯಾಗಿತ್ತು.

ಈಗ ಎಲ್ಲವೂ ಉಲ್ಟಾ. ಮೇಲೆ ಬಿದ್ದು ಬಂದವಳು ಮೂರು ಕಾಸಿಗೆಂಬಂತೆ ಸಣ್ಣದೊಂದು ಪ್ರತಿಷ್ಠೆಗೂ ಆಸ್ಪದ ನೀಡದೆ ಯಡ್ಡಿ ಶರಣಾಗಿದ್ದಾರೆ. ಪ್ರಚಾರ ಸಮಿತಿಯ ಆಧಿಪತ್ಯ ಮತ್ತು ಶಿವಮೊಗ್ಗ ಲೋಕಸಭಾ ಟಿಕೆಟ್ಟಿನ ಹೊರತಾಗಿ ಯಡ್ಡಿಗೆ ಗಿಟ್ಟಿದ್ದು ಹಳೇ ಗಂಡನ ಪಾದದ ಗತಿಯೊಂದೆ. ರಾಜಕೀಯವಾಗಿ ತಾನೇ ಹುಟ್ಟಿ ಹಾಕಿದ ಪ್ರಾದೇಶಿಕ ಪಕ್ಷ ಕೆಜೆಪಿಯನ್ನು ಇಷ್ಟೊಂದು ನಿಕೃಷ್ಟವಾಗಿ ಮಾರಿಕೊಳ್ಳುವ ದುರ್ಗತಿಯಂತೂ ಯಡ್ಡಿಗಿರಲಿಲ್ಲ. ಯಡ್ಡಿಯ ಅಸಲೀಯತ್ತು ಬಲ್ಲವರೇ ಹೇಳುವಂತೆ ಇದು ಶುದ್ಧ ಹೇಡಿತನ!

ಇಷ್ಟೊಂದು ದೈನೇಸಿಯಾಗಿ ಮತ್ತೆ ಬಿಜೆಪಿಯ ಬಾಗಿಲು ಬಡಿಯುವ ಮಟ್ಟಕ್ಕೆ ಯಡ್ಡಿಯನ್ನು ತಳ್ಳಿದವರ್ಯಾರು?


ಅದು ಅವರದ್ದೇ ವ್ಯಕ್ತಿತ್ವದ ಮಿತಿಯಾಗಿತ್ತು. ಒಂದಾನೊಂದು ಕಾಲಕ್ಕೆ ಬಿಜೆಪಿಯ ಪಾಳೇಗಾರನಂತಿದ್ದ ಯಡಿಯೂರಪ್ಪ ಜೈಲು, ಕೋರ್ಟು, ಕೇಸುಗಳು, ಸ್ವಂತ ಪಾರ್ಟಿ, ಅದಕ್ಕೆ ಫಂಡು, ಪ್ರಚಾರ, ಪ್ರವಾಸ ಎಂದೆಲ್ಲ ಸಣ್ಣ ಬುದ್ಧಿಯ ಆಸಾಮಿ.


ಇನ್ನು ಪಕ್ಷದ ಸೋಕಾಲ್ಡ್ ಅಧ್ಯಕ್ಷ ಧನಂಜಯ್‌ಕುಮಾರ್ ಪ್ರತಿಭೆಯೆಂದರೆ ಅದು ಟೀವಿಗಳೆದುರು ಡೈಲಾಗು ಹೊಡೆಯುವುದು ಮಾತ್ರ. ಪುಟ್ಟಸ್ವಾಮಿ ಕೂಡ ಇದೇ ಟೈಪಿನ ಮಾತಿನ ಶೂರನೇ ಹೊರತು ಸಂಘಟಕನಲ್ಲ. ಸೋಮಣ್ಣ, ಕತ್ತಿ, ನಿರಾಣಿ, ಬಸವರಾಜ ಬೊಮ್ಮಾಯಿ, ಸವದಿ ಇತ್ಯಾದಿಗಳೆಲ್ಲ ಯಡ್ಡಿ ಜೊತೆಗೇ ಕೆಜೆಪಿ ಸೇರಿದ್ದರೆ ಕನಿಷ್ಠ ಅದಕ್ಕೊಂದು ಲಿಂಗಾಯತರ ಬ್ರ್ಯಾಂಡ್ ಮಾರ್ಕಾದರೂ ಇರುತ್ತಿತ್ತು. ನನ್ನಿಂದಾಗಿ ಬೊಮ್ಮಾಯಿ ನೂರಾರು ಕೋಟಿ ಲೂಟಿ ಮಾಡಿಕೊಂಡನೇ ಹೊರತು ಕಷ್ಟದಲ್ಲಿ ನನ್ನ ಕೈಹಿಡಿಯಲಿಲ್ಲ ಎಂಬ ಯಡ್ಡಿಯ ಆರೋಪವೊಂದೇ ಯಡ್ಡಿಯ ವ್ಯಕ್ತಿತ್ವದ ಪೊಳ್ಳುತನವನ್ನು ಸಾರಿ ಹೇಳುತ್ತಿತ್ತು.


ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುಂಬಯಿ ಕರ್ನಾಟಕ ಬಿಟ್ಟರೆ ಹೈದ್ರಾಬಾದ್, ಮಧ್ಯ ಕರ್ನಾಟಕ ಮತ್ತು ಮೈಸೂರು ಪ್ರಾಂತ್ಯದ ಲಿಂಗಾಯತರೆಲ್ಲ ಸಾರಾಸಗಟಾಗೇ ಕೆಜೆಪಿಯನ್ನು ಬೆಂಬಲಿಸಿದ್ದರು. ಆ ಮೂಲಕ ಯಡ್ಡಿ ಲಿಂಗಾಯತರ ಪ್ರಶ್ನಾತೀತ ನಾಯಕನೆಂಬುದೂ ಸಾಬೀತಾಗಿತ್ತು. ಹಾಗಂತ ಗೆದ್ದದ್ದು ಮಾತ್ರ ಕೇವಲ ಆರೇ ಆರು. ಆ ರೀತಿ ಗೆದ್ದವರೆಲ್ಲ ತಮ್ಮ ಸ್ವಂತ ತಾಕತ್ತಿನ ಮೇಲೆಯೇ ಗೆದ್ದಿದ್ದರೂ ಅದರ ಲಾಭ ಮಾತ್ರ ಕೆಜೆಪಿಗಾಗಿತ್ತು. ಮೂವತ್ತೋ ನಲವತ್ತೋ ಸ್ಥಾನ ಗೆದ್ದು ಯಡ್ಡಿ ಬಿಜೆಪಿಯನ್ನು ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಹೊಸ ಭೀತಿಯೊಂದು ಎದುರಾಗಿತ್ತು.


ಕಾಂಗ್ರೆಸ್ ಇನ್ನು ಹೆಚ್ಚೆಂದರೆ ಆರು ತಿಂಗಳು ಅಧಿಕಾರದಲ್ಲಿರಬಹುದಷ್ಟೆ. ದೇಶಾದ್ಯಂತ ಈಗಾಗಲೇ ಮೋದಿಯ ಗಾಳಿ ಬೇರೆ ಬೀಸಲಾರಂಭಿಸಿದೆ. ಹಾಗೊಮ್ಮೆ ಜೆಡಿಎಸ್‌ನ ಜೊತೆ ಕೈಜೋಡಿಸಿದರೂ ಪರಿಸ್ಥಿತಿ ಈಗಿರುವುದಕ್ಕಿಂತ ಯಾವ ರೀತಿಯಲ್ಲೂ ಭಿನ್ನವಾಗಿರುವುದಿಲ್ಲ. ಮುಂದೊಮ್ಮೆ ಎನ್‌ಡಿಎ ಅಧಿಕಾರಕ್ಕೆ ಬಂದು ಕೇಂದ್ರದಲ್ಲಿ ಅನಂತ್‌ಕುಮಾರ್ ಪ್ರಾಬಲ್ಯ ಹೆಚ್ಚಾದರೂ ಆಗ ಮತ್ತೆ ತನ್ನ ವಿರುದ್ಧ ಅನಂತ್ ಸಿಬಿಐ ಅನ್ನು ಛೂಬಿಡುವ ಅಪಾಯ ಇದ್ದದ್ದೇ. ಅಂಥಾದ್ದರಲ್ಲಿ ಈಗಲೇ ಹುಷಾರಾಗಿ ತಾನು ಕೂಡ ಮೋದಿಯ ಕೈ ಬಲಪಡಿಸುತ್ತೇನೆಂದರೆ...!


ಯಡ್ಡಿಯ ಇಂಥ ಲೆಕ್ಕಾಚಾರಕ್ಕೆ ಪೂರಕವಾಗೇ ಕೆಲ ಬೆಳವಣಿಗೆಗಳಾದವು. ಅದು ಕೇಂದ್ರದಲ್ಲಿ ಕಾಂಗ್ರೆಸ್ ಮಾಡಿಕೊಂಡ ಫಜೀತಿಗಳು ಮತ್ತು ಅದರ ಮಿತ್ರ ಪಕ್ಷಗಳಲ್ಲಾದ ಏರುಪೇರು. ಸಾಲದ್ದಕ್ಕೆ ರಾಜ್ಯ ಬಿಜೆಪಿಯಲ್ಲೂ ಅನಿಶ್ಚಿತತೆ ತಲೆ ಎತ್ತಿತ್ತು. ಯಡ್ಡಿಯಿಲ್ಲದೆ ತಾವು ಗೆಲ್ಲುವುದು ಕಷ್ಟವೆಂಬ ವಾಸ್ತವ ಅನೇಕ ಬಿಜೆಪಿ ನಾಯಕರಿಗಾಗಲೇ ಅರ್ಥವಾಗಿತ್ತು. ಆದರೆ ನೇರಾನೇರ ತೋರ್ಪಡಿಸಿಕೊಳ್ಳುವಂತಿಲ್ಲವಲ್ಲ, ಅದಕ್ಕೆಂದು ಸಂಘಪರಿವಾರ ಬೇರೆಯದೇ ತಂತ್ರವೊಂದನ್ನು ಹೊಸೆದಿತ್ತು. ಒಂದೆಡೆ














ನಿಭಾಯಿಸುವಷ್ಟು ಸಮರ್ಥರಾಗಿದ್ದರೆ ಈ ಗತಿ ಬರುತ್ತಿರಲಿಲ್ಲ. ಆರೆಸ್ಸೆಸ್ ನೆಟ್‌ವರ್ಕ್, ಸಂಘ ಪರಿವಾರದ ನೆರಳಲ್ಲೇ ಬೆಳೆದ ಯಡ್ಡಿಗೆ ತಾನು ಏಕಾಂಗಿ ಅನ್ನಿಸಿದ್ದು ಕೆಜೆಪಿ ಸ್ಥಾಪಿಸಿದ ನಂತರವೆ. ಯಾರ್ಯಾರನ್ನು ನಂಬಿಕೊಂಡು ತಾನು ಕೆಜೆಪಿ ಹುಟ್ಟು ಹಾಕಿದೆನೋ ಅವರ್ಯಾರೂ ತನ್ನ ಕೈಹಿಡಿಯಲೇ ಇಲ್ಲ ಎಂದು ಬಹಿರಂಗವಾಗೇ ಬಸವರಾಜ ಬೊಮ್ಮಾಯಿ, ನಿರಾಣಿ, ಕತ್ತಿ ಮುಂತಾದವರ ವಿರುದ್ಧ ಕಿಡಿಕಾರಿದ್ದೂ ಆಯಿತು.

ಅಷ್ಟಕ್ಕೂ ಯಡ್ಡಿಯ ಜೊತೆ ಕೆಜೆಪಿಯ ಬಸ್ ಹತ್ತಿದ್ದಾದರೂ ಯಾರ್ಯಾರು? ಕರಂದ್ಲಾಜೆ, ಉದಾಸಿ, ರೇಣುಕಾಚಾರ್ಯ, ಧನಂಜಯ್‌ಕುಮಾರ್, ಭಾರತಿ ಶೆಟ್ಟಿ ಮತ್ತು ಪುಟ್ಟಸ್ವಾಮಿ! ಇವರ್ಯಾರಿಗೂ ಸೋಮಣ್ಣನಂಥ ಸಂಘಟನಾ ಶಕ್ತಿಯಿರಲಿ, ಸ್ವಂತದ್ದೊಂದು ವ್ಯಕ್ತಿತ್ವವೇ ಇರಲಿಲ್ಲ. ಕರಂದ್ಲಾಜೆ ಹೇಳಿಕೇಳಿ ಯಡ್ಡಿಯ ಪರೋಪಜೀವಿ. ತನ್ನ ಸ್ವಸಾಮರ್ಥ್ಯದ ಮೇಲೆ ಕನಿಷ್ಠ ಎಮ್ಮೆಲ್ಲೇ ಸೀಟನ್ನೂ ಗೆಲ್ಲಲಾಗದ, ದುಡ್ಡು ಮಾಡುವುದನ್ನು ಬಿಟ್ಟರೆ ಆಕೆಯ ತಾಕತ್ತೊಂದೆ: ಅದು ಕ್ಯಾಮೆರಾಗಳೆದುರು ಹಲ್ಲು ಕಿರಿಯುವುದು. ಉದಾಸಿ ತನ್ನ ಮಂತ್ರಿ ಜವಾಬ್ದಾರಿಗೂ ಮಗನನ್ನು ಅವಲಂಬಿಸುವಷ್ಟು ನಿಸ್ಸಹಾಯಕ ಮತ್ತು ಸೋಂಭೇರಿ. ರೇಣುಕಾಚಾರ್ಯ ಹುಟ್ಟು ಪರೋಡಿ ಮತ್ತು ನಿರ್ನಾಮ ಮಾಡುತ್ತಾರೆ: ಬಿಜೆಪಿಗಿಂತಲೂ ಕೆಜೆಪಿಗೇ ಹೆಚ್ಚು ಸ್ಥಾನ ಲಭಿಸುತ್ತದೆ. ಜೆಡಿಎಸ್‌ಗಿಂತಲೂ ಕೆಜೆಪಿಯೇ ಮುಂದಿದೆ; ಎಂದೆಲ್ಲ ನಿರೀಕ್ಷೆ ಹುಟ್ಟಿಸಿದ್ದ ಯಡ್ಡಿಗಿದು ದೊಡ್ಡ ಆಘಾತವಾಗಿತ್ತು.

ಸಂಘಪರಿವಾರದ ಅಂತರ್‌ಜಾಲವಿಲ್ಲದೆ ರಾಜ್ಯಾದ್ಯಂತ ಕೇಡರ್‌ಗಳ ಪಡೆಯೂ ಇಲ್ಲದೆ ಸ್ವಂತ ಪಕ್ಷ ಕಟ್ಟಿದರೆ ಏನಾಗುತ್ತದೆ ಎಂಬುದರ ಬಿಸಿ ಯಡ್ಡಿಗೆ ಮೊದಲ ಬಾರಿಗೆ ತಟ್ಟಿತ್ತು. ಅಷ್ಟಕ್ಕೂ ಯಡ್ಡಿ ಬಿಜೆಪಿ ವಿರುದ್ಧ ತಿರುಗಿ ಬಿದ್ದಿದ್ದಕ್ಕಾಗಲಿ, ಕೆಜೆಪಿ ಸ್ಥಾಪಿಸಿದ್ದಕ್ಕಾಗಲಿ ಯಾವುದೇ ತಾತ್ವಿಕ ಕಾರಣವಿರಲಿಲ್ಲವಲ್ಲ!

ಏಕೆಂದರೆ ಬಿಜೆಪಿಯಿಂದ ಯಡ್ಡಿ ಹೊರಬಿದ್ದಿದ್ದು ಮತ್ತು ಹೊಸ ಪಕ್ಷ ಸ್ಥಾಪಿಸಿದ್ದು ಸಿಬಿಐ ಕುಣಿಕೆಗೆ ಸಿಲುಕಿ ತಾನು ಜೈಲುಪಾಲಾಗುವುದರ ವಿರುದ್ಧ ತಾನೆ?

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಷ್ಟೂ ಕಾಲ ಸಿಬಿಐ ಕತ್ತಿ ತನ್ನ ನೆತ್ತಿಯ ಮೇಲೆ ತೂಗುತ್ತಲೇ ಇರುತ್ತದೆ ಎಂಬ ಕಟುವಾಸ್ತವವನ್ನು ಚೆನ್ನಾಗೇ ಅರಿತಿದ್ದ ಯಡ್ಡಿ ಕಾಂಗ್ರೆಸ್ ಓಲೈಸಲೆಂದೇ ಬಿಜೆಪಿ ವಿರುದ್ಧ ಆಕ್ರೋಶದ ನಾಟಕವಾಡಿದ್ದರು. ಆ ಕಾರಣಕ್ಕೇ ಇರಬೇಕು ಸಿಬಿಐನ ಗಣಿ ಕುಣಿಕೆಯೂ ಸಡಿಲಗೊಂಡಿತ್ತು. ತನ್ಮೂಲಕ ಕಾಂಗ್ರೆಸ್‌ನ ಸುಪ್ತ ಬಯಕೆಯನ್ನೂ ಈಡೇರಿಸಿದ್ದ ಯಡಿಯೂರಪ್ಪಗೆ ಸದಾನಂದಗೌಡರನ್ನು ಮತ್ತೆ ಯಡ್ಡಿಯ ಪಾಳಯ ಸೇರುವಂತೆ ಅಣಿಗೊಳಿಸುವುದು, ಇನ್ನೊಂದೆಡೆ ಯಡ್ಡಿಯನ್ನು ಬೆಂಬಲಿಸಿದ್ದ ಒಬ್ಬೊಬ್ಬರೇ ಲಿಂಗಾಯತ ನಾಯಕರನ್ನು ಪಳಗಿಸಿಕೊಳ್ಳುವುದು. ಜೆಡಿಎಸ್‌ನಲ್ಲಿದ್ದೇ ಭ್ರಮನಿರಸನಗೊಂಡಿದ್ದ ಬಸವನಗೌಡ ಯತ್ನಾಳ್‌ರಂಥವರೇ ಮತ್ತೆ ಬಿಜೆಪಿಗೆ ಬಂದದ್ದು ಬಹು ದಿನಗಳ ಕಾಲ ತನ್ನನ್ನು ಲಿಂಗಾಯತರು ಬೆಂಬಲಿಸಲಾರರೆಂಬ ಯಡ್ಡಿಯ ನಂಬಿಕೆಯನ್ನು ಗಟ್ಟಿಗೊಳಿಸಿತ್ತು.

ಈ ಎಲ್ಲ ಲೆಕ್ಕ ಹಾಕಿಯೇ ಯಡ್ಡಿ ಬಿಜೆಪಿಗೆ ತನ್ನ ಅನಿವಾರ್ಯತೆಯನ್ನು ಅರ್ಥ ಮಾಡಿಸಿಕೊಡುವ ಗಿಮ್ಮಿಕ್ಕಿಗೆ ಕೈಯಿಟ್ಟರು. ಅದು ಶಾದಿ ಭಾಗ್ಯ ಯೋಜನೆಯ ವಿರುದ್ಧ ಫ್ರೀಡಂ ಪಾರ್ಕಿನಲ್ಲಿ ನಡೆಸಿದ ಅಹೋರಾತ್ರಿ ಧರಣಿ ಮತ್ತು ಬೆಳಗಾವಿ ಅಧಿವೇಶನದ ಬಾವಿ ಸತ್ಯಾಗ್ರಹ!

ಅದಕ್ಕೆ ತಕ್ಕಂತೆ ಬಿಜೆಪಿಯಲ್ಲಿದ್ದ ಯಡ್ಡಿ ಶಿಷ್ಯರದ್ದೇ ಪ್ರತ್ಯೇಕ ಲಾಬಿ ಶುರುವಾಯಿತು. ನಿರಾಣಿ, ಸೋಮಣ್ಣ ಬೊಮ್ಮಾಯಿ, ಕತ್ತಿ ಮುಂತಾದವರೆಲ್ಲ ಪದೇಪದೇ ಯಡ್ಡಿಯನ್ನು ಓಲೈಸುವಂತೆ ರಾಜ್ಯ ಬಿಜೆಪಿ ನಾಯಕರಿಗೆ ದುಂಬಾಲು ಬಿದ್ದರು. ಇದಕ್ಕೆ ಮತ್ತಷ್ಟು ಪುಷ್ಟಿ ಕೊಟ್ಟದ್ದು ಸದಾನಂದಗೌಡ ಮತ್ತು ಚಂದ್ರೇಗೌಡದ್ವಯರು. ಅದು ಸದ್ದಿಲ್ಲದೇ ಸಂಘ ಪರಿವಾರದ ಕಾರ್ಯಸೂಚಿಯನ್ನು ಜಾರಿಗೊಳಿಸುವ ತಂತ್ರ ಕೂಡ. ನೇರವಾಗಿ ನರೇಂದ್ರ ಮೋದಿಯನ್ನೇ ಕಂಡು ಯಡ್ಡಿಗೆ ಫೋನಾಯಿಸಿ ಮಾತಾಡಿಸಿದ ಸದಾನಂದ ಗೌಡ ರಾಜನಾಥ್‌ಸಿಂಗ್ ಮೂಲಕವೂ ಯಡ್ಡಿಗೆ ಮಸ್ಕಾ ಹೊಡೆಸಿದ್ದರು.

ಅಲ್ಲಿಗೆ ಯಡ್ಡಿ ಕೂಡ ಹೈರಾಣಾಗಿ ಹೋಗಿದ್ದರು. ಪದೇಪದೇ ರಾಜ್ಯ ಪ್ರವಾಸಕ್ಕೆ ಹೊರಡುವಷ್ಟು ಹುಮ್ಮಸ್ಸಾಗಲಿ ಆಸಕ್ತಿಯಾಗಲಿ ಯಡ್ಡಿಯಲ್ಲಿರಲಿಲ್ಲ. ಹಿಂದಿನಂತೆ ಆರೋಗ್ಯವಾಗಲಿ ದೈಹಿಕ ಸಾಮರ್ಥ್ಯವಾಗಲಿ ಈಗ ಉಳಿದಿರಲಿಲ್ಲ. ಕನಿಷ್ಠ ಆತ್ಮಬಲವಾದರೂ ಇದ್ದಿದ್ದರೆ ಆ ಮಾತು ಬೇರೆ. ಆದರೆ ಯಡ್ಡಿ ಪಾಲಿಗೆ ಕಾಲಾವಕಾಶ ಕೂಡ ಇರಲಿಲ್ಲ. ಏನೇ ನಿರ್ಧಾರ ಕೈಗೊಂಡರೂ ಅದು ಲೋಕಸಭಾ ಚುನಾವಣೆ ಮೊದಲೇ ಆಗಬೇಕು. ಅನಂತರ ಕಾಲ ಮಿಂಚಿರುತ್ತದೆ. ಏನು ಮಾಡಿದರೂ ಪ್ರಯೋಜನವಿಲ್ಲ.

ಅಷ್ಟಕ್ಕೂ ರಾಜನಾಥ್ ಸಿಂಗ್ ಮತ್ತು ನರೇಂದ್ರ ಮೋದಿ ಮೂಲಕ ಯಡ್ಡಿಗೆ ಸಿಕ್ಕ ಭರವಸೆಯೊಂದೆ. ಶಿವಮೊಗ್ಗದಿಂದ ಲೋಕಸಭೆಗೆ ಟಿಕೆಟ್ಟು, ಸಾಧ್ಯವಾದರೆ ಕೇಂದ್ರ ಮಂತ್ರಿಗಿರಿ!


ಇಂಥ ಸಣ್ಣದೊಂದು ಭರವಸೆಗೇ ಯಡ್ಡಿ ಶರಣಾಗಿಬಿಟ್ಟರು. ಇಲ್ಲಿಗೆ ತಿಂಗಳ ಹಿಂದೆಯೇ ಕೆಜೆಪಿಯ ಬಹುತೇಕ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಇದರ ಅಧಿಕೃತ ಘೋಷಣೆಯಾಗಿದ್ದು ಮಾತ್ರ ಶಿಕಾರಿಪುರದಲ್ಲಿ. ಹಿಂದಿನಿಂದ ತಪ್ಪಿಸಿಕೊಂಡು ಆಗಿರುವ ಗಾಯಕ್ಕೆ ಯಾವುದೇ ಚಿಕಿತ್ಸೆಯಿಲ್ಲದೆ ಪರದಾಡುತ್ತಿದ್ದ ಮದಗಜ ಖೆಡ್ಡಾಕ್ಕೆ ಬಿದ್ದಿದೆ. ಅದನ್ನು ಪಳಗಿಸಿ ಬೇಕಾದಂತೆ ಬಳಸಿಕೊಂಡು ನಿರುಪಯೋಗಿಯಾದಾಗ ಮೂಲೆಗುಂಪು ಮಾಡಲು ಮಾವುತರು ಸಿದ್ಧರಿದ್ದಾರೆ.

● ರಾ. ಸೋಮನಾಥ್


ಮುಹೂರ್ತಕ್ಕೆ ಮುನ್ನವೇ ಅವಮಾನ, ಅಪಶಕುನ

ಬಿಜೆಪಿಯಲ್ಲಿ ಕೆಜೆಪಿ ವಿಲೀನಗೊಳ್ಳುವ ಶಾಸ್ತ್ರೋಕ್ತ ಜಾತಕಫಲದ ಹೊರತಾಗಿಯೂ ...ಯ ಕಲಿಬಿಸಿಗೆ ಕಾರಣವಾಗುವ ಅಪಶಕುನಗಳೂ ಸಂಭವಿಸಿವೆ. ಅದು ಕೆಜೆಪಿಯಲ್ಲೇ ...ಮಿತ್ತಿದ ಪುಡಿ ಬಂಡಾಯ!

...ಕೆಜೆಪಿಯ ಆರು ಮಂದಿ ಶಾಸಕರ ಪೈಕಿ ...ವಿರದ ಗುರು ಪಾಟೀಲ್ ಮತ್ತು ಆಳಂದದ ...ರ್.ಪಾಟೀಲ್ ಬಿಜೆಪಿಗೆ ಬರಲು ಬಿಲ್‌ಕುಲ್ ...ತ್ತಿಲ್ಲ. ಯಡ್ಡಿ ಜೊತೆ ನಾಗಮಾರಪಲ್ಲಿ, ಹಿರೆ...ಕೆರಿಸ ಯು.ಬಿ. ಬಣಕಾರ್ ಮತ್ತು ಬೈಲ...ಂಗಲದ ಶಾಸಕ ವಿಶ್ವನಾಥ್ ಪಾಟೀಲ್ ಯಡ್ಡಿ ...ರಾಜಿಗೆ ಬಿದ್ದು ಅರೆ ಮನಸ್ಸಿನಿಂದಲೇ ಬಿಜೆಪಿಗೆ ...ಒಪ್ಪಿದರಾದರೂ ಗುರು ಪಾಟೀಲ್ ಮತ್ತು ...ರ್. ಪಾಟೀಲ್ ಮಾತ್ರ ಜಗ್ಗುತ್ತಿಲ್ಲ.



ಬಿ.ಆರ್. ಪಾಟೀಲ್



ಗುರು ಪಾಟೀಲ್

...ಕಾರಣವಿಷ್ಟೆ: ಇವರಿಬ್ಬರೂ ಹುಟ್ಟಾ ಆರೆಸ್ಸೆಸ್ ...ವಿರೋಧಿಗಳು ಮತ್ತು ಜಾತ್ಯತೀತ ಒಲ್ಮೆಯುಳ್ಳವರು. ಗುರು ಪಾಟೀಲರ ತಂದೆ ಶಿವಶರಣಪ್ಪ ... ಪಾಟೀಲ್ ಅನಾದಿಕಾಲದಿಂದಲೂ ಕಾಂಗ್ರೆಸ್ ರಾಜಕಾರಣ ಮಾಡಿಕೊಂಡು ...ವರು. ಯಾವತ್ತೂ ಜಾತಿರಾಜಕಾರಣವಾಗಲಿ, ಗೂಂಡಾಗಿರಿ, ಸೇಡಿನ ರಾಜಕೀಯಕ್ಕಿಳಿ... [illegible] ಶಿವಶರಣಪ್ಪಗೌಡ ಕಾಂಗ್ರೆಸ್ ಶಾಸಕರಾಗಿದ್ದುಕೊಂಡೇ ಅಕಾಲ ... ಅವರ ವಾರಸುದಾರನಾಗಿ ಎದ್ದು ನಿಂತವರು ಗುರು ಪಾಟೀಲ್, ... ಬಿಸಿರಕ್ತದ ಹುಡುಗ. ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲ ಎಂಬ ಒಂದೇ ಕಾರಣಕ್ಕೆ ಗುರು ...ಲ್ ಕೆಜೆಪಿಯ [illegible] ಆತನಿಗೆ ಕೇಸರಿ ರಾಜಕಾರಣ ಒಗ್ಗುವುದಿಲ್ಲ.

ಹಾಗೇ ಆಳಂದದ ಬಿ.ಆರ್. ಪಾಟೀಲ್ ಕೂಡ ಕಾಂಗ್ರೆಸ್ ವ್ಯಕ್ತಿಯೆ. ಖರ್ಗೆ, ಧರ್ಮಸಿಂಗ್‌ಗೆ ದೊಗ್ಗುಸಲಾಮು ಹಾಕದೆ ಸಿದ್ದರಾಮಯ್ಯನವರ ಜೊತೆ ಗುರುತಿಸಿಕೊಂಡರೆಂಬ ಒಂದೇ ಕಾರಣಕ್ಕೆ ಅವರಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿತು. ವಿಧಿಯಿಲ್ಲದೆ ಕೆಜೆಪಿಯಿಂದ ನಿಲ್ಲಬೇಕಾಯ್ತು. ತನ್ನ ಸ್ವಸಾಮರ್ಥ್ಯದಿಂದ ಗೆದ್ದಿದ್ದೂ ಆಯ್ತು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಪ್ತರಾಗಿರುವ ಬಿ.ಆರ್. ಪಾಟೀಲ್ ಕೂಡ ಆ ಕಾಲದಿಂದಲೂ ಬಿಜೆಪಿ ವಿರೋಧಿಸಿಕೊಂಡೇ ಬಂದವರು. ಜಾತ್ಯತೀತ ರಾಜಕಾರಣ ಮಾಡಿಕೊಂಡೇ ಬಂದ ಈ ಇಬ್ಬರೂ ಶಾಸಕರಿಗೆ ಬಿಜೆಪಿಯ ಕೇಸರಿ ಟೈಪಿನ ಸಂಸ್ಕೃತಿ ಒಗ್ಗದು. ಇವತ್ತಲ್ಲ ನಾಳೆ ಚೆಡ್ಡಿಗಳು ತಮ್ಮನ್ನು ಮೂಲೆ ಗುಂಪು ಮಾಡುತ್ತಾರೆಂಬ ಭೀತಿ ಬೇರೆ. ಉಸಿರುಗಟ್ಟಿಸುವ ಸಂಘ ಪರಿವಾರದ ನಿರ್ಬಂಧಗಳ ಮಧ್ಯೆ ಒದ್ದಾಡುವುದಕ್ಕಿಂತಲೂ ಸ್ವಚ್ಛಂದವಾಗಿ ಕಾಂಗ್ರೆಸ್ ನೆರಳಲ್ಲಿರುವುದೇ ಲಾಭ ಎಂಬ ನಿರ್ಧಾರಕ್ಕೆ ಇವರಿಬ್ಬರು ಬಂದಿದ್ದಾರೆ. ಇನ್ನೂ ಫಜೀತಿಯೆಂದರೆ ಸೋಕಾಲ್ಡ್ ಕೆಜೆಪಿಯ ಸಂಸ್ಥಾಪಕ ಪದ್ಮನಾಭ ಪ್ರಸನ್ನ ಈಗ ಏಕಾಏಕಿ ಯಡ್ಡಿ ವಿರುದ್ಧ ಕಾದ್ಯಾಚರಣೆಗಿಳಿದಿದ್ದಾರೆ. ತಾನೇ ಕೆಜೆಪಿಯ ಸಂಸ್ಥಾಪಕನಾಗಿರುವುದರಿಂದ ಬಿಜೆಪಿಯೊಳಕ್ಕೆ ಅದನ್ನು ವಿಲೀನಗೊಳಿಸುವುದೇ ಅಕ್ರಮವೆಂದೂ ಕೆಜೆಪಿಯ ಅಸ್ತಿತ್ವ ಉಳಿಸಿಕೊಳ್ಳಲು ಅದನ್ನು ತನ್ನ ವಿವೇಚನೆಗೆ ನೀಡಬೇಕೆಂದು ಕೋರಿ ಈಗ ಹೈಕೋರ್ಟ್ ಮೆಟ್ಟಿಲೇರಿದ್ದಾನೆ. ಕೆಜೆಪಿಯ ಅಸ್ತಿತ್ವ ಉಳಿಸಿಕೊಳ್ಳಲು ಪ್ರಸನ್ನನಿಗೆ ಕೋರ್ಟ್ ಅಧಿಕಾರ ನೀಡಬಹುದು. ಆದರೆ ಸಾಮಾಜಿಕವಾಗಿ ಯಡ್ಡಿ ಅನುಭವಿಸಬೇಕಾದ ಫಜೀತಿಯಿದೆಯಲ್ಲ, ಇದೂ ಕೂಡ ಅವಮಾನ ತಾನೆ.

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್


ತಿಳಿಗೇಡಿಗಳ ಅವಾಂತರ



ಆಪ್ ಕಚೇರಿ ಮೇಲೆ ದಾಳಿ....



ದಾಳಿಯಲ್ಲಿ ಭಾಗವಹಿಸಿದ ವಿಷ್ಣು ಗುಪ್ತ ಬಿಜೆಪಿ ಅಧ್ಯಕ್ಷನ ಜತೆ



ವಿಷ್ಣು ಗುಪ್ತ ಬಿಜೆಪಿ ಮತ್ತು ಸಂಘ ಪರಿವಾರದ ಮುಖಂಡರುಗಳ ಜೊತೆ...

ತಿಳಿಗೇಡಿಗಳು ತಮ್ಮಷ್ಟಕ್ಕೆ ಅಪಾಯಕಾರಿಗಳಲ್ಲ, ಅವರನ್ನು ಪ್ರಚೋದಿಸುವ ಮಂದಿ ಅಪಾಯಕಾರಿ. ಹೀಗೆ ತಿಳಿಗೇಡಿಗಳನ್ನು ಕಲೆ ಹಾಕಿ ಅವರಿಂದ ಮಾಡಬಾರದ ಕೆಲಸಗಳನ್ನು ಮಾಡಿಸುವ ಪರಂಪರೆ ಆರೆಸ್ಸೆಸ್‌ದು. ಅದು ತನ್ನ ಈ ಹೀನಕೃತ್ಯಗಳಿಗೆ ನಾನಾ ಮುಖವಾಡ ತೊಟ್ಟುಕೊಳ್ಳುತ್ತದೆ. ಮಸೀದಿ ಕೆಡವಲು ಒಂದು, ಚರ್ಚ್ ದಾಳಿಗೆ ಇನ್ನೊಂದು ಹೀಗೆ. ಇನ್ನೂ ಒಂದು ಗಮನಿಸಬೇಕಾದ ಸಂಗತಿ ಎಂದರೆ, ಈ ಆರೆಸ್ಸೆಸ್‌ನ ರಾಜಕೀಯ ಮುಖವಾಡ ಆದ ಬಿಜೆಪಿಗೆ ಅನುಕೂಲ ಆಗಬೇಕು ಎಂದಾಗ ಅಥವಾ ಅದಕ್ಕೆ ಎಲ್ಲೋ ಗ್ರಹಚಾರ ವಕ್ಕರಿಸಿತು ಎಂದಾಗ ಈ ಮುಖವಾಡಗಳು ಎದ್ದು ಕುಣಿಯಲಾರಂಭಿಸುತ್ತವೆ. ಈಗ ಅಂಥದ್ದೆ ಮುಖವಾಡ ಒಂದು ಆಮ್ ಆದ್ಮಿ ಪಾರ್ಟಿಯ ಕಚೇರಿ ಧ್ವಂಸ ಮಾಡಿದೆ.

ಇದಕ್ಕೆ ಅವರೇನೇ ಕಾರಣ ಕೊಟ್ಟುಕೊಳ್ಳಲಿ, ಅದಲ್ಲ ಇಲ್ಲಿ ಮುಖ್ಯ. ಕಳೆದ ವಿಧಾನಸಭೆ ಚುನಾವಣೆ ಬಿಜೆಪಿ ಪಾಲಿಗೆ, ಇದ್ದಿದ್ದು ಉಳಿಸಿಕೊಂಡು ಬಂದಿದ್ದೆ ದೊಡ್ಡದಾಯ್ತು ಅನ್ನೊ ಹುಚ್ಚಪ್ಪನ ಕತೆ ಹಾಗೆ. ಇಲ್ಲಿ ಮೋದಿ ಮ್ಯಾಜಿಕ್ಕೂ ಇಲ್ಲ, ಮತ್ತೊಂದೂ ಇಲ್ಲ ಅನ್ನೋದು ಖಾತರಿ ಆಗ್ತಾ ಇದ್ದ ಹಾಗೆ ಅವರ ಕಣ್ಣು ಬಿದ್ದಿದ್ದು ಆಮ್ ಆದ್ಮಿ ಪಾರ್ಟಿ ಮೇಲೆ. ದೆಹಲಿ ವಿಧಾನಸಭೆ ಗೆದ್ದಿದ್ದರೆ, ಪಾರ್ಲಿಮೆಂಟೂ ನಮ್ಮದೇ ಅಂತ ಕೊಚ್ಚಿಕೊಬಹುದಿತ್ತು, ಅದಕ್ಕೆ ಅಡ್ಡಗಾಲು ಈ ಆಮ್ ಆದ್ಮಿ. ಇಷ್ಟೇ ಅಲ್ಲ ಈಗ ಇದರಿಂದಲೇ ಇವರ ದೆಹಲಿ ಕನಸಿಗೂ ಸಂಚಕಾರ ಬಂದಿದೆ.

ಮೋದಿನ ಸಿಂಗಾರಬಂಗಾರ ಮಾಡಿ ಇವರು ಕುದುರೆ ಮೇಲೆ ಕೂರಿಸಿ ಯಾಗಕ್ಕೆ ಬಿಟ್ಟ ಕುದುರೆ ಹಾಗೆ ದೇಶವೆಲ್ಲ ತಿರುಗಿಹಾಕಿಸಿದಾಗ ಕಂಪ್ಯೂಟರ್ ಪಾರ್ಟಿಗಳೆಲ್ಲ ಇವರಿಗೆ ಬೆಂಬಲವಾಗಿ ನಿಂತಿದ್ದರು. ಆಗ ಆಮ್ ಆದ್ಮಿ ಇನ್ನೂ ಎಳೇ ಸಸಿ. ಹತ್ತು ತಿಂಗಳಲ್ಲಿ ಬಲಿತು ಮರ ಅನ್ನಿಸಿಕೊಂಡ ಕ್ಷಣ ಈ ಟೆಕ್ಕಿಗಳಿಗೆ ಮತ್ತು ಅವರಂಥವರಿಗೆ, ಕೊಲೆಗಡುಕ ಮೋದಿಗಿಂತ ಇವರು ವಾಸಿ ಅನ್ನಿಸಿತು. ಇವರೆಲ್ಲ ಹೆಚ್ಚಾಗಿ ಇರೋದು ಪಟ್ಟಣಗಳಲ್ಲಿ, ಬಿಜೆಪಿಗೆ ಅನಿವಾರ್ಯವಾಗಿ ಓಟು ಮಾಡ್ತಾ ಇದ್ದೋರು ಇವರೇ. ಇವರೆಲ್ಲ ಕೈಕೊಟ್ಟರೆ, ಮೋದಿ ಇರಲಿ, ಅವನ ಬಾಲ ಕೂಡ ಪಾರ್ಲಿಮೆಂಟ್ ಮುಖ ನೋಡೋಕ್ಕಾಗಲ್ಲ ಅನ್ನಿಸಿದ್ದೇ, ಆಮ್ ಆದ್ಮಿ ಇವರ ಟಾರ್ಗೆಟ್ ಆಯ್ತು.

ಕುರಿ ತೋಳದ ಹಾಗೆ ಇವರಿಗೊಂದು ನೆವ ಬೇಕಿತ್ತು; ಅಲ್ಲಿ ಡೆಲ್ಲಿ ದೊರೆ ಅನಿಸಿಕೊಂಡಿರೋ ಕೇಜ್ರಿವಾಲ್ ಬೇರೆ ಪೊಲೀಸರೂ ಬೇಡ, ಯಾರೂ ಬೇಡ. ನಮ್ಮ ಪಾಡಿಗೆ ನಮ್ಮನ್ನ ಕೆಲಸ ಮಾಡೋಕ್ಕೆ ಬಿಡ್ರಪ್ಪ ಅಂತ ಗುಟುರು ಹಾಕತಾ ಇರೋವಾಗ; ಉತ್ತರನ ಪೌರುಷ ತೋರಿಸಲು ಇದೇ ಛಾನ್ಸು ಅಂತ ಘಾಜಿಯಾಬಾದ್‌ನಲ್ಲಿ ಆಮ್ ಆದ್ಮಿ ಕಚೇರಿಗೆ ಲಗ್ಗೆ ಹಾಕಿ, ಕಲ್ಲು ಬೀಸಿ, ಕೇಕೆ ಹಾಕಿ ಕುಣಿದರು. ಇದೆಲ್ಲ ಪಿಶಾಚಿಗಳು, ಯಾರಿಂದಲೋ ಪ್ರಚೋದನೆ ಪಡೆದ ತಿಳಿಗೇಡಿಗಳು ಮಾತ್ರ ಮಾಡಬಹುದಾದ ಕೆಲಸ. ಕೇಳಿದರೆ, ಪ್ರಶಾಂತ್ ಭೂಷಣ್ ಹಾಗಂದರು, ನಾವು ಹೀಗೆ ಮಾಡಿದೆವು ಅನ್ನುತ್ತವೆ ಈ ತಿಳಿಗೇಡಿಗಳು. ಬಿಜೆಪಿ ಕಣ್ಣೊರೆಸೋ ಮಾತಾಡುತ್ತೆ, ಕಾಶ್ಮೀರದ್ದು ಮಹಾ ಸಮಸ್ಯೆ ಏನಲ್ಲ, ಅದಕ್ಕೊಂದು ಪರಿಹಾರ ಇದು ಅಂತ ತಿಳಿವಳಿಕೆ ಹೇಳಿದರೆ, ಅದೇ ಈ ಮೂರ್ಖರಿಗೆ ದೊಡ್ಡ ತಪ್ಪಾಗಿ ಕಾಣುತ್ತೆ, ಅದಕ್ಕೇ ಕೇಜ್ರಿವಾಲ್ ಕೇಳಿದ್ದು 'ಏನ್ರಪ್ಪ ನಮ್ಮನ್ನ ಕೊಂದರೆ ಕಾಶ್ಮೀರ ಸಮಸ್ಯೆ ಬಗೆಹರಿಯುತ್ತಾ?' ಅಂತ.

ಪಾರ್ಲಿಮೆಂಟು ಚುನಾವಣೆ ಅನ್ನೋದು ಬಿಜೆಪಿ ಪಾಲಿಗೆ ಈಗ ನುಂಗಲಾಗದ ತುತ್ತು, ಉತ್ತರ ಪ್ರದೇಶದಲ್ಲಿ ಗೆಲ್ಲೋದು ಕಷ್ಟ ಅನ್ನಿಸಿದಾಗ ಅಲ್ಲಿ ಕೋಮು ಗಲಭೆ ಮಾಡಿಸಿದರು. ಅಲ್ಲಿ ಗಲಭೆ ಮಾಡಿದವರನ್ನು ಕರೆದು ಮೋದಿ ಎದುರಲ್ಲೇ ಸನ್ಮಾನ ಮಾಡಿಸಿದರು. ನಿಷ್ಪಾಪಿ ಜನಗಳನ್ನು ಕೊಂದವರನ್ನ ಜೈಲಿಗೆ ಹಾಕಿದರೆ, ಅವರನ್ನ ಜಾಮೀನು ಮೇಲೆ ಬಿಡಿಸಿ, ಜೈಲಿನ ಬಾಗಿಲಿಗೇ ಹೋಗಿ ಹಾರ ಹಾಕಿ ಕರೆದು ತಂದರು.

ಈಗ ಆಮ್ ಆದ್ಮಿ ಪಾರ್ಟಿ ಇವರ ಕಣ್ಣಿನ ಕಿಸುರಾಗಿದೆ. ಅಲ್ಲಿರೋರೆಲ್ಲ ವಿದ್ಯಾವಂತರು, ಮಧ್ಯಮ ವರ್ಗದವರು. ಗೂಂಡಾಗಿರಿಗೆ ಹೆದರೋ ಜನ. ಅಲ್ಲಿ ಹೋಗಿ ನಾಲ್ಕು ಧಮಕಿ ಹಾಕಿದರೆ ಇವರೆಲ್ಲ ಮುದರಿಕೊತಾರೆ. ನಮಗ್ಯಾಕೆ ಬೇಕಪ್ಪ ಈ ಉಸಾಬರಿ ಎಲ್ಲ ಅಂತ ತಣ್ಣಗಾಗ್ತಾರೆ. ಆಗ ತಮ್ಮ ದಾರಿ ಸಲೀಸು ಅಂದುಕೊಂಡರು. ಕಣ್ಣು ಮುಚ್ಚಿಕೊಂಡು ಹಾಲು ಕುಡಿಯೋ ಕಳ್ಳ ಬೆಕ್ಕಿನ ಹಾಗೆ ಬಿಜೆಪಿ ತಾನು ಮಹಾ ಸಾಚ ಅಂತ ತೋರಿಸಿಕೊಳ್ಳೋಕೆ ನಾಟಕ ಮಾಡ್ತಾ ಇದೆ.

ಗಮನಿಸಿ ನೊಡಿ, ಈಗ ಬಿಜೆಪಿಯವರೆಲ್ಲ ಕಾಂಗ್ರೆಸ್ ಬಿಟ್ಟು ಆಮ್ ಆದ್ಮಿ ಪಾರ್ಟಿ ಬಗ್ಗೇನೇ ದಿನಕ್ಕೊಂದು ಸ್ಟೇಟ್‌ಮೆಂಟು ವಗಾಯಿಸ್ತಾ ಇದಾರೆ. ಅದಕ್ಕೆ ಅಂತಲೇ ಹೊಸ ಹೊಸ ವಕ್ತಾರರು ಬೇರೆ ಹುಟ್ಟಿಕೊಂಡಿದಾರೆ. ಇದು ನೋಡಿದರೆ ಸಾಕು, ಈ ಪಾರ್ಟಿಯವರು ಆ ಪಾರ್ಟಿಗೆ ಎಷ್ಟು ಹೆದರಿದಾರೆ ಅನ್ನೋದು ಗೊತ್ತಾಗುತ್ತೆ. ಬೆಳೆಯೋ ಕುಡಿನ ಚಿಗುರಲ್ಲೇ ಚಿವುಟ, ದಾರಿ ಸಲೀಸು ಮಾಡಿಕೊಳ್ಳೋ ಹುನ್ನಾರದಲ್ಲಿ ಆಫೀಸ್‌ಗೆ ನುಗ್ಗಿ ದಾಂಧಲೆ ಮಾಡಿದಾರೆ. ಜನ ಇದೆಲ್ಲ ನೋಡಿ ಇವತ್ತು ಸುಮ್ಮನೆ ಇರಬಹುದು. ಆದರೆ ಅವರಿಗೆ ಮೋದಿ ಎಂಥ ಪ್ರಳಯಾಂತಕ ಅನ್ನೋದೂ, ಕನಿಷ್ಠ ಜನರ ಬಗ್ಗೆ ಕಾಳಜಿ ಆದರೂ ಆಮ್ ಆದ್ಮಿಗೆ ಇದೆ ಅನ್ನೋದೂ ಚೆನ್ನಾಗಿ ಗೊತ್ತಿದೆ. ಸರಿಯಾದ ಹೊತ್ತಲ್ಲಿ ಈ ಭಂಡರಿಗೆ ಹೇಗೆ ಗೂಸಾ ಕೊಡಬಹುದು ಅನ್ನೋದೂ ಅವರಿಗೆ ಗೊತ್ತು.

ದೆಹಲಿ ಚುನಾವಣೇಲಿ ನಮ್ಮನ್ನ ಸೋಲಿಸೋರು ಯಾರು ಅಂತ ಮೀಸೆ ತಿರುವಿಕೊಂಡು ಓಡಾಡಿದ್ದ ಇವರ್‍ಯಾರಿಗೂ ಸುಳಿವೂ ಕೊಡದ ಹಾಗೆ ಎರಡೂ ದೊಡ್ಡ ಪಾರ್ಟಿಗಳನ್ನು ಜನ ಮಣ್ಣು ಮುಕ್ಕಿಸಿದರು. ಅದರ ಕಿಚ್ಚು ಇನ್ನೂ ಆರೋ ಮುಂಚೇನೇ, ಕಾಂಗ್ರೆಸ್ ಕೈಹಿಡಿದು ಕೇಜ್ರಿವಾಲ್ ರಾಂಲೀಲಾ ಮೈದಾನದಲ್ಲಿ ಮುಖ್ಯಮಂತ್ರಿ ಆದಾಗ ಇವರಿಗೆ ಹೊಟ್ಟೇಲೆ ಹುಣಿಸೆ ಹಣ್ಣು ಕಿವುಚಿದ ಹಾಗಾಯ್ತು.

ಯುಪಿ ಗೆಲ್ಲೋಕ್ಕಾಗಲ್ಲ ಅಂತ ಹರ್ಯಾಣದ ಜಾಟರನ್ನು ಕರೆದು ತಂದು ಕಗ್ಗೊಲೆ ಮಾಡಿಸಿ ಅಸಹಾಯಕ ಜನ ಜೀವಭಯದಿಂದ ಮನೆ ಬಿಟ್ಟು ಓಡಿ ಹೋಗೋ ಹಾಗೆ ಮಾಡಿದ ಸಾಧನೆ ಇನ್ನೂ ಹಸಿ ಆಗಿದೆ. ಹೀಗೆ ಇವರನ್ನೂ ಓಡಿಸೋಣ ಅಂದುಕೊಂಡ ಕೇಸರಿ ಪಡೆ ಇನ್ನೂ ಒಂದು ತಿಳಕೋಬೇಕಾಗಿದೆ. ಜನ, ಇವರು ತಿಳಕೊಂಡ ಹಾಗೆ ಮೂರ್ಖರಲ್ಲ. ದಕ್ಷಿಣದಲ್ಲಿ ಬಹುಪಾಲು ರಾಜ್ಯಗಳಲ್ಲಿ ಇವರಿಗೆ ಒಂದೂ ಸೀಟು ಬಂದಿಲ್ಲ, ಮುಂದೆ ಬರೋದೂ ಇಲ್ಲ. ಯುಪಿಲಿ ಗೆಲ್ಲೋಕ್ಕಾಗಲ್ಲ, ಪಟ್ಟಣಗಳನ್ನ ನಂಬಿಕೊಂಡಿದ್ದರು. ಅದು ಈಗ ಕೈಬಿಡೋ ಎಲ್ಲಾ ಲಕ್ಷಣ ಕಾಣಿಸ್ತಾ ಇದೆ. ಹತಾಶರಾಗಿ ಮೈ ಪರಚಿಕೊಳ್ಳೊ ಕೆಲಸಕ್ಕೆ ಕೈ ಹಾಕಿದಾರೆ. ಇದರಿಂದ ಅವರಿಗೆ ಒಳ್ಳೇದಾಗುತ್ತೆ ಅಂದುಕೊಂಡಿದ್ದರೆ, ಅದು ಬರೀ ಭ್ರಮೆ. ■

ಮುಜಫರ್‌ನಗರ ಗಲಭೆ: ಬೆಂಕಿಗೆ 'ಪುಸ್ತಕ' ಸುರಿಯುತ್ತಿರುವ ಆರ್‌ಎಸ್‌ಎಸ್

ಉತ್ತರ ಪ್ರದೇಶದ ಮುಜಫರ್‌ನಗರದಲ್ಲಿ ನಡೆದ ಕೋಮುಗಲಭೆ ನೂರಾರು ಕುಟುಂಬಗಳನ್ನು ನಿರಾಶ್ರಿತರನ್ನಾಗಿಸಿದೆ. ಸಹಸ್ರಾರು ಜನ ಇನ್ನೂ ನಿರಾಶ್ರಿತ ಶಿಬಿರಗಳಲ್ಲೇ ಭವಿಷ್ಯದ ನಿರೀಕ್ಷೆಯಲ್ಲಿದ್ದಾರೆ. ಸ್ವಾತಂತ್ರ್ಯಾನಂತರ ನಡೆದಿರುವ ಈ ಬಹುದೊಡ್ಡ ಗಲಭೆಗೆ ತತ್ತರಿಸಿಹೋಗಿರುವ ಉತ್ತರ ಪ್ರದೇಶ ಪಶ್ಚಿಮ ಪ್ರಾಂತ್ಯ ಬದುಕು ಸಹಜ ಸ್ಥಿತಿಗೆ ಮರಳಿದರೆ ಸಾಕೆಂಬ ಭಯದಲ್ಲಿ ದಿನ ದೂಡುತ್ತಿದ್ದರೆ ಆರ್‌ಎಸ್‌ಎಸ್ ಬೆಂಕಿಗೆ ತುಪ್ಪ ಸುರಿಯುವ ಹರಾಮಿ ಕೆಲಸ ಶುರುವಿಟ್ಟು ಕೊಂಡಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆದ ಕೋಮು ಗಲಭೆಯಲ್ಲಿ ಕೊಲೆಯಾದ ಜಾಟ್ ಸಮುದಾಯದ ಯುವಕರ ಸಾವುಗಳನ್ನು ಹಿಂದೂ ಧರ್ಮದ ಮೇಲಿನ ದೌರ್ಜನ್ಯ ಎನ್ನುವಂತೆ ಚಿತ್ರಿಸಿರುವ 'ಮುಜಫರ್‌ನಗರ್ ದಂಗಾ' ಎನ್ನುವ ಪುಸ್ತಕವೊಂದನ್ನು ಮುದ್ರಿಸಿ ಉತ್ತರ ಪ್ರದೇಶದ ತುಂಬೆಲ್ಲಾ ಹಂಚುತ್ತಿರುವ ಆರ್‌ಎಸ್‌ಎಸ್ ಅಲ್ಪಸಂಖ್ಯಾತರ ವಿರುದ್ಧ ಮತ್ತು ಸಮಾಜವಾದಿ ಸರ್ಕಾರದ ವಿರುದ್ಧ ಜನರನ್ನು ಪ್ರಚೋದಿಸುತ್ತಿದೆ. ಈ ಪುಸ್ತಕದಲ್ಲಿ ಲೇಖಕ ಯಾರು ಎಂಬುದು ಇಲ್ಲವಾದರು ಪ್ರಕಾಶಕರ ವಿಳಾಸದಲ್ಲಿ 'ವಿಶ್ವ ಸಂವಾದ ಕೇಂದ್ರ, 105, ಆರ್ಯ ನಗರ, ಸೂರಜ್‌ಕುಂಡ್ ರೋಡ್, ಮೀರತ್' ಎಂದಿದೆ. ಇದು ಮೀರತ್ ಆರ್‌ಎಸ್‌ಎಸ್ ಶಾಖಾ ಕಚೇರಿಯ ವಿಳಾಸ!

ಸಚಿನ್ ಮತ್ತು ಸೌರವ್ ಎಂಬಿಬ್ಬರು ಸಹೋದರರು. ತಮ್ಮ ತಂಗಿಯನ್ನು ಚುಡಾಯಿಸಿದ ಮುಸ್ಲಿಂ ಯುವಕನ ಹತ್ಯೆ ಮಾಡಿದ್ದಕ್ಕಾಗಿ ಪ್ರತಿಯಾಗಿ ಅವರನ್ನು ಕೊಲೆ ಮಾಡಲಾಗಿದೆ. ಕೋಮುದಳ್ಳುರಿ ತನ್ನ ಕೆನ್ನಾಲಿಗೆ ಚಾಚಲು ಇದೇ ಕಾರಣ ಎಂದು ಪುಸ್ತಕದಲ್ಲಿ ವಿವರಿಸಲಾಗಿದೆ. ಆದರೆ ಸ್ಥಳೀಯರ ಪ್ರಕಾರ ಕೋಮುಗಲಭೆಯನ್ನು ವ್ಯವಸ್ಥಿತವಾಗಿ ಹುಟ್ಟುಹಾಕಲಾಗಿತ್ತು, ಅಕಸ್ಮಾತ್ತಾಗಿ ನಡೆದ ಈ ದುರ್ಘಟನೆಯನ್ನು ಗಲಭೆ ಭುಗಿಲೇಳಿಸಲು ಬಳಸಿಕೊಳ್ಳಲಾಗಿತ್ತೆಂಬುದು ತಿಳಿದು ಬಂದಿದೆ. ಆದರೆ ಪುಸ್ತಕದಲ್ಲಿ ಈ ವಾಸ್ತವವನ್ನು ಬೇಕಂತಲೇ ಮುಚ್ಚಿ ಜಾಟ್ ಸಹೋದರರ ಕೊಲೆಯನ್ನೇ ಗಲಭೆಯ ಕಿಡಿಯನ್ನಾಗಿ ಸಲಾಗಿದೆ. ಆ ಇಬ್ಬರು ಹುಡುಗರ ಫೋಟೋಗಳನ್ನು ಅದರಲ್ಲಿ ಮುದ್ರಿಸಿದ್ದಾರೆ. ಲೇಖಕನ ಹೆಸರೇ ಇಲ್ಲದ ಈ ಪುಸ್ತಕದ ಸಂಪಾದಕೀಯ ಬರಹದಲ್ಲಿ 'ಸಹೋದರಿ ಮೇಲೆ ನಡೆಯುವ ಅಸಭ್ಯ ವರ್ತನೆಯನ್ನು ಯಾವ ಸಹೋದರ ತಾನೆ ಸಹಿಸಿ ಕೊಂಡಾನು?' ಎಂದು ಇಡೀ ಪ್ರಕರಣಕ್ಕೆ ನೈತಿಕ ಪ್ರಚೋದನೆ ನೀಡಲೂ ಪ್ರಯತ್ನಿಸಲಾಗಿದೆ.


ಸಮಾಜವಾದಿ ನೇತೃತ್ವದ ರಾಜ್ಯ ಸರ್ಕಾರವನ್ನು 'ಮುಸ್ಲಿಂ ಓಲೈಕೆ' ಸರ್ಕಾರ ಅಂತ ಪುಸ್ತಕದಲ್ಲಿ ಜರಿಯಲಾಗಿದೆ. 'ಎಸ್.ಪಿ ಸರ್ಕಾರವು ಮುಸ್ಲಿಂ ವಿರೋಧವನ್ನು ಕಟ್ಟಿಕೊಂಡರೆ ಅಧಿಕಾರ ಕಳೆದುಕೊಳ್ಳಬೇಕೆಂಬ ಭಯಕ್ಕೆ ಬಿದ್ದಿದೆ. ಆದ್ದರಿಂದಲೇ ಸಿಎಂ ಅಖಿಲೇಶ್ ಯಾದವ್ ಗಲಭೆಯಲ್ಲಿ ಮೃತಪಟ್ಟ ಮುಸ್ಲಿಮರಿಗೆ ಐದು ಲಕ್ಷ ಪರಿಹಾರ ಘೋಷಿಸಿದ್ದಾರೆ' ಎಂದು ಉಲ್ಲೇಖಿಸಿರುವ ಆರ್‌ಎಸ್‌ಎಸ್ ಹೊತ್ತಿಗೆಯ ಹಿಂದಿರುವುದು ಸರ್ಕಾರದ ವಿರುದ್ಧ ಜನರನ್ನು ಕೆರಳಿಸುವ ಉದ್ದೇಶ ಮಾತ್ರ.


ಇಂಥದ್ದೊಂದು ಸಮಾಜ ವಿಧ್ವಂಸಕ ಕೃತ್ಯವನ್ನು ಲಜ್ಜೆಗೆಟ್ಟು ಸಮರ್ಥಿಸಿಕೊಂಡಿರುವ ಆರ್‌ಎಸ್‌ಎಸ್ ಪ್ರಚಾರಕ ಶಿವಪ್ರಕಾಶ್ 'ರಾಜ್ಯ ಸರ್ಕಾರ ಘಟನೆ ಕುರಿತು ಸುಳ್ಳು ಹೇಳಿಕೆ ನೀಡುತ್ತಿರುವುದರಿಂದ ಮುಜಫರ್ ನಗರದ ಗಲಭೆಯ ಕುರಿತು ನಿಜಸಂಗತಿಗಳನ್ನು ತಿಳಿಸಿ ಸಮಾಜವನ್ನು ಜಾಗೃತಿಗೊಳಿಸುವ ಸಲುವಾಗಿ ಈ ಪುಸ್ತಕವನ್ನು ಮೀರತ್‌ನ ಆರ್‌ಎಸ್‌ಎಸ್ ಶಾಖೆಯೇ ಪ್ರಕಟಿಸಿದೆ. ಸರ್ಕಾರವೇ ಸಮುದಾಯವೊಂದರತ್ತ ಹೀಗೆ ಪೂರ್ವಗ್ರಹಪೀಡಿತ ಮನೋಭಾವ ತಳೆದಿದ್ದಾಗಲೇ ಕೆರಳದ ಜನ, ಸತ್ಯಸಂಗತಿಗಳನ್ನು ತಿಳಿಸುವ ಈ ಪುಸ್ತಕ ಓದುವುದರಿಂದ ಜನ ಪ್ರಚೋದಿತರಾಗುತ್ತಾರೆನ್ನಲು ಸಾಧ್ಯವಿಲ್ಲ' ಎಂದು ಪತ್ರಿಕೆಯೊಂದಕ್ಕೆ ರಾಜಾರೋಷವಾಗಿ ಸಂದರ್ಶನ ನೀಡಿದ್ದಾನೆ.

ಆಘಾತಕರ ಸಂಗತಿಯೆಂದರೆ ಈಗಾಗಲೇ ಗಲಭೆಯಿಂದ ಜರ್ಝರಿತವಾಗಿರುವ ಪ್ರಾಂತ್ಯದಲ್ಲಿ ಶಾಂತಿಯನ್ನು ಕದಡಲು ಇಂತಹದ್ದೊಂದು ಸಮಾಜ ಘಾತುಕ ಕೆಲಸ ನಡೆಯುತ್ತಿದ್ದರೂ ಜಿಲ್ಲಾಡಳಿತವಾಗಲಿ, ರಾಜ್ಯ ಸರ್ಕಾರವಾಗಲಿ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಪೊಲೀಸರು ಅವರ ಪರ ಮೃದು ಧೋರಣೆ ತಳೆದಿರುವುದರಿಂದ ತಮ್ಮ ಕೆಲಸವನ್ನು ನಿರಾತಂಕವಾಗಿ ಮುಂದುವರೆಸುತ್ತಿದ್ದಾರೆ.


ಬಿಜೆಪಿಯ ಮಾಜಿ ಸಚಿವ ಸುಧೀರ್ ಕುಮಾರ್ ಬಲಿಯಾನ್ ಮತ್ತು ಗಲಭೆಯಲ್ಲಿ ಭಾಗವಹಿಸಿದ ಹಿಂದೂ ದಂಗೆಕೋರರ ಪರ ವಾದಿಸುತ್ತಿರುವ ವಕೀಲ ಜಗಬೀರ್ ಸಿಂಗ್ 'ಫೈಸ್ಲಾ ಆಪ್‌ಕಾ? ಭಾರತ್: ದರೂಲ್ ಹರಬ್ ಯಾ ದರೂಲ್ ಇಸ್ಲಾಂ' ಎನ್ನುವ 94 ಪುಟಗಳ ಮತ್ತೊಂದು ಪ್ರಚೋದನಕಾರಿ ಕೈಪಿಡಿಯನ್ನು ಹಂಚುತ್ತಿದ್ದಾರೆ. ಇಂತಹ ನಾಲ್ಕು ಸಾವಿರ ಪುಸ್ತಕ ಹಂಚಿರುವುದಾಗಿ ಸ್ವತಃ ಬಿಜೆಪಿ ಬಲಿಯಾನ್‌ನೆ ಹೇಳಿಕೊಂಡಿದ್ದಾನೆ. ಆ ಪುಸ್ತಕದಲ್ಲಿ 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಹುನ್ನಾರದಿಂದ ಸಮಾಜವಾದಿ ಪಾರ್ಟಿಯ ಮುಲಾಯಂ ಸಿಂಗ್ ಯಾದವ್ ಅಪರಾಧಗಳಲ್ಲಿ ಭಾಗಿ ಯಾಗಿದ್ದ ಮುಸ್ಲಿಂ ಯುವಕರನ್ನು ಬಳಸಿಕೊಂಡು ಮುಜಫರ್ ನಗರದಲ್ಲಿ ಗಲಭೆ ಸೃಷ್ಟಿಸಿದ್ದಾರೆ' ಎಂದು ಜನರನ್ನು ತಪ್ಪು ದಾರಿಗೆ ಎಳೆಯಲಾಗಿದೆ. ವಕೀಲ ಜಗ್‌ಬೀರ್ ಸಿಂಗ್ ಹೇಳುವಂತೆ ಈ ಪುಸ್ತಕವನ್ನು ಮುದ್ರಿಸಲು ಬಿಜೆಪಿ, ಆರ್‌ಜೆಡಿ ಮತ್ತು ಕಾಂಗ್ರೆಸ್ ರಾಜಕೀಯ ಮುಖಂಡರುಗಳೇ ಹಣಕಾಸು ನೆರವು ನೀಡಿದ್ದಾರಂತೆ.

ಅಂತೂ ಆರ್‌ಎಸ್‌ಎಸ್ ಎಂಬ ವಿಷವೃಕ್ಷಕ್ಕೆ ಶಾಂತಿ-ಸಹಬಾಳ್ವೆ ರುಚಿಸುವುದಿಲ್ಲ ಎನ್ನುವುದು ಇದರಿಂದ ಮತ್ತೊಮ್ಮೆ ಸಾಬೀತಾಗಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲಕರ ವಾತಾವರಣ ಸೃಷ್ಟಿಸುವ ಸಲುವಾಗಿ ಮುಜಫರ್‌ನಗರದಂತಹ ಗಲಭೆಗಳನ್ನು ಜೀವಂತವಾಗಿಡಲು ಇಂತಹ ನೀಚ ಕೆಲಸಕ್ಕಿಳಿದಿದೆ. ರಕ್ತಪಾತದಿಂದ ಕನಲಿಹೋಗಿರುವ ಸ್ಥಳೀಯರು ರಾಜಕೀಯ ದುರುದ್ದೇಶದಿಂದ ಕೂಡಿದ ಈ ಕೋಮು ಕುಕೃತ್ಯವನ್ನು ಹತ್ತಿಕ್ಕಬೇಕೆಂದು ಬೇಡುತ್ತಿರುವುದು ಸರ್ಕಾರಗಳ ಗಮನ ಸೆಳೆಯದಿರುವುದು ಮತ್ತೊಂದು ದೊಡ್ಡ ದುರಂತ. ■





ಅಚ್ಚರಿ ಅಂತನ್ನಿಸಿದರೂ ಇತ್ತೀಚಿನ ದಿನಗಳಲ್ಲಿ ರಾಷ್ಟ್ರಮಟ್ಟದ ಭರವಸೆ ಮತ್ತು ಜನಪ್ರಿಯತೆಗಳ ಕಾಳಗದಲ್ಲಿ ಮುಂಚೂಣಿಯಲ್ಲಿರೋದು ಬಿಜೆಪಿಯ ನರೇಂದ್ರ ಮೋದಿಯಲ್ಲ, ಆಮ್ ಆದ್ಮಿಯ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್! ಕೇಜ್ರಿವಾಲನ 'ಹೊಸ ರಾಜಕಾರಣ' ಬೃಹತ್ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿದೆ. ಆಮ್ ಆದ್ಮಿ ಸರ್ಕಾರದ ಆರಂಭ ಭಿನ್ನಮತದಿಂದ ಕೂಡಿದ್ದರೂ ಮತ್ತು ಕೋಮುವಾದದೆಡೆಗೆ ತನ್ನ ಮೌನದಂತಹ ಕೆಲ ಆರೋಪಗಳ ಹೊರತಾಗಿಯೂ ಅದು ನಗರದಲ್ಲಿ ಬಿಜೆಪಿಯ ಮತಗಳನ್ನು ಕಬಳಿಸಿ ಮೋದಿಯ ಕನಸನ್ನು ಧ್ವಂಸಗೊಳಿಸಬಹುದು.



ಮೋದಿಯೆಂಬ ಭ್ರಮೆಗೆ ಕೇಜ್ರಿಯೆಂಬ ಗ್ರಹಣ!

...ತ್ತೀಚೆಗೆ ನಡೆದ ಪಂಚರಾಜ್ಯ ಚುನಾವಣಾ ಫಲಿತಾಂಶ (ಮಿಜೋರಾಂ ... ಬಿಟ್ಟು) ಸಹಜವಾಗಿಯೇ ಬಿಜೆಪಿಗೆ ಖುಷಿ ತಂದುಕೊಟ್ಟಿವೆ. ...ದಲ್ಲಿ ತನ್ನ ಮತಗಳಿಕೆಯನ್ನು ಶೇ.12ರಷ್ಟು ಹೆಚ್ಚಿಸಿಕೊಂಡಿರುವ ಬಿಜೆಪಿ ... 163 ಕ್ಷೇತ್ರಗಳಲ್ಲಿ ಗೆದ್ದು ಕಾಂಗ್ರೆಸ್‌ನ ಮೇಲೆ ಸವಾರಿ ಮಾಡಿದೆ. ...ದೇಶದಲ್ಲಂತು 2/3 ರಷ್ಟು ನಿಚ್ಚಳ ಬಹುಮತವನ್ನು ಗಳಿಸಿದೆ. ...ಸುದೆಂದೇ ಅಂದಾಜಿಸಿದ್ದ ಛತ್ತೀಸ್‌ಘಡದಲ್ಲೂ ಪ್ರಯಾಸಪಟ್ಟು ಅಧಿಕಾರ ...ಡಿದಿದೆ. ದೆಹಲಿಯಲ್ಲಿ ಕಾಂಗ್ರೆಸ್ ಅನ್ನು ಅಧಿಕಾರದಿಂದ ದೂರವಿಡುವ ...ಬಿಜೆಪಿ ಯಶಸ್ವಿಯೂ ಆಗಿದೆ. ಈ ಗೆಲುವುಗಳನ್ನು ಮುಂಬರುವ ...ಸಭಾ ಚುನಾವಣೆಗೆ ಯಥಾವತ್ ಅನ್ವಯಿಸುವುದಾದರೆ ನಾಲ್ಕೂ ...ದ ಬಿಜೆಪಿಯ ಹಾಲಿ 30 ಎಂಪಿ ಸಂಖ್ಯಾಬಲದಿಂದ 72 ಸ್ಥಾನಗಳಿಗೆ ...ಗುವ ಸಾಧ್ಯತೆ ಇದೆ. ಬಿಜೆಪಿಯ ಖುಷಿಗೆ ಇದಕ್ಕಿಂತ ಕಾರಣಬೇಕೆ. ...ಸೂ, ಬಿಜೆಪಿಯ ಈ ಕನಸಿನ ಬಲೂನಿಗೆ 'ಆಮ್ ಆದ್ಮಿ ಪಾರ್ಟಿ' ...ಚುಚ್ಚುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ದಿಲ್ಲಿಯಲ್ಲಿ 'ಆಪ್'ನ ...ರಾಜಕಾರಣ ಅಂತದ್ದೊಂದು ಸಾಧ್ಯತೆಯನ್ನು ತೆರೆದಿಟ್ಟಿದೆ. ಅಚ್ಚರಿ ...ದರೂ ಇತ್ತೀಚಿನ ದಿನಗಳಲ್ಲಿ ರಾಷ್ಟ್ರಮಟ್ಟದ ಭರವಸೆ ಮತ್ತು ...ತೆಗಳ ಕಾಳಗದಲ್ಲಿ ಮುಂಚೂಣಿಯಲ್ಲಿರೋದು ಬಿಜೆಪಿಯ ನರೇಂದ್ರ ...ಯಲ್ಲ, ಆಮ್ ಆದ್ಮಿಯ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್! ...ನ 'ಹೊಸ ರಾಜಕಾರಣ' ಬೃಹತ್ ಸಂಖ್ಯೆಯಲ್ಲಿ ಜನರನ್ನು ...ತ್ತಿದೆ.

...ದಿಗೆ ಕೇಜ್ರಿವಾಲ್ ಗ್ರಹಣವಾಗಲಿದ್ದಾರಾ?

...ದಿ ತನ್ನ ಯಥಾಪ್ರಕಾರದ ಆಕ್ರಮಣಕಾರಿ, ಗಿಮಿಕ್ ಸಮಾವೇಶಗಳಿಂದ ...ಲಿದ್ದಾನಾ?

... 'ಪೌರುಷ ಶೈಲಿ' ಸಾಕಷ್ಟು ಬೆಂಬಲಿಗರನ್ನು ದಕ್ಕಿಸಿಕೊಡುತ್ತಾ?

...2ರ ಕೋಮುಗಲಭೆಯ ಕುರಿತ ಮೋದಿಯ 'ದುಃಖ, ನೋವು, ...ನಂತ ಪ್ರಯಾಸದ ಮತ್ತು ತಡ ಪಶ್ಚಾತ್ತಾಪಗಳು ಆತನಿಗೆ ಮುಸ್ಲಿಂ ...ವನ್ನು ಗಿಟ್ಟಿಸುತ್ತವಾ?

...ಸ್ಲಾ ಪ್ರಶ್ನೆಗಳಿಗೆ ಈಗಲೇ ನಿಖರವಾಗಿ ಉತ್ತರ ಹೇಳಲು ಸ್ವಲ್ಪ ...ಬಹುದು. ಆದರೆ ಎರಡು ಅಂಶಗಳಂತೂ ಸ್ಪಷ್ಟ. ಮೊದಲನೆಯದು, ...ಹತ್ಯಾಕಾಂಡದ ಬಗ್ಗೆ ಮೋದಿ ವ್ಯಕ್ತಪಡಿಸುತ್ತಿರುವ ಸೋಗಲಾಡಿತನದ ...ಯಾರನ್ನೂ ಮನವೊಲಿಸಿಲ್ಲ. ಎರಡನೆಯದು, ಆಮ್ ಆದ್ಮಿಯ ... ಮೋದಿಯನ್ನು ಮುಂದಿಟ್ಟುಕೊಂಡು 272 ಬಹುಮತದ ಎಂಪಿ ...ನ್ನು ಗೆಲ್ಲಬೇಕೆಂದಿದ್ದ ಬಿಜೆಪಿಯ 'ಟಾರ್ಗೆಟ್' ಮೇಲಿನ ಕರಿನೆರಳನ್ನು ... ಹೆಚ್ಚಿಸಿದ್ದಲ್ಲದೆ ಹೊಸದೊಂದು ಪರ್ಯಾಯವನ್ನೂ ಸೃಷ್ಟಿಸಿದೆ. ...ದಿ ಇರಲಿ ಅಥವಾ ಇಲ್ಲದಿರಲಿ ಈ ಟಾರ್ಗೆಟ್ ತಲುಪಲು ಬೇಕಾದ ... ನೆಲೆ ಏಕಾಂಗಿಯಾಗಿ ಬಿಜೆಪಿಗೆ ಇಲ್ಲ ಎನ್ನುವುದು ವಾಸ್ತವ. ಆದರೆ ...ಎನ್‌ಡಿಎ ಸಾಧಿಸಬಹುದೆ?

...ಪ್ರಶ್ನೆಯ ಉತ್ತರವೂ ಬಿಜೆಪಿಗೆ ನಿರಾಸೆ ತರುವಂತದ್ದೆ. ಯಾಕೆಂದರೆ ...ಗುವಾಗ ಎನ್‌ಡಿಎನಲ್ಲಿ ಇದ್ದದ್ದು 23 ಪಕ್ಷಗಳು. ಈಗದರ ಸಾಮರ್ಥ್ಯ ...ಕುಸಿದಿದೆ. ಬಿಜೆಪಿ (116 ಎಂಪಿ), ಶಿವಸೇನಾ (11 ಎಂಪಿ) ಮತ್ತು ...ನಿ ಆಕಾಲಿದಳ (4 ಎಂಪಿ) ಪಕ್ಷಗಳು ಮಾತ್ರವೇ ಎನ್‌ಡಿಎಯಲ್ಲಿ ...ವೇದು. ಜೆಡಿಯು, ತೃಣಮೂಲ ಕಾಂಗ್ರೆಸ್, ಬಿಜು ಜನತಾದಳ, ...ದೇಶಂ, ಸಾಂಪ್ರದಾಯಿಕ ತಮಿಳು ಪಾರ್ಟಿಗಳು- ಹೀಗೆ ಒಂದೊಂದೇ ...ಗಳನ್ನು ಕಳೆದುಕೊಳ್ಳುತ್ತಾ ಬಂದಿದೆ. ಬಹುಮತದ ಟಾರ್ಗೆಟನ್ನು ... ಈಗಿರುವ ಪರಿಸ್ಥಿತಿಯಲ್ಲಿ ಬಿಜೆಪಿ ಸದ್ಯದ ಸೀಟುಗಳಿಗಿಂತ ದುಪ್ಪಟ್ಟು ... ಗೆಲ್ಲಬೇಕು. ಅಂದರೆ ಅದರ ಮತಗಳಿಕೆಯನ್ನು ರಾಷ್ಟ್ರಮಟ್ಟದಲ್ಲಿ ...ನಿಂದ 30%ಗೆ ಹೆಚ್ಚಿಸಿಕೊಳ್ಳಬೇಕು. ಬಿಜೆಪಿ ಇತಿಹಾಸದಲ್ಲಿ ಈ ...ಏರಿಕೆ ಎಂದಿಗೂ ಘಟಿಸಿಲ್ಲ, ಹಿಂದುತ್ವದಂತಹ ಪ್ರಚಂಡ ಅಲೆ ...ದು 1998ರಲ್ಲಿ 182 ಸ್ಥಾನಗಳಲ್ಲಿ ಗೆದ್ದು ಪ್ರಪ್ರಥಮ ಬಾರಿಗೆ ...ದಾಗಲೇ ಬಿಜೆಪಿ ತನ್ನ ಮತಗಳಿಕೆಯನ್ನು 20.3% ...ಲ್ಲಿ ಇದ್ದದ್ದು) ರಿಂದ 25.6%ಗೆ ಹೆಚ್ಚಿಸಿಕೊಳ್ಳಲಷ್ಟೇ ಶಕ್ತವಾಗಿತ್ತು, ...ಜೆಪಿಯ ಅತ್ಯಧಿಕ ಮತಗಳಿಕೆಯೂ ಹೌದು.

...4ರಲ್ಲಿ ಎನ್‌ಡಿಎ ಅಧಿಕಾರಕ್ಕೆ ಏರಬೇಕೆಂದರೆ ಬಿಜೆಪಿ ಕನಿಷ್ಠವೆಂದರೂ ...ಲೋಕಸಭಾ ಸ್ಥಾನಗಳಲ್ಲಿ ಗೆಲ್ಲಲೇಬೇಕು. ಆಗ ಮಾತ್ರ ಇತರೆ ಸಣ್ಣ ... ಆಸಕ್ತಿ ಸರ್ಕಾರ ರಚನೆಗೆ ಮುಂದಾಗಬಹುದು. ಆದರೆ ಈಗಿರುವ ...ಸಂಖ್ಯಾಬಲದಿಂದ 200-220 ಸ್ಥಾನಕ್ಕೇರುವುದು ಬಿಜೆಪಿಗೆ ಸುಲಭದ ...ಯಾಕೆಂದರೆ, 1990ರ ದಶಕದಲ್ಲಿ ಬಿಜೆಪಿ ಕೈಹಿಡಿದ ಹಿಂದುತ್ವ ...ಹ ಯಾವ ಸಾಮಾಜಿಕ ಸಂಚಲನವೂ ಅದರ ಬೆನ್ನಿಗಿಲ್ಲ, ಹಾಗಿದ್ದರೆ ...ಸೀಟುಗಳು ಎಲ್ಲಿಂದ ಬರುತ್ತವೆ?

...ಂಶಗಳ ಪ್ರಕಾರ ಉತ್ತರ ಪ್ರದೇಶ (80 ಸ್ಥಾನ), ಬಿಹಾರ (40 ...ಮತ್ತು ಮಹಾರಾಷ್ಟ್ರ (48 ಸ್ಥಾನ) ಈ ಮೂರು ರಾಜ್ಯಗಳಲ್ಲಿನ ಅಭೂತಪೂರ್ವ ಮತಗಳಿಕೆ ಬಿಜೆಪಿಗೆ ಅಂತಹ ಯಶಸ್ಸನ್ನು ದಕ್ಕಿಸಿಕೊಡುತ್ತವೆ ಎಂದು ಹೇಳಲಾಗುತ್ತಿದೆ (ಇದರ ಶ್ರೇಯಸ್ಸು ಸಾರ್ವಜನಿಕ ನೀತಿ ಸಲಹೆಗಾರ ಮನೀಶ್ ದುಬೆಗೆ ಸಲ್ಲಬೇಕು). ಜೊತೆಗೆ ಅದು ಕಾಂಗ್ರೆಸ್‌ಗೆ ಪರ್ಯಾಯವಾಗಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಮಧ್ಯಪ್ರದೇಶ (29 ಎಂಪಿ ಸ್ಥಾನ), ಗುಜರಾತ್ (26), ರಾಜಸ್ತಾನ್ (25) ಮತ್ತು ಛತ್ತೀಸ್‌ಗಡ (11) ರಾಜ್ಯಗಳಲ್ಲೂ 2009ರ ಚುನಾವಣೆಗಿಂತ ಹೆಚ್ಚಿನ ಸೀಟು ಗೆದ್ದುಕೊಂಡರೆ ಮಾತ್ರ ಬಿಜೆಪಿಯು ಎನ್‌ಡಿಎನತ್ತ ತನ್ನ ತತ್ವ ಸಿದ್ಧಾಂತಗಳನ್ನು ಒಪ್ಪಿಯೋ, ಅಧಿಕಾರದಾಸೆಗೊ ಬರುವ ಇತರೆ ಪಕ್ಷಗಳನ್ನು ಆಕರ್ಷಿಸಬಹುದು.

ಬಿಜೆಪಿಯ ಈ ದೃಷ್ಟಿಕೋನದಿಂದ ಭಾರತದ ರಾಜಕೀಯ ಲೆಕ್ಕಾಚಾರವನ್ನು ಗಮನಿಸಿದಾಗ 35 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು. ಬಿಜೆಪಿ ಅಷ್ಟಾಗಿ ಪ್ರಾಬಲ್ಯ ಹೊಂದಿರದ ದೊಡ್ಡ ರಾಜ್ಯಗಳಾದ ಆಂಧ್ರಪ್ರದೇಶ (42 ಸ್ಥಾನ), ಪಶ್ಚಿಮ ಬಂಗಾಳ (42 ಸ್ಥಾನ) ಮತ್ತು ತಮಿಳುನಾಡು (39 ಸ್ಥಾನ) ಹಾಗೂ ಸಣ್ಣ ರಾಜ್ಯಗಳಾದ ಕೇರಳ (20), ಅಸ್ಸಾಂನೂ ಒಳಗೊಂಡಂತೆ ಈಶಾನ್ಯ ರಾಜ್ಯಗಳನ್ನು ಮೊದಲ ವರ್ಗಕ್ಕೆ ಸೇರಿಸಬಹುದು. ಈ ವರ್ಗದಿಂದ ಒಟ್ಟು 168 ಲೋಕಸಭಾ ಸ್ಥಾನಗಳು ಬರುತ್ತವೆ. ಆದರೆ ಬಿಜೆಪಿಯ ಸಾಧನೆ ಇಲ್ಲಿ ಹೇಳಿಕೊಳ್ಳುವಂತಿಲ್ಲ. ಕೆಲ ರಾಜ್ಯಗಳಲ್ಲಿ ಎರಡಂಕಿಯನ್ನು ಮುಟ್ಟಲೂ ಅದು ಹೆಣಗಾಡುವ ಪರಿಸ್ಥಿತಿ ಇದೆ.

ಇನ್ನು ಎರಡನೇ ವರ್ಗವಾಗಿ, ಬಿಜೆಪಿ ಸೀಮಿತ ಮತ್ತು ಅಸ್ಥಿರ ಪ್ರಾಬಲ್ಯ ಹೊಂದಿರುವ ಇಲ್ಲವೆ ಮಿತ್ರಪಕ್ಷಗಳೊಂದಿಗೆ ತಕ್ಕಮಟ್ಟಿನ ಪ್ರಭಾವ ಬೀರಬಹುದಾದ ರಾಜ್ಯಗಳಾದ ಕರ್ನಾಟಕ (28), ಒಡಿಶಾ (21), ಪಂಜಾಬ್ (13) ಮತ್ತು ಜಾರ್ಖಂಡ್ (14) ರಾಜ್ಯಗಳಲ್ಲದೆ ಕೆಲ ಸಣ್ಣ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಹೆಸರಿಸಬಹುದು. ಈ ವರ್ಗದಿಂದ ಒಟ್ಟು 116 ಲೋಕಸಭಾ ಸ್ಥಾನಗಳು ಲಭ್ಯವಿರುತ್ತವಾದರು ಬಿಜೆಪಿಗೆ ಪ್ರತಿಕೂಲ ವಾತಾವರಣವೇ ಹೆಚ್ಚು, ಯಾಕೆಂದರೆ ಪಂಜಾಬ್‌ನಲ್ಲಿ ಅದು ಆಕಾಲಿದಳದೊಂದಿಗೂ, ಜಾರ್ಖಂಡ್‌ನಲ್ಲಿ ಸ್ಥಳೀಯ ಪಕ್ಷಗಳೊಂದಿಗೂ ಹೊಂದಾಣಿಕೆ ಮಾಡಿಕೊಳ್ಳಬೇಕಿದೆ. ಹಾಗಾಗಿ ಏಕಾಂಗಿಯಾಗಿ ಸ್ಪರ್ಧಿಸುವ ಸ್ಥಾನಗಳ ಸಂಖ್ಯೆಯೇ ಕಡಿಮೆಯಾಗಲಿದೆ. ಬಿಜು ಜನತಾದಳದೊಂದಿಗೆ ಮೈತ್ರಿ ಮುರಿದುಕೊಂಡ ನಂತರ ಒಡಿಶಾದಲ್ಲಿ ಬಿಜೆಪಿಯ ಶಕ್ತಿ ಅಂಚಿಗೆ ಸರಿದಿದೆ. ದೆಹಲಿಯಲ್ಲಿ ಆಮ್ ಆದ್ಮಿಯ ಚೈತನ್ಯವನ್ನು ಗಮನಿಸಿದರೆ ಕೇಂದ್ರಾಡಳಿತ ಪ್ರದೇಶಗಳೂ ಬಿಜೆಪಿ ಕೈಹಿಡಿಯುವುದು ಕಷ್ಟ.

ಕರ್ನಾಟಕದಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗಿನ ದುರಾಡಳಿತ, ಬಿಜೆಪಿಯಿಂದ ಬೇರ್ಪಟ್ಟು ಯಡಿಯೂರಪ್ಪ ನೀಡಿದ ಏಟು (ಯಡಿಯೂರಪ್ಪ ಬಿಜೆಪಿಗೆ ವಾಪಾಸಾಗಿರುವುದು ಬಿಜೆಪಿಗೆ ದೊಡ್ಡಮಟ್ಟದ ಲಾಭವನ್ನೇನು ತರುವ ಸಾಧ್ಯತೆ ಇಲ್ಲ), ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಗೆಲುವುಗಳಿಂದಾಗಿ ಬಿಜೆಪಿಯ ವರ್ಚಸ್ಸು ಕುಂದಿದ್ದು ಅದು 2009ರಲ್ಲಿ ಗೆದ್ದಿದ್ದ 19 ಸ್ಥಾನದ ಆಸುಪಾಸಿಗೆ ಬರುವುದೂ ದುಸ್ತರವೆನಿಸಿದೆ.

ಮೇಲಿನ ಎರಡೂ ವರ್ಗಗಳ ರಾಜಕೀಯ ಸಂದರ್ಭ ಮತ್ತು ಬಿಜೆಪಿಯ ಪ್ರಾಬಲ್ಯವನ್ನು ಗಮನಿಸಿದರೆ ಇವುಗಳಿಂದ ಲಭ್ಯವಾಗಬಹುದಾದ ಒಟ್ಟು 284 (ಲೋಕಸಭೆಯ ಒಟ್ಟು ಸ್ಥಾನಗಳಲ್ಲಿ ಅರ್ಧಕ್ಕಿಂತ ಹೆಚ್ಚು) ಎಂಪಿ ಸೀಟುಗಳಲ್ಲಿ ಹೆಚ್ಚೂಕಡಿಮೆ ಈ ಹಿಂದಿನ ಅಂಕಿಅಂಶಕ್ಕೇ ಬಿಜೆಪಿ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ; ಕಳೆದ ಚುನಾವಣೆಯಲ್ಲಿ ಈ ಎಲ್ಲಾ 284 ಸ್ಥಾನಗಳಿಂದ ಬಿಜೆಪಿ ಗೆದ್ದದ್ದು 40ರಲ್ಲಿ ಮಾತ್ರ.

ಇನ್ನು ಮೂರನೇ ವರ್ಗಕ್ಕೆ ಬಂದರೆ, ಬಿಜೆಪಿ ಬಹುನಿರೀಕ್ಷೆ ಇರಿಸಿಕೊಂಡಿರುವ ಮಧ್ಯಪ್ರದೇಶ, ಗುಜರಾತ್, ರಾಜಸ್ತಾನ ಮತ್ತು ಛತ್ತೀಸ್‌ಗಢಗಳನ್ನು ಪಟ್ಟಿ ಮಾಡಬಹುದು. ಈ ನಾಲ್ಕೂ ರಾಜ್ಯಗಳ ಒಟ್ಟು 91 ಲೋಕಸಭಾ ಸ್ಥಾನಗಳಲ್ಲಿ 2009ರ ಚುನಾವಣೆಯಲ್ಲಿ ಬಿಜೆಪಿ 45ರಲ್ಲಿ ಗೆದ್ದಿತ್ತು ಅಲ್ಲದೆ ಈ ರಾಜ್ಯಗಳ ಪ್ರಸಕ್ತ ವಿಧಾನಸಭಾ ಚುನಾವಣೆಗಳಲ್ಲೂ ಉತ್ತಮ ಫಲಿತಾಂಶವನ್ನೇ ಕಂಡಿದೆ.

ಕಾಂಗ್ರೆಸ್‌ನ ಅಧಿಕಾರ ಕೊನೆಗಾಣಿಸಿ ಅಧಿಕಾರ ಹಿಡಿದಿರುವ ರಾಜಸ್ತಾನದಲ್ಲಿ (2009ರಲ್ಲಿ ಒಟ್ಟು 25 ಸ್ಥಾನಗಳಲ್ಲಿ 4ರಲ್ಲಿ ಬಿಜೆಪಿ ಗೆದ್ದಿತ್ತು), ಗುಜರಾತ್‌ನಲ್ಲಿ (2009ರಲ್ಲಿ 15/26) ಮತ್ತು ಮಧ್ಯಪ್ರದೇಶದಲ್ಲಿ (2009ರಲ್ಲಿ 16/29) ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಬಿಜೆಪಿಗೆ ಇರಬಹುದು ಆದರೆ ಇದೇ ನಿರೀಕ್ಷೆಯನ್ನು ಛತ್ತೀಸ್‌ಗಡಕ್ಕೂ ಅನ್ವಯಿಸಲಾಗದು. 2009ರ ಲೋಕಸಭಾ ಚುನಾವಣೆಯಲ್ಲಿ ಛತ್ತೀಸ್‌ಗಡದ ಒಟ್ಟು 11 ಸ್ಥಾನಗಳಲ್ಲಿ 10ರಲ್ಲಿ ಬಿಜೆಪಿ ಗೆದ್ದಿತ್ತಾದರು ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ತನ್ನ ಅಧಿಕಾರ ಉಳಿಸಿಕೊಳ್ಳಲೇ ಹೆಣಗಾಡಬೇಕಾಯಿತು. ರಾಜಸ್ತಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಮೋದಿ ಸ್ವಲ್ಪಮಟ್ಟಿಗೆ ಮತ ಸೆಳೆಯಬಹುದಾದರು ಆತನ ಹಿಂದುತ್ವ ಇಮೇಜು ಬಿಜೆಪಿಗೆ ಲಾಭ ಮಾಡುವುದಕ್ಕಿಂತ ಮುಸ್ಲಿಂ ಹಾಗೂ ಜಾತ್ಯತೀತ ಮತಗಳನ್ನು ಪಕ್ಷದಿಂದ ವಿಮುಖಗೊಳಿಸಿ ಕಾಂಗ್ರೆಸ್‌ಗೆ ಹೊಸ ಅವಕಾಶವಾಗಿ ಪರಿಣಮಿಸುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ.

ಒಂದೊಮ್ಮೆ ಬಿಜೆಪಿ ಪ್ರಚಂಡ ಸಾಧನೆ ಮಾಡಿ ತಾನು ಈ ರಾಜ್ಯಗಳಲ್ಲಿ ಇದುವರೆವಿಗೂ ಗಳಿಸಿರುವ ಅತಿಹೆಚ್ಚು ಸೀಟುಗಳನ್ನೇ ಗೆದ್ದರೂ (ಅಂದರೆ ಮಧ್ಯಪ್ರದೇಶದಲ್ಲಿ 25, ರಾಜಸ್ಥಾನದಲ್ಲಿ 21, ಗುಜರಾತ್‌ನಲ್ಲಿ 20 ಮತ್ತು ಛತ್ತೀಸ್‌ಗಡದಲ್ಲಿ 10) ಒಟ್ಟು 91 ಸೀಟುಗಳಲ್ಲಿ 76ರಲ್ಲಿ ಅದು ವಿಜಯಿಯಾಗಬಹುದು. ವಾಸ್ತವಿಕವಾಗಿ ನೋಡಿದರೂ 55 ರಿಂದ 60 ಸ್ಥಾನಗಳಲ್ಲಿ ಗೆಲ್ಲಬಹುದು.

ಮೊದಲ ಮೂರು ವರ್ಗಗಳಿಂದ ಬಿಜೆಪಿಗೆ 100 ರಿಂದ 115 ಸೀಟುಗಳು ಲಭಿಸಬಹುದು. ಆಗಲೂ ಬಿಜೆಪಿ 200ರ ಗಡಿ ತಲುಪಬೇಕೆಂದರೆ 80 ರಿಂದ 115 ಸೀಟುಗಳ ಕೊರತೆ ಅನುಭವಿಸಬೇಕಾಗುತ್ತದೆ. ಅಷ್ಟು ಸೀಟುಗಳನ್ನು ನಾಲ್ಕನೇ ವರ್ಗದ ರಾಜ್ಯಗಳು ತಂದುಕೊಡುತ್ತವಾ ನೋಡಬೇಕು. ಈ ಪಟ್ಟಿಯಲ್ಲಿ ರಾಷ್ಟ್ರದ ರಾಜಕಾರಣವನ್ನು ನಿರ್ಣಯಿಸಬಲ್ಲ ಉತ್ತರ ಪ್ರದೇಶ, ಬಿಹಾರ ಮತ್ತು ಮಹಾರಾಷ್ಟ್ರಗಳಿರುತ್ತವೆ. ಈ ರಾಜ್ಯಗಳಿಂದ ಒಟ್ಟು 168 ಎಂಪಿಗಳು ಲೋಕಸಭೆ ಪ್ರವೇಶಿಸಬಹುದು. ಆದರೆ 2009ರ ಚುನಾವಣೆಯಲ್ಲಿ ಬಿಜೆಪಿಗೆ ಒಲಿದದ್ದು 31 ಸೀಟುಗಳು ಮಾತ್ರ.

ಈ ಮೂರೂ ರಾಜ್ಯಗಳ ರಾಜಕಾರಣ ಬಲು ಜಟಿಲವಾದದ್ದು. ಪ್ರಾದೇಶಿಕ ಪಕ್ಷ, ಸ್ಥಳೀಯ ಸಂಘಟನೆಗಳೆ ಇಲ್ಲಿ ನಿರ್ಣಾಯಕ. ವೋಟ್‌ಬ್ಯಾಂಕ್ ರಾಜಕಾರಣವೂ ಇಲ್ಲಿ ನಾಜೂಕಾಗಿ ಪಸರಿಸಿಕೊಂಡಿದೆ. ಇಲ್ಲಿನ ರಾಜಕಾರಣಕ್ಕೆ ಹಲವು ಮುಖಗಳಿರುತ್ತವೆ; ಹೀಗೆ ಆಗುತ್ತದೆಂದು ಊಹಿಸುವುದೇ ಕಷ್ಟ! 2004ರ ಚುನಾವಣೆಯಲ್ಲಿ ಈ ರಾಜ್ಯಗಳಿಂದ ಆರಿಸಿ ಬಂದವರಲ್ಲಿ 115 ಜನ ಕಾಂಗ್ರೆಸ್ ಅಥವಾ ಬಿಜೆಪಿಯಿಂದ ಹೊರತಾದ ಸ್ಥಳೀಯ ಪಕ್ಷದವರಾಗಿದ್ದರು. 2009ರಲ್ಲೂ ಅವರ ಸಂಖ್ಯೆ 97ರಷ್ಟಿತ್ತು.

ಅತೀವ ಆಶಾವಾದಿಯಾಗಿ ಯೋಚಿಸಿ ಬಿಜೆಪಿ ಬಿಹಾರದಲ್ಲಿ 60% ಮತಗಳಿಸಿತೆಂದಿಟ್ಟುಕೊಳ್ಳೋಣ. ಆಗಲೂ ಬಿಜೆಪಿ ಬಿಹಾರ್‌ನಲ್ಲಿ 40 ಸ್ಥಾನಗಳಲ್ಲಿ 24ರಲ್ಲಿ ಗೆಲ್ಲಬಹುದು. ಅಂದಹಾಗೆ, ಆ ರಾಜ್ಯದ ಇತಿಹಾಸದಲ್ಲಿ ಬಿಜೆಪಿ ಅತ್ಯುನ್ನತ ಸಾಧನೆ ಎಂದರೆ 54 ಸ್ಥಾನಗಳಲ್ಲಿ (ಅವಿಭಜಿತ ಬಿಹಾರ್ ಇದ್ದಾಗ) 23 ಗೆದ್ದದ್ದು ಮಾತ್ರ. ಆಗಲೂ ಅದರ ಮತಗಳಿಕೆ 43% ಮೀರಿರಲಿಲ್ಲ.

ಮಹಾರಾಷ್ಟ್ರದಲ್ಲಿ ಬಿಜೆಪಿಯು ಶಿವಸೇನೆ ಜೊತೆಗಿನ ಸಖ್ಯ ತೊರೆದು ಏಕಾಂಗಿಯಾಗುವ ಸಾಧ್ಯತೆಯಿದೆ. ಬಹುದೊಡ್ಡ 'ಅಲೆ'ಯೊಂದು ಸೃಷ್ಟಿಯಾದರೂ (ಸದ್ಯಕ್ಕಂತು ಅಂತ ಯಾವ ಸಾಧ್ಯತೆಯೂ ಇಲ್ಲ) ಆ ರಾಜ್ಯದಲ್ಲಿ ತನ್ನ ಅತ್ಯುನ್ನತ ಅಂಕಿಅಂಶವನ್ನು ಮಾತ್ರವೇ ಪುನರಾವರ್ತಿಸಲು ಸಾಧ್ಯ. 1996ರ ಚುನಾವಣೆಯಲ್ಲಿ ಒಟ್ಟು 48 ಸ್ಥಾನಗಳಲ್ಲಿ 28ರಲ್ಲಿ ಗೆದ್ದಿದ್ದೇ ಅದರ ರೆಕಾರ್ಡ್.

ಅಷ್ಟಾದರೂ ಬಿಜೆಪಿ ಉತ್ತರ ಪ್ರದೇಶದಲ್ಲಿ 55 ರಿಂದ 60 ಸೀಟುಗಳಲ್ಲಿ ಗೆಲ್ಲಬೇಕಿರುತ್ತದೆ. 1998 ಮತ್ತು 1999ರಲ್ಲಿ ಎರಡು ಬಾರಿ 50ರ ಗಡಿ ದಾಟಿದ್ದು ಬಿಟ್ಟರೆ (ಅದೂ ರಾಮಜನ್ಮಭೂಮಿ ಅಲೆ ಇದ್ದದ್ದಕ್ಕೆ) ಉತ್ತರ ಪ್ರದೇಶದಲ್ಲಿ ಬಿಜೆಪಿ ಸಾಧನೆ ಅಷ್ಟಕ್ಕಷ್ಟೆ. 2004 ಮತ್ತು 2009ರ ಚುನಾವಣೆಗಳಲ್ಲಂತೂ ಬಿಜೆಪಿಯ ತಾಕತ್ತು 10 ಸೀಟುಗಳಿಗೆ ಕುಸಿದಿದೆ. ಇಲ್ಲಿ ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ) ಮತ್ತು ಸಮಾಜವಾದಿ ಪಾರ್ಟಿ (ಎಸ್‌ಪಿ) ಗಳು ಹೆಣೆದಿರುವ ಜಾತಿ ಮತ್ತು ಬಲಾಢ್ಯ ಸಾಮಾಜಿಕ ಸಂರಚನೆಯನ್ನು ಎದುರಿಸಿ ತನ್ನ ಹಳೆಯ ಸಾಧನೆಯನ್ನು ಮೀರಿ ಗೆಲ್ಲುವುದು ಬಿಜೆಪಿಗೆ ಕಷ್ಟದ ಮಾತು. ನಿಜ ಹೇಳಬೇಕೆಂದರೆ ಇತ್ತೀಚೆಗೆ ನಡೆದ ಮುಜಫರಾಬಾದ್ ಕೋಮುಗಲಭೆ, ರಾಮಮಂದಿರಕ್ಕೆ ಮತ್ತೆ ಮಹತ್ವ ನೀಡಿದ್ದು ಹಾಗೂ ಕಾಂಗ್ರೆಸ್-ಸಮಾಜವಾದಿ ಪಾರ್ಟಿಗಳ ನೆಲೆ ಕ್ಷೀಣಿಸುತ್ತಿರುವ ಅಂಶಗಳು ಬಿಜೆಪಿಗೆ ತಕ್ಕಮಟ್ಟಿಗೆ ಅನುಕೂಲ ಮಾಡಿಕೊಟ್ಟಿವೆಯಾದರು ಅದರಿಂದ ಭಾರೀ ಏನನ್ನೋ ನಿರೀಕ್ಷಿಸಲು ಸಾಧ್ಯವಿಲ್ಲ.


ಉತ್ತರ ಪ್ರದೇಶದ ವಿಚಾರದಲ್ಲಿ, ಒಂದು ವಿಶಾಲ ಸಾಮಾಜಿಕ ಸಂಚಲನ (ಉನ್ನತ ಜಾತಿಗಳ ಬೆಂಬಲವನ್ನು ಬಿಟ್ಟು) ಮತ್ತು ಮನವೊಲಿಸುವಂತಹ ಅಭಿವೃದ್ಧಿಯ ಒಂದು ಅಜೆಂಡಾ ಇವೆರಡರ ಕೊರತೆಯೂ ಬಿಜೆಪಿಗಿದೆ. ಪ್ರಾದೇಶಿಕ ನಾಯಕರು ಮತ್ತು ನಾಯಕತ್ವವನ್ನೂ ಮೀರಿ ಮೋದಿಯ 'ಚರಿಸ್ಮಾ' ಬಿಜೆಪಿಗೆ ಇಲ್ಲಿ 30 ರಿಂದ 40 ಸೀಟುಗಳನ್ನು ಗೆದ್ದು ಕೊಡುತ್ತದೆನ್ನುವುದು ವಾಸ್ತವಕ್ಕೆ ದೂರ; ಇದು ಸುಸ್ಪಷ್ಟ.


ಮತ್ತೊಮ್ಮೆ ಅತೀವ ಆಶಾವಾದಿಯಾಗಿ ಯೋಚಿಸಿ ಬಿಜೆಪಿ ಈ ಮೂರು ರಾಜ್ಯಗಳಲ್ಲಿ ಉತ್ತಮ ಸಾಧನೆಯನ್ನೆ ಮಾಡುತ್ತದೆ ಎಂದಿಟ್ಟುಕೊಳ್ಳೋಣ (ವಾಸ್ತವವಾಗಿ ಅದು ಸಾಧ್ಯವಿಲ್ಲ). ಆಗ ಬಿಜೆಪಿಗೆ ಅನುಕೂಲವಾಗಬಹುದಾದ ಒಂದು ಅಂಶವೆಂದರೆ ಅದು ನಗರದ ಮತಗಳನ್ನು ತನ್ನತ್ತ ಸೆಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ ಗುಜರಾತ್‌ನಲ್ಲಿ ಬಿಜೆಪಿಯು ನಗರದ ಶೇ.58 ರಷ್ಟು ಮತಗಳನ್ನು ಗಳಿಸಿದೆ; ಶೇ.28 ನಗರವಾಸಿ ಮತಗಳು ಮಾತ್ರ ಕಾಂಗ್ರೆಸ್ ಪಾಲಾಗಿವೆ. ಆದರೆ ಒಟ್ಟಾರೆ ಗುಜರಾತ್‌ನ ಶೇ.40 ರಷ್ಟು ಮಾತ್ರ ನಗರೀಕರಣವಾಗಿದೆ ಎನ್ನುವುದನ್ನೂ ಮರೆಯಬಾರದು. ಬಿಹಾರ್ ಮತ್ತು ಉತ್ತರ ಪ್ರದೇಶಗಳಲ್ಲಿ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ಯಾಕೆಂದರೆ ಅಲ್ಲಿ ಕ್ರಮವಾಗಿ 11% ಮತ್ತು 22% ಮಾತ್ರ ನಗರೀಕರಣಕ್ಕೆ ತುತ್ತಾಗಿರೋದು!


ಇದರ ಹೊರತಾಗಿಯೂ ಬಿಜೆಪಿಯ ನಗರವಾಸಿ ಮತಗಳಿಗೆ ಹೊಸ ಅಡ್ಡಿಯೊಂದು ಆಮ್ ಆದ್ಮಿ ರೂಪದಲ್ಲಿ ಎದುರಾಗಿದೆ. ಆಮ್ ಆದ್ಮಿ ಸರ್ಕಾರದ ಆರಂಭ ಭಿನ್ನಮತದಿಂದ ಕೂಡಿದ್ದರೂ ಮತ್ತು ಕೋಮುವಾದದೆಡೆಗೆ ತನ್ನ ಮೌನದಂತಹ ಕೆಲ ಆರೋಪಗಳ ಹೊರತಾಗಿಯೂ ಅದು ನಗರದಲ್ಲಿ ಬಿಜೆಪಿಯ ಮತಗಳನ್ನು ಕಬಳಿಸಿ ಮೋದಿಯ ಕನಸನ್ನು ಧ್ವಂಸಗೊಳಿಸಬಹುದು.

ಮೂಲ: ಪ್ರಫುಲ್ ಬಿದ್ವಾಯ್

ಕನ್ನಡಕ್ಕೆ: ಗಿರೀಶ್ ತಾಳಿಕಟ್ಟೆ








ಬೆನ್ನಿಹಿನ್ ಬಾಬಾನನ್ನು ವಿರೋಧಿಸೋಣ, ಬೆನ್ ಹಿಂದೆನೂ ಒಮ್ಮೆ ನೋಡಿಕೊಳ್ಳೋಣ

ಬೇವಕೂಫೋಂ ಕಿ ಕಮಿ ನಹಿ
ಏಕ್ ಢೂಂಡೋ ಹಜಾರ್ ಮಿಲ್ತೇ ಹೈಂ
(ಮೂರ್ಖರಿಗೇನೂ ಕೊರತೆ ಇಲ್ಲ, ಒಬ್ಬರನ್ನು ಹುಡುಕಿದರೆ ಸಾವಿರ ಮಂದಿ ಸಿಗುತ್ತಾರೆ)

ವಿಸ್ಮಯಕಾರಿಯಾದರೆ ಧರ್ಮದ ಹೆಸರಿನಲ್ಲಿ, ಧರ್ಮಗ್ರಂಥಗಳ ಹೆಸರಿನಲ್ಲಿ, ಜ್ಯೋತಿಷ್ಯ-ವಾಸ್ತು ಎಂದೆಲ್ಲ ನಮ್ಮನ್ನು ಮೂರ್ಖರನ್ನಾಗಿಸಲು ಟಿವಿ ಚಾನೆಲ್‌ಗಳು ಕಾದು ಕೂತಿರುತ್ತವೆ. ದೇವರನ್ನು ಆರಾಧಿಸಲಿಕ್ಕೆಂದೇ ಪ್ರತ್ಯೇಕ ಚಾನೆಲ್‌ಗಳಿವೆ. ಕುರಾನ್, ಬೈಬಲ್, ಗೀತೆಗಳನ್ನ ಬೋಧನೆ ಮಾಡುವ ಚಾನೆಲ್‌ಗಳು, ರೇಡಿಯೋ ಸ್ಟೇಷನ್‌ಗಳೂ ಇವೆ. ಇಂಟರ್ನೆಟ್‌ನಲ್ಲಿಯೇ ತಿರುಪತಿ ತಿಮ್ಮಪ್ಪನಿಗೂ, ಶಿರಡಿ ಸಾಯಿಬಾಬಾನಿಗೂ ಆರತಿ ಬೆಳಗಲು, ಪೂಜೆ ಮಾಡಲು, ಕಾಣಿಕೆ ಹಾಕಲು ವ್ಯವಸ್ಥೆ ಇದೆ. ಬಗೆಬಗೆಯ ಪೋಷಾಕು ಧರಿಸಿದ, ವಿವಿಧ ಆಕೃತಿಯ ನಾಮಗಳನ್ನು ಧರಿಸಿದ 'ಸ್ವಾಮಿಗಳ' ಬಾಯಿಂದ ಬಂದ ಮಾತನ್ನೇ ಪ್ರವಚನ ಎಂದು ತನ್ಮಯರಾಗಿ ಕೇಳುವ ಜನರು, ಕುರಾನ್‌ನ ಒಂದೊಂದು ವಾಕ್ಯವನ್ನೂ ಅದು ಯಾವ ಪುಟದಲ್ಲಿದೆ ಎಂದು ಕರಾರುವಾಕ್ಕಾಗಿ ಹೇಳುತ್ತಾ ಎಲ್ಲದಕ್ಕೂ ಇಲ್ಲಿದೆ ಪರಿಹಾರ ಎಂದು ಮಂಕುಬೂದಿ ಎರಚುವ ಝಾಕೀರ್ ನಾಯ್ಕ್‌ಗಳು, 'ಗಾಡ್ ಸೆಡ್, ಯು ವಿಲ್ ಗೋ ಟು ಹೆಲ್' ಎಂದು ಗಂಡಸೊಬ್ಬ ಹೇಳಿದರೆ ಹೆಂಗಸೊಬ್ಬಳು 'ದೇವರು ಹೇಳಿದ, ನೀನು ನರಕಕ್ಕೆ ಹೋಗುವಿ' ಎಂದು ಅಷ್ಟೇ ವೇಗದಲ್ಲಿ ಭಾಷಾಂತರ ಮಾಡಿ ಭಯ ಹುಟ್ಟಿಸುವ ಜೋಡಿಗಳು ಟಿವಿ ಪರದೆಗಳಲ್ಲಿ ಅದೆಷ್ಟು ವ್ಯಸ್ತರಾಗಿದ್ದಾರೆ.

ಮೌಢ್ಯವನ್ನ ಮಟ್ಟ ಹಾಕಲು ಕಾನೂನು ತರುತ್ತೇವೆ ಎಂದು ಸರಕಾರ ಹೊರಟರೆ ಮೌಢ್ಯ ವಿರೋಧಿ ಕಾನೂನನ್ನೇ ವಿರೋಧಿಸಿ ಚಾನೆಲ್‌ಗಳಲ್ಲಿ ಚರ್ಚೆಗಳು ನಡೆಯುತ್ತವೆ. ವಿಜ್ಞಾನಿಗಳನ್ನೋ, ವಿಚಾರವಾದಿಗಳನ್ನೋ ಈ ಚರ್ಚೆಗಳಿಗೆ ಕರೆಯದೆ ಜ್ಯೋತಿಷಿಗಳನ್ನ, ಸ್ವಾಮೀಜಿಗಳನ್ನ ಕರೆದು ಮೌಢ್ಯವೇ ವಿಜ್ಞಾನ ಎಂದು ನಂಬಿಸುವ ಕೆಲಸಗಳು ನಡೆಯುತ್ತಿವೆ. ಜ್ಯೋತಿಷ್ಯವೇ ಒಂದು ದೊಡ್ಡ ಢೋಂಗಿ. ಆದರೂ ನಮ್ಮ ಚಾನೆಲ್‌ಗಳು ಢೋಂಗಿ ಜ್ಯೋತಿಷಿಗಳು, ಢೋಂಗಿ ಬಾಬಾಗಳು ಎಂದು ಪ್ರತ್ಯೇಕ ಕ್ಯಾಟಗರಿಯೊಂದನ್ನು




ಹುಟ್ಟುಹಾಕಿ ಅವರ ವಿರುದ್ಧ ಕಾರ್ಯಾಚರಣೆ ಕೈಗೊಂಡಂತೆ ನಾಟಕ ಮಾಡಿ ತಮ್ಮ ಚಾನೆಲ್‌ಗಳಲ್ಲಿ ಬರುವ ಜ್ಯೋತಿಷಿಗಳು, ಬಾಬಾಗಳೇ ಅಸಲಿ ಎಂದು ಅವರ ಮಾರ್ಕೆಟ್ ಹೆಚ್ಚಿಸುವ ಕೆಲಸ ಮಾಡುತ್ತಿವೆ. ರವಿಶಂಕರ್ ಗುರೂಜಿ, ನಿತ್ಯಾನಂದ, ಪೇಜಾವರ ಸ್ವಾಮಿ, ಬಾಬಾ ರಾಮ್‌ದೇವ್, ಆಸಾರಾಂ ಬಾಪೂ, ನಿರ್ಮಲ್ ಬಾಬಾ, ಕಾಳಿ ಸ್ವಾಮಿ, ಬ್ರಹ್ಮಾಂಡ ಗುರೂಜಿ ಮುಂತಾದವರೆಲ್ಲ ನಿತ್ಯವೂ ನಮ್ಮ ಜನರನ್ನು ತಮ್ಮ ಮಾತು-ಕೃತಿಗಳ ಮೂಲಕ ಮೂರ್ಖರನ್ನಾಗಿಸುತ್ತಿದ್ದಾರೆ. ಇಷ್ಟೆಲ್ಲ ಇರುವ ಈ ದೇಶದಲ್ಲಿ ಇವರದೇ ಸಂತತಿಗೆ ಸೇರಿರುವ ಅವನ್ಯಾವನೋ ಒಬ್ಬ ಬೆನ್ನಿಹಿನ್ ಬೆಂಗಳೂರಿಗೆ ಬರುತ್ತಾನೆಂದರೆ ಚೆಡ್ಡಿಗಳು ತಮ್ಮ ಚೆಡ್ಡಿ ಹರಿದು ಹೋದಂತೆ ಆಡುತ್ತಿದ್ದಾರೆ. ಮೇಲೆ ಹೇಳಿದ ಸ್ವಾಮಿಗಳು, ಬಾಬಾಗಳು, ಜ್ಯೋತಿಷಿಗಳು ಎಲ್ಲರೂ ಅದೇನೋ ಸುನಾಮಿ ಬರುತ್ತಿದೆ ಎಂಬಂತೆ ಭಯ ಹುಟ್ಟಿಸುತ್ತಿವೆ. ಅಷ್ಟಕ್ಕೂ ಈತನಿಗೂ ಮತ್ತು ನಮ್ಮ ದೇಶದ ರವಿಶಂಕರ್-ರಾಮ್‌ದೇವ್- ಝಾಕೀರ್ ನಾಯ್ಕ್ ಮುಂತಾದವರಿಗೂ ಇರುವ ವ್ಯತ್ಯಾಸಗಳೆಂದರೆ ಬೆನ್ನಿಹಿನ್ ಇವರೆಲ್ಲರಿಗಿಂತ ಹೆಚ್ಚು ಶ್ರೀಮಂತ ಮತ್ತು ಇವರೆಲ್ಲರಿಗಿಂತ ಹೆಚ್ಚು ವೈಭವದಿಂದ ಜೀವನ ಸಾಗಿಸುತ್ತಿದ್ದಾನೆ ಮತ್ತು ಆತನ ಮೋಡಸ್ ಒಪೆರಾಂಡಿ ಬೇರೆ ಎನ್ನುವುದು ಮಾತ್ರ.

ಬೆನ್ನಿಹಿನ್ ಹೋದಲ್ಲೆಲ್ಲ ಆತನ ಒಂದು ಸ್ಪರ್ಶಕ್ಕೆ-ಹೀಲಿಂಗ್ ಟಚ್-ಲಕ್ಷಾಂತರ ಜನ ಕಾಯುತ್ತಾರೆ. ಈತ ಮುಟ್ಟಿದರೆ ನಿಮ್ಮ ಕಾಲುನೋವು, ಸಂಧಿವಾತ, ಹೊಟ್ಟೆನೋವು, ಮಧುಮೇಹ, ಕ್ಯಾನ್ಸರ್ ಎಲ್ಲವೂ ಗುಣವಾಗುತ್ತದಂತೆ. ಈತ ಮುಟ್ಟಿದ ಎಂದರೆ ನಡೆಯಲಿಕ್ಕಾಗದವರು ನಡೆದಾಡುತ್ತಾರೆ, ಕಿವುಡರ ಕಿವಿ ಕೇಳಿಸುವಂತಾಗುತ್ತದೆ, ಕುರುಡನಿಗೆ ಕಣ್ಣು ಬರುತ್ತದೆ, ಲಕ್ವ ಬಡಿದವನ ಅಂಗಾಂಗಗಳು ಮತ್ತೆ ಚಟುವಟಿಕೆಯಿಂದ ಪುಟದೇಳುತ್ತವೆ ಎಂದೆಲ್ಲ ಹೇಳಲಾಗುತ್ತದೆ. ಹಾಗಂತ ಪ್ರಚಾರ ಮಾಡಿಕೊಳ್ಳಲು ಆತನದೇ ಟಿವಿ ಚಾನೆಲ್‌ಗಳಿವೆ, ಶೋಗಳಿವೆ, ಪುಸ್ತಕಗಳಿವೆ ಮತ್ತು ಇನ್ನೂ ನಾನಾ ವಿಧಾನಗಳಿವೆ. ಇದಕ್ಕೆಲ್ಲ ಮರುಳಾದ ಲಕ್ಷಾಂತರ ಮಂದಿ ಯೇಸುವೇ ಕಳುಹಿಸಿದ ಈ ದೇವದೂತ ನಮ್ಮ ಊರಿಗೆ ಯಾವಾಗ ಬರುತ್ತಾನೆಂದು ಹಾತೊರೆಯುತ್ತಾರೆ. 2005ರಲ್ಲಿ ಬೆಂಗಳೂರಿಗೆ ಬಂದಿದ್ದ ಬೆನ್ನಿಹಿನ್‌ನ ಸಮಾವೇಶಕ್ಕೆ ದಾಖಲೆ ಸಂಖ್ಯೆಯ ಜನರು ನೆರೆದಿದ್ದರು. ಅದು ಬೆನ್ನಿಹಿನ್‌ನ ವೆಬ್‌ಸೈಟ್‌ನಲ್ಲಿಯೂ ದಾಖಲಾಗಿದೆ. ಈಗ ಆತ ಮತ್ತೆ ಜನವರಿ ತಿಂಗಳಲ್ಲಿ ಬೆಂಗಳೂರಿಗೆ ಬರುತ್ತಿದ್ದಾನೆ.

ಬೆನ್ನಿಹಿನ್ ಇಸ್ರೇಲ್‌ನಲ್ಲಿ ಹುಟ್ಟಿದವನು. ಅರಬ್-ಇಸ್ರೇಲ್ ಯುದ್ಧದ ತರುವಾಯ ಕೆನಡಾಕ್ಕೆ ವಲಸೆ ಹೋಗಿ ಈಗ ಅಮೆರಿಕದಲ್ಲಿ ನೆಲೆಸಿದ್ದಾನೆ. ಅಮೆರಿಕದ ಬುದ್ಧಿವಂತ ಜನರಿಗೆ ಈತ ಎಂತಹ ಮಂಕುಬೂದಿ ಎರಚಿದ್ದಾನೆಂದರೆ ಈತನ ಧಾರ್ಮಿಕ ಸಭೆಗಳು ನಡೆಯುವುದೇ ಅಲ್ಲಿನ ದೊಡ್ಡ ಸ್ಟೇಡಿಯಂಗಳಲ್ಲಿ. ಈತನ ದೈನಂದಿನ 30 ನಿಮಿಷಗಳ ಟೆಲಿವಿಷನ್ ಶೋ 'ದಿಸ್ ಇಸ್ ಯುವರ್ ಡೇ' ವಿಶ್ವದಾದ್ಯಂತ ಹಲವು ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿದೆ ಮತ್ತು ಅತ್ಯಂತ ಹೆಚ್ಚು ವೀಕ್ಷಕರನ್ನು ಈ ಶೋ ಹೊಂದಿದೆ. ರೋಗಿಗಳು ಎಂದು ವೇದಿಕೆ ಹತ್ತಿದವರ ಮೈ ಮುಟ್ಟಿದ ಕೂಡಲೇ ಅವರು ಅಲ್ಲಿಯೇ ಕುಸಿದು ನೆಲಕ್ಕೊರಗುವುದು ಮತ್ತು ಆ ರೋಗಿಗಳು ರೋಗ ಗುಣಮುಖರಾದಂತೆ ವರ್ತಿಸುವುದನ್ನು ನೀವು ಯಾವತ್ತಾದರೂ ಟಿವಿ ಚಾನೆಲ್‌ಗಳಲ್ಲಿ ನೋಡಿರುತ್ತೀರಿ. ಈತ ಬರೆದ ಹತ್ತಾರು ಪುಸ್ತಕಗಳು ದಾಖಲೆ ಸಂಖ್ಯೆಯಲ್ಲಿ ಮಾರಾಟವಾಗಿದೆ. ಈತನ ಸಭೆಗಳಿಗೆ ನೀವು ಹೋಗಬೇಕೆಂದರೆ ದುಬಾರಿ ಶುಲ್ಕವೂ ಇದೆ. ಬೆಂಗಳೂರಿನಲ್ಲಿಯೂ ಈತನ ದರ್ಶನಕ್ಕೆ 'ಭಕ್ತಾದಿಗಳು' ಸಾವಿರ ರೂಪಾಯಿ ಕಾಣಿಕೆ ನೀಡಿಯೇ ಹೋಗಬೇಕು.

ನಿಜಕ್ಕೂ, ಈತನ ಸ್ಪರ್ಶ ರೋಗಗಳನ್ನು ಗುಣಪಡಿಸುತ್ತದೆಯೆ? ಈತನೇನು ದೈವಾಂಶಸಂಭೂತನೆ? ಖಂಡಿತ ಅಲ್ಲ, ಈತ ನಮ್ಮ ಭಾರತೀಯ ಬಾಬಾಗಳಂತೆಯೇ ಒಬ್ಬ ವಂಚಕ. ಯಾರನ್ನೂ ಮರುಳು ಮಾಡಬಲ್ಲ ಮಾತುಗಾರಿಕೆ, ನೋಡಿದರೆ ನಂಬಬೇಕು ಎಂಬಂತಹ ರೂಪ, ಸುಳ್ಳನ್ನೇ ಸತ್ಯ ಮಾಡುವ ಜಾಣ್ಮೆ ಮತ್ತು ಪ್ರಚಾರ ಈತನ ಬಂಡವಾಳ. 'ದೇವರು ನನ್ನೊಳಗೆ ಬಂದಿದ್ದಾನೆ, ನನ್ನ ಮೂಲಕ ನಿಮ್ಮನ್ನೆಲ್ಲ ಆತ ತಲುಪುತ್ತಾನೆ, ನಿಮ್ಮ ರೋಗಗಳನ್ನು ವಾಸಿ ಮಾಡಲು ಆತ ನನ್ನೊಳಗೆ ಇದ್ದಾನೆ, ನನ್ನ ಸ್ಪರ್ಶದಿಂದ ನಿಮ್ಮ ದೇಹದೊಳಕ್ಕೆ ಒಂದು ಬೆಚ್ಚನೆಯ ಅನುಭವ ಬಂದು ನಿಮ್ಮ ರೋಗಗಳಿಂದ ನೀವು ಮುಕ್ತರಾಗುವಿರಿ' ಎಂದೆಲ್ಲ ಬೆನ್ನಿಹಿನ್ ಬೊಗಳೆ ಬಿಡುತ್ತಾನೆ. 'ನನ್ನೊಳಗೆ ಯೇಸು ಅನಭಿಷಿಕ್ತನಾಗಿದ್ದಾನೆ, ನನ್ನೊಳಗೆ ದೇವರ ಶಕ್ತಿಯಿಂದ ಮಹಾಕಂಪನವಾಗುತ್ತಿದೆ, ನನ್ನ ಅನುಭವಕ್ಕೆ ಯೇಸು ಬರುತ್ತಿದ್ದಾನೆ' ಎಂದೂ ಹೇಳುವ ಈತ ಮಾಡುವುದೆಲ್ಲ ಕಣ್ಣಿಗೆ ಮಣ್ಣೆರಚುವ ಕೆಲಸ. ಈತ ಎಂತಹ ಮೋಸಗಾರನೆಂಬುದನ್ನು ಅಮೆರಿಕದ ಅನೇಕ ಮಾಧ್ಯಮಗಳು ತಮ್ಮ ಕುಟುಕು ಕಾರ್ಯಾಚರಣೆಗಳ ಮೂಲಕ, ಹಿಡನ್ ಕ್ಯಾಮೆರಾಗಳ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಉಡುಪಿ ಜಿಲ್ಲೆಯ ಸಾಲಿಗ್ರಾಮದಲ್ಲಿ ಡಿವೈನ್‌ಪಾರ್ಕ್ ಎಂಬ ಮಠ ನಿರ್ಮಿಸಿ ಕೋಟಿಗಟ್ಟಲೆ ದುಡ್ಡು ಮಾಡಿರುವ ವ್ಯಕ್ತಿಯೊಬ್ಬ ತನ್ನೊಳಗೆ ವಿವೇಕಾನಂದ ಇದ್ದಾನೆ ಎಂದು ಹೇಳುತ್ತಿರುವುದು ನೆನಪಾಗುತ್ತಿದೆ.


ಬೆನ್ನಿಹಿನ್‌ನ ಸಭೆಗಳಲ್ಲಿ ಆತನ ಬಾಡಿಗಾರ್ಡ್‌ಗಳ ದೊಡ್ಡ



ಪಡೆಯೇ ಇರುತ್ತದೆ. ಮುಂದಿನ ಸಾಲುಗಳನ್ನು ದೊಡ್ಡ ದಾನಿಗಳು, ಗಣ್ಯರಿಗೆ ಮೀಸಲಾಗಿಡಲಾಗಿರುತ್ತದೆ. ಈತನ ಸ್ಪರ್ಶದ ಮಾಯೆಯ ಪ್ರಚಾರ ಕೇಳಿಬಂದ ರೋಗಿಗಳು, ಅಶಕ್ತರು, ಗಾಲಿಕುರ್ಚಿಗಳಲ್ಲಿ ಬಂದವರು ಹಿಂದಿನ ಸಾಲುಗಳಲ್ಲಿ ಇರುತ್ತಾರೆ. ದೊಡ್ಡ ಆರ್ಕೆಸ್ಟ್ರಾದ ಸಂಗೀತ, ಭ್ರಮಾಲೋಕ ಸೃಷ್ಟಿಸುವ ಬೆಳಕು, ಎಲ್ಲರೂ ದಿಗ್ಭ್ರಾಂತರಾಗಬೇಕೆಂದೇ ನಿರ್ಮಿಸಿದ ಕೃತಕವಾದ ವಾತಾವರಣ ಈತನ ಎಲ್ಲ ಸಭೆಗಳಲ್ಲೂ ಇರುತ್ತದೆ. ಈತನ ಸ್ಪರ್ಶಕ್ಕಾಗಿ ಮುಂದೆ ಬರುವವರಲ್ಲಿ ಹೆಚ್ಚಿನವರು ಮಾಡುವುದು ನಾಟಕ ಮಾತ್ರ. ಅದರಲ್ಲಿ ಕೆಲವರು ಈತನ ಬಾಡಿಗಾರ್ಡ್‌ಗಳೇ







ಸವಲ್ಲಿ ಬಂದಿರುವವರು. ಈತ ಮುಟ್ಟಿದ ಕೂಡಲೇ
ವುದು-ಏಳುವುದು ಎಲ್ಲವೂ ನಾಟಕ ಮಾತ್ರ.
ಈತ ಸಮ್ಮೋಹಿನಿಗೆ ಒಳಗಾಗಿಸುವುದೂ ಇದೆ.
ಟ್ಟುವ ಹೆಚ್ಚಿನ ರೋಗಿಗಳ ಕಾಯಿಲೆ ಕಣ್ಣಿಗೆ
ಯಿಲೆಗಳು. ಅರ್ಥಾತ್ ಕ್ಯಾನ್ಸರ್ ಮುಂತಾದ
ಳಗಿನ ರೋಗಗಳು. ಈತ ಮುಟ್ಟಿದ ಕೂಡಲೇ
ರೋಗ ವಾಸಿಯಾಗಿದೆ ಅಥವಾ ಈ ಕ್ಷಣ
ಗಿಲ್ಲ ಎಂದರೆ ದೇವರು ಬಯಸಿದ ಕೂಡಲೇ
ಗುತ್ತದೆ ಎಂದು ಹೇಳುತ್ತಾನೆ. ಈತ ಮುಟ್ಟಿದ
ಗಾಲಿ ಕುರ್ಚಿಯಲ್ಲಿರುವ ವ್ಯಕ್ತಿ ಎದ್ದು ನಿಂತಂತೆ
ವಾಗುತ್ತದೆ. ಕಿವುಡನಿಗೆ ಕಿವಿ ಕೇಳಿಸಿದಂತೆ
ಗುತ್ತದೆ. ಆದರೆ ಇದೆಲ್ಲವೂ ಈತನ ವಂಚನೆಯ
ಆಗಿರುತ್ತದೆ. ಈತನ ಸಭೆಗಳಿಗೆ ಬರುವ
ಯೂ ಕೈಕಾಲುಗಳಲ್ಲಿ ಬಲಹೀನತೆ ಇರುವ
ಲಕ್ವ ಬಡಿದ ರೋಗಿಗಳು, ದೇಹದಲ್ಲಿ ಚಲನೆ
ಂಡ ರೋಗಿಗಳು ವೇದಿಕೆ ಹತ್ತಲಿಕ್ಕೂ ಈತನ
ಅವಕಾಶವಿಲ್ಲ. ಅಮೆರಿಕದ ಮಾಧ್ಯಮಗಳು



ಕಾರ್ಯಾಚರಣೆಗಳಲ್ಲಿ ಇದು ಸ್ಪಷ್ಟವಾಗಿ
ಗಳಲ್ಲಿ ದಾಖಲಾಗಿದೆ. ಯಾರಿಗೆ ಎದ್ದು ನಿಲ್ಲಲು
ವ್ವೋ ಅವರನ್ನು ಈತನ ಬಾಡಿಗಾರ್ಡ್‌ಗಳು ಬೇರೆ
ಳುಹಿಸುತ್ತಾರೆ. ಒಂದೊಮ್ಮೆ ಅಂತಹ ವ್ಯಕ್ತಿಗಳು
ಅವರ ಸಂಬಂಧಿಗಳು ಬೆನ್ನಿಹಿನ್ ತಮ್ಮನ್ನು
ಬೇಕೆಂದು ಹಠ ಮಾಡಿದರೆ, ವೇದಿಕೆ ಏರುವ
ಮಾಡಿದರೆ ಅಂತಹ ವ್ಯಕ್ತಿಗಳಿಗೆ ಹಿಂದಕ್ಕೆ
ಂಡು ಹೋಗಿ ಎಚ್ಚರಿಕೆ ನೀಡಲಾಗುತ್ತದೆ ಅಥವಾ
ಮೇಲೆ ಹಲ್ಲೆ ನಡೆಸಿ ಬಾಯಿ ಮುಚ್ಚಿಸಲಾಗುತ್ತದೆ.
ಹಲ್ಲೆಗಳನ್ನು ನಡೆಸಿದ ಆರೋಪಗಳು ಸ್ವತಃ
ಮಗನ ಮೇಲೂ ಇದೆ. ಎಲ್ಲ ನಾಟಕವನ್ನೂ
ವ್ಯವಸ್ಥಿತವಾಗಿ ಯೋಜಿಸಿರಲಾಗುತ್ತದೆ.

ಂದ್ರ ಮೋದಿ ಭಾರತದ ಇತಿಹಾಸದ ಬಗ್ಗೆ ಸುಳ್ಳು
ದರಲ್ಲಿ ನಿಸ್ಸೀಮನಾದರೆ ಬೆನ್ನಿಹಿನ್ ಬೈಬಲ್
ದೇಪದೇ ಸುಳ್ಳು ಹೇಳುತ್ತಾನೆ. ಬೈಬಲ್‌ನಲ್ಲಿ
ವುದೊಂದು. ಈತ ಹೇಳುವುದೇ ಇನ್ನೊಂದು.
ಷ್ಯ ಕೂಡ ಹೇಳುತ್ತಾನೆ. ಎಂತಹ ಭವಿಷ್ಯಗಳೆಂದರೆ

ಕೆಲ ಸ್ಯಾಂಪಲ್‌ಗಳು ಇಲ್ಲಿವೆ. 1995ರಲ್ಲಿ ಅಮೆರಿಕದಲ್ಲಿ ಸಲಿಂಗರತಿ ನಿರ್ನಾಮವಾಗುತ್ತದೆ ಎಂದು ಹೇಳಿದ. 2000ನೇ ಇಸವಿಯಲ್ಲಿ ಅಮೆರಿಕದ ಪೂರ್ವ ಕರಾವಳಿ ಭೂಕಂಪದಲ್ಲಿ ಸಂಪೂರ್ಣ ನಾಶವಾಗಿ ಹೋಗುತ್ತದೆ ಎಂದು ಹೆದರಿಸಿದ. ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋ 1990ರಲ್ಲಿ ಸಾಯುತ್ತಾನೆ ಎಂದು ಭವಿಷ್ಯ ನುಡಿದ. ಇವೆಲ್ಲ ಭವಿಷ್ಯಗಳೂ ಠುಸ್ ಆಯಿತು. ಇನ್ನೂ ತಮಾಷೆಯ ವಿಷಯವೆಂದರೆ 1999ರಲ್ಲಿ ಟಿಬಿಎನ್ ನೆಟ್‌ವರ್ಕ್ ಎಂಬ ಚಾನೆಲ್ ಒಂದರಲ್ಲಿ ಕಾಣಿಸಿಕೊಂಡ ಬೆನ್ನಿಹಿನ್ ದೇವರು ತನಗೆ ಅದ್ಭುತವಾದ ಶಕ್ತಿಯೊಂದನ್ನು ನೀಡಿದ್ದು ತನ್ನ ಬೋಧನೆ ನಡೆಯುವ ವೇಳೆ ಟಿವಿ ಪರದೆ ಮುಟ್ಟಿದರೆ ಗೋರಿಯಲ್ಲಿರುವ ನಿಮ್ಮ ಬಂಧುಗಳು ಮರುಜನ್ಮ ಪಡೆಯುತ್ತಾರೆ ಎಂದು ಹೇಳಿದ. ಅಂದರೆ ಸತ್ತ ವ್ಯಕ್ತಿಗಳು ಬಂದು ಟಿವಿ ಪರದೆ ಮುಟ್ಟಿದರೆ ಅವರಿಗೆ ಮರುಜೀವ ಬರುತ್ತದೆ ಎಂದು ಆತ ಪ್ರತಿಪಾದಿಸಿದ್ದ. ಇದೆಲ್ಲವೂ ದೇವೇಗೌಡರ ಅಚ್ಚುಮೆಚ್ಚಿನ ಕೋಡಿಮಠದ ಸ್ವಾಮಿ ಹೇಳುವ ಭವಿಷ್ಯದಷ್ಟೇ ಅಗ್ಗದ ಮತ್ತು ಹಾಸ್ಯಾಸ್ಪದ ಭವಿಷ್ಯವಾಣಿಯಾಗಿಯೇ ಉಳಿಯಿತು. ತನ್ನ ಟೀಕಾಕಾರರಿಗೆ ಈತ ಶಾಪ ಬೇರೆ ಕೊಡುತ್ತಾನೆ. ಕ್ಯಾಲಿಫೋರ್ನಿಯಾದ ಜನ ಈತನ ವಿರುದ್ಧ ಮಾತನಾಡಿದಾಗ 'ನೀವು ಇದನ್ನು ದೇವರ ಸೇವಕನ ಬಾಯಿಂದ ಕೇಳಿರಿ, ನೀವು ಅಪಾಯದಲ್ಲಿದ್ದೀರಿ, ನಿಮ್ಮ ತಲೆಯ ಮೇಲಿಂದ ದೇವರ ಕೈ ಮಾಯವಾಗಲಿದೆ. ನೀವು ಸೋಲುವಿರಿ, ನಿಮ್ಮ ಮಕ್ಕಳು ನಿಮ್ಮ ಪಾಪವನ್ನು ಅನುಭವಿಸುತ್ತಾರೆ' ಎಂದೆಲ್ಲ ಬಡಬಡಾಯಿಸಿದ್ದ.

ಈತನ ವಂಚನೆಯಲ್ಲಿ ಈತನ ಹೆಂಡತಿ ಮತ್ತು ಮಕ್ಕಳೂ ಸಹಕಾರ ನೀಡುತ್ತಿದ್ದಾರೆ. ಒಮ್ಮೆ ತನ್ನ ಹೆಂಡತಿ ಸುರ್ಝುನ್ ಜೊತೆ ವಿಚ್ಛೇದನ ಪಡೆದ ಈತ ಬೇರೆ ಹೆಂಗಸರೊಡನೆ ಸಂಬಂಧ ಬೆಳೆಸಿದ. ಮತ್ತೆ ತನ್ನ ಕುಕೃತ್ಯಗಳು ಬಹಿರಂಗಕ್ಕೆ ಬರುತ್ತಿದ್ದ ಹಾಗೆ ಪುನಃ ಸುರ್ಝ್ಯಾನ್‌ಳನ್ನು ಮರುಮದುವೆಯಾದ. ಅಮೆರಿಕದಲ್ಲಿ ಅತ್ಯಂತ ವೈಭವದ ಜೀವನ ನಡೆಸುತ್ತಿರುವ ಈ 'ದೇವಮಾನವ' ಪ್ರತಿ ವರ್ಷ ನೂರು ಮಿಲಿಯನ್ ಡಾಲರ್‌ಗಿಂತ ಹೆಚ್ಚು ಸಂಪಾದನೆ ಮಾಡುತ್ತಾನೆ. ಅತ್ಯಂತ ದುಬಾರಿಯಾದ ಜಾಗದಲ್ಲಿ ಈತನ ಬೃಹತ್ ಮನೆ ಇದೆ. ಈತ ಓಡಾಡುವ ವಿಮಾನ ಅತ್ಯಂತ ದುಬಾರಿಯಾದ ವಿಮಾನ. ವಿಮಾನದ ನಿರ್ವಹಣಾ ವೆಚ್ಚವೇ ವರ್ಷಕ್ಕೆ 6 ಮಿಲಿಯನ್ ಡಾಲರ್‌ಗಳು. ಈತನಿಗೆ ದಾನವಾಗಿ ಬರುವ ಹಣಕ್ಕೆ ಲೆಕ್ಕವಿಲ್ಲ. ಅಮೆರಿಕದ ಸರಕಾರ ಈತನ ಅಕ್ರಮ ಗಳಿಕೆ, ಲೆಕ್ಕಪತ್ರಗಳಿಲ್ಲದ ವ್ಯವಹಾರದ ವಿರುದ್ಧ ತನಿಖೆಗೆ ಆದೇಶಿಸಿದೆ. ರಾಮ್‌ದೇವ್ ಬಾಬಾನಿಗೆ ಇವನೇ ಮಾದರಿಯಾಗಿರಬೇಕು. ಈಗ ಈ ಬೆನ್‌ಹಿನ್ ಎಂಬ ಮಹಾವಂಚಕ ಬೆಂಗಳೂರಿಗೆ ಬಂದು ಮತ್ತೊಮ್ಮೆ ಈತನ 'ಭಕ್ತಾದಿಗಳಿಗೆ' ಮೋಸದ ಸ್ಪರ್ಶ ಮತ್ತು ದರ್ಶನ ನೀಡಿ ಕೋಟ್ಯಂತರ ರೂ. ಕಾಣಿಕೆ ಪಡೆದು ಮರಳಲಿದ್ದಾನೆ.


ಬೆನ್ನಿಹಿನ್ ಬೆಂಗಳೂರಿಗೆ ಬಂದು ಜನರನ್ನು ವಂಚಿಸುವುದನ್ನು ಖಂಡಿತ ತಡೆಯಬೇಕಾಗಿದೆ. ವಿಚಾರವಂತರೆಲ್ಲ ಈತನ ವಿರುದ್ಧ ದನಿ ಎತ್ತಬೇಕಾಗಿದೆ. ಜನರು ಈತ ಪ್ರಚಾರಪಡಿಸುವ ಮೌಢ್ಯದಿಂದ ಹೊರಬರಬೇಕಾಗಿದೆ. ಇದೆಲ್ಲ ಸರಿ. ಆದರೆ ಬೆನ್ನಿಹಿನ್ ಮೌಢ್ಯವನ್ನು ಬಿತ್ತುತ್ತಾನೆಂದೂ ಮತ್ತು ಆ ಕಾರಣಕ್ಕೆ ಆತನನ್ನು ಭಾರತಕ್ಕೆ ಬರಲು ಬಿಡಬಾರದೆಂದೂ ಪೇಜಾವರ ಸ್ವಾಮಿ, ಆರೆಸ್ಸೆಸ್ ಗ್ಯಾಂಗ್, ರಾಮ್‌ದೇವ್ ಬಾಬಾ, ಸುರೇಶ್ ಕುಮಾರ್ ಎಂಬ ಮಾಜಿ ಬಿಜೆಪಿ ಸಚಿವರು, ಅದೇ ಪಕ್ಷದ ಅನ್ಯ ಧುರೀಣರೂ ಬೊಬ್ಬೆ ಹೊಡೆಯುತ್ತಿರುವುದು ಮಾತ್ರ ಹಾಸ್ಯಾಸ್ಪದವಾಗಿದೆ. 24 ಗಂಟೆಗಳ ತಮ್ಮ ಕಾರ್ಯಕ್ರಮಗಳಲ್ಲಿ 3-4 ಗಂಟೆಯನ್ನು ಜ್ಯೋತಿಷ್ಯ ವಾಸ್ತು ಎಂದು ಕಾರ್ಯಕ್ರಮ ಬಿತ್ತರಿಸುವ, ಶನಿವಾರ ಶಿವದೇಗುಲಕ್ಕೆ ಯಾಕೆ ಹೋಗಬಾರದು, ಸೋಮವಾರ ಹೆಂಗಸರು ಮನೆ ಹೊರಗೆ ಹೋದರೆ ಏನಾಗುತ್ತದೆ ಎಂದೆಲ್ಲ ಜ್ಯೋತಿಷಿಗಳನ್ನು ಕರೆದು ಚರ್ಚೆ ನಡೆಸುವ ಕನ್ನಡದ ಚಾನಲ್‌ಗಳು ಬೆನ್ನಿಹಿನ್ ವಿರುದ್ಧ ಜನಾಭಿಪ್ರಾಯ ರೂಪಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಇನ್ನೂ ತಮಾಷೆ ಅನಿಸುತ್ತಿದೆ. ಬೆನ್‌ಹಿನ್ ಇಲ್ಲಿಗೆ ಮತಾಂತರ ಮಾಡಲು ಬರುತ್ತಿದ್ದಾನೆ ಎಂದು ಬಿಜೆಪಿ ಮಂದಿ ಹೆದರಿಸುತ್ತಿದ್ದಾರೆ. ಇದಂತೂ ಅಪ್ಪಟ ಸುಳ್ಳು. ಬೆನ್ನಿಹಿನ್ ಇಲ್ಲಿನ ಜನರನ್ನು ದೇವರು, ಪ್ರಾರ್ಥನೆ, ಸ್ಪರ್ಶ ಎಂದೆಲ್ಲ ವಂಚಿಸಿ ದುಡ್ಡು ಮಾಡಲಿಕ್ಕಾಗಿ ಬರುತ್ತಿದ್ದಾನೆ. ಆತ ಮತಾಂತರ ಮಾಡಿದ ಕುರಿತು ಯಾವ ದಾಖಲೆಗಳೂ ಇಲ್ಲ. ಬೆನ್‌ಹಿನ್ ಇಲ್ಲಿಗೆ ಬರುತ್ತಾನೆಂದ ಕೂಡಲೇ ಇಲ್ಲಿನ ಕ್ರೈಸ್ತ ಸಮುದಾಯವನ್ನೇ ಅನುಮಾನದಿಂದ ನೋಡುವುದು, ಅವರೆಲ್ಲ ಬೆನ್ನಿಹಿನ್ ಭಕ್ತರೆಂದು ಪ್ರಚಾರ ಮಾಡುವುದು ಮತ್ತು ಆ ನೆವ ಹಿಡಿದುಕೊಂಡು ಇಲ್ಲಿನ ಕ್ರೈಸ್ತರ ಮೇಲೆ ದಾಳಿ ನಡೆಸುವುದು ಸಲ್ಲದು. ಬಿಜೆಪಿಗಳು ಇದಕ್ಕೆಲ್ಲ ತಯಾರಾಗಿ ನಿಂತಿರಬಹುದು. ಸರಕಾರ ಎಚ್ಚೆತ್ತುಕೊಳ್ಳಬೇಕು. ಎಲ್ಲ ಧರ್ಮಗಳಲ್ಲಿಯೂ ಮುಗ್ಧರು, ಮೂರ್ಖರು ಇದ್ದೇ ಇರುತ್ತಾರೆ. ಅಂತಹವರು ಬೆನ್ನಿಹಿನ್ ಸಭೆಗಳಿಗೆ ಹೋಗಬಹುದು. ಬೆನ್ನಿಹಿನ್ ಸಭೆಗಳಿಗೆ ಹಿಂದೂಗಳು ಸಹ ಕಳೆದ ಬಾರಿ ಬಂದಾಗ ಹೋಗಿದ್ದರು. ಅದರಲ್ಲೇನು ಮಹಾ ವಿಶೇಷವಿಲ್ಲ. ನಮ್ಮ ಸ್ವಾಮೀಜಿಗಳು-ಕಾವಿಧಾರಿಗಳು-ಬಾಬಾಗಳು ಮಾಡುವ ಢೋಂಗಿ ಏನು ಕಡಿಮೆ ಇದೆಯೆ? ಭಾರತದ ತಥಾಕಥಿಕ ದೇವಮಾನವರೆಲ್ಲ ಅರಬ್ ದೇಶಗಳಿಗೆ, ಅಮೆರಿಕಕ್ಕೆ, ಜಪಾನಿಗೆ ಎಲ್ಲ ಹೋಗುವುದಿಲ್ಲವೆ? ಅಲ್ಲಿನ ಜನರು ಭಾರತದ ಬಾಬಾಗಳ ವಿರುದ್ಧ ಪ್ರತಿಭಟಿಸಿದ್ದಾರೆಯೆ? ಮೌಢ್ಯ ವಿರೋಧಿ ವಿಧೇಯಕದ ಪ್ರಸ್ತಾವವನ್ನೇ ವಿರೋಧಿಸುವ ಆರೆಸ್ಸೆಸ್ ಗ್ಯಾಂಗ್‌ಗೆ ಬೆನ್ನಿಹಿನ್ ಮೌಢ್ಯ ಬಿತ್ತುತ್ತಾರೆ ಎಂದು ಹೇಳುವ ನೈತಿಕತೆಯಾದರೂ ಎಲ್ಲಿಂದ ಬರಬೇಕು?


ಬೆನ್ನಿಹಿನ್ ಅನ್ನು ವಿರೋಧಿಸಬೇಕು. ಆದರೆ ಅದು ವೈಚಾರಿಕ ನೆಲೆಯಲ್ಲಿ ಮಾತ್ರ. ಆತ ಬಂದು ಭಾರತವೇ ಹಾಳಾಗುತ್ತದೆ ಎಂದು ಬಾಯಿ ಬಡಿದುಕೊಳ್ಳುವ ಅಗತ್ಯವಿಲ್ಲ. ಬೆನ್ನಿಹಿನ್ ಸೇರಿದಂತೆ ಬೆಂಗಳೂರಿನಲ್ಲಿ ನಡೆಯುವ ಎಲ್ಲ ಮೌಢ್ಯ ಬಿತ್ತುವ ಧಾರ್ಮಿಕ-ರಾಜಕೀಯ ನಾಯಕರ ಸಭೆಗಳನ್ನು ನಿಷೇಧಿಸುವ ಸಾಧ್ಯತೆಯನ್ನು ಸರಕಾರ ಯೋಚಿಸಬೇಕಾಗಿದೆ. ಬೆನ್ನಿಹಿನ್ ಅನ್ನು ಇಷ್ಟೆಲ್ಲ ವಿರೋಧಿಸುತ್ತಲೇ ಒಂದು ಮಾತು ಹೇಳಲೇಬೇಕು. ಬೆನ್ನಿಹಿನ್ ಬರುತ್ತಾನೆ. ಜನರಿಗೆ ಮಂಕುಬೂದಿ ಎರಚಿ ತನ್ನ ಕೆಲಸ ಮುಗಿಸಿ ದುಡ್ಡಿನ ಚೀಲದೊಂದಿಗೆ ವಾಪಸಾಗುತ್ತಾನೆ. ಅಲ್ಲಿ ಬೆನ್ನಿಹಿನ್ ಹಿಂದೂ ಧರ್ಮದ ವಿರುದ್ಧವೋ, ಇಸ್ಲಾಂ ವಿರುದ್ಧವೋ ಮಾತನಾಡಲಾರ. ಅಲ್ಲಿ ಹೋದ ಜನಗಳಿಗೆ ಬೆನ್ನಿಹಿನ್ ಸ್ಪರ್ಶದಿಂದ ಸಮಾಧಾನವಾಗಬಹುದು ಅಥವಾ ಸ್ಪರ್ಶ ಸಿಗದೆ ಅಸಮಾಧಾನವೂ ಆಗಬಹುದು. ಆದರೆ ಅವರೆಲ್ಲ ಶಾಂತಿಯಿಂದ ಮನೆಗಳಿಗೆ ಮರಳುತ್ತಾರೆ. ಕಲ್ಲಡ್ಕ ಪ್ರಭಾಕರ




ಭಟ್ಟರ ಹಾಗೆ, ಪೇಜಾವರ ಸ್ವಾಮಿಯ ಹಾಗೆ, ಮುತಾಲಿಕ್-ತೊಗಾಡಿಯನ ಹಾಗೆ ಬೆನ್ನಿಹಿನ್ ಜನರನ್ನು ಕೆರಳಿಸುವ ಮಾತನಾಡುವುದಿಲ್ಲ ಮತ್ತು ಈ ಹಿಂದೂತ್ವವಾದಿಗಳ ಪ್ರಚೋದನೆಯ ಮಾತು ಕೇಳಿ ಮನೆಗೆ ಮರಳುವ ಬಜರಂಗಿಗಳು ಮುಸ್ಲಿಮರ ಕ್ರೈಸ್ತರ ಮನೆಗಳಿಗೆ ಬೆಂಕಿ ಹಚ್ಚಿದ ಹಾಗೆ ಬೆನ್ನಿಹಿನ್ ಭಕ್ತರು ಅನ್ಯರ ಬದುಕನ್ನು ಹಾಳು ಮಾಡುವುದಿಲ್ಲ. ಬೆನ್ನಿಹಿನ್ ಭಾರತಕ್ಕೆ ಬರುವುದನ್ನು ನಿಷೇಧಿಸೋಣ. ಅದಕ್ಕೂ ಮೊದಲು ನಿಷೇಧಿಸಬೇಕಾದವರು, ಬಂಧಿಸಬೇಕಾದವರು, ಜೈಲಿಗೆ ಹೋಗಬೇಕಾದವರು ಎಷ್ಟು ಜನ ನಮ್ಮ ನಡುವೆಯೆ ಇದ್ದಾರಲ್ಲ, ಅವರ ಬಗ್ಗೆಯೂ ಮಾತನಾಡಬೇಕಲ್ಲವೆ? ಬೆನ್ನಿಹಿನ್ ಬಗೆ ಮಾತನಾಡುವ ಮೊದಲು ನಮ್ಮ ಬೆನ್ ಹಿಂದೆ ಒಮ್ಮೆ ನೋಡಿ ಕೊಳ್ಳಬೇಕಲ್ಲವೆ?

■ ಶಶಿಧರ್ ಹೆಮ್ಮಾಡಿ







ಚಿತ್ರದುರ್ಗ: ಕಾಂಗ್ರೆಸ್ ನಾಯಕರ ನಡುವಿನ ಒಡಕೇ ಸೋಲಿನ ಗುಟ್ಟು

ಪಾರ್ಲಿಮೆಂಟ್ ಚುನಾವಣೆ ಸಮೀಪಿಸಿದಂತೆ ಚಿತ್ರದುರ್ಗ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಇನ್ನಿಲ್ಲದ ಚುರುಕು ಕಂಡುಬರುತ್ತಿದೆ. ಅದರಲ್ಲೂ ಚಿತ್ರದುರ್ಗದ ಕಾಂಗ್ರೆಸ್ ಕಚೇರಿಯಲ್ಲಿ ಟಿಕೆಟ್‌ಗಾಗಿ ಪೈಪೋಟಿ ಶುರುವಾಗಿದೆ. ಆದೆಷ್ಟು ಜನ ಕೈ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆಂದರೆ ಅವರನ್ನೆಲ್ಲ ಕ್ಯೂ ನಿಲ್ಲಿಸಿದರೆ ಅದು ಪಕ್ಷದ ರಾಜ್ಯಾಧ್ಯಕ್ಷ ಪರಮೇಶ್ವರರ ಬೆಂಗಳೂರು ಮನೆ ಮುಟ್ಟುತ್ತದೆ.


ಈ ಹಿಂದೆ ಈ ಕ್ಷೇತ್ರಕ್ಕೆ ಅಷ್ಟು ಡಿಮ್ಯಾಂಡ್ ಇರಲಿಲ್ಲ. ಆದರೆ ಯಾವಾಗ ಚಿತ್ರದುರ್ಗ ಪಾರ್ಲಿಮೆಂಟ್ ಕ್ಷೇತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲು ಆಯಿತೋ ಆಗ ಇದು ಬಹುಬೇಡಿಕೆಯ ಕ್ಷೇತ್ರವಾಯಿತು. ಬೆಂಗಳೂರು, ಮೈಸೂರು, ದಾವಣಗೆರೆ ಕಡೆಯ ಮಾದಿಗ, ಚಲುವಾದಿ, ಬೋವಿ ಸಮುದಾಯದ ಹಿರಿ-ಕಿರಿ ರಾಜಕಾರಣಿಗಳೆಲ್ಲ ಇದಕ್ಕೆ ಮುಗಿಬಿದ್ದರು. ಈಗಾಗಲೇ ಹೆಚ್ಚು ಕಡಿಮೆ 40 ಜನ ಟಿಕೆಟ್ ಆಕಾಂಕ್ಷಿಗಳು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ನಿವೃತ್ತ ಸರಕಾರಿ ಅಧಿಕಾರಿಗಳ ದಂಡೂ ಈಗ ದುರ್ಗದಲ್ಲಿ ಬೀಡುಬಿಟ್ಟಿದೆ. ಪೊಲೀಸ್ ಅಧಿಕಾರಿ ಆಗಿದ್ದ ಬಿ.ಕೆ.ಶಿವರಾಂ, ಡಿವೈಎಸ್‌ಪಿ ಆಗಿದ್ದ ರಾಮಪ್ಪ ಪ್ರಿನ್ಸಿಪಾಲರಾಗಿದ್ದ ತಿಪ್ಪಣ್ಣ, ನಗರಸಭಾ ಕಮೀಷನರ್ ಆಗಿದ್ದ ವಿಜಯಕುಮಾರ, ಲಿಡ್ಕರ್‌ನ ಮಾಜಿ ಅಧ್ಯಕ್ಷ ಚಂದ್ರಪ್ಪ... ಕೂಡ ಕಾಂಗ್ರೆಸ್ ಟಿಕೆಟ್‌ಗಾಗಿ ಹಂಬಲಿಸುತ್ತಿದ್ದಾರೆ.

ಇನ್ನು ಕಾಲಾನುಕಾಲದಿಂದ ಒಂದಿಲ್ಲೊಂದು ಹುದ್ದೆ ಅಲಂಕರಿಸುತ್ತಲೇ ಬಂದಿರುವ ಹೆಚ್.ಹನುಮಂತಪ್ಪನವರೂ ತನಗೆ ಅಥವಾ ತನ್ನ ಮಗನಿಗೆ ಟಿಕೆಟ್ ಸಿಗಲಿ ಎಂದು ಕಾಯುತ್ತಿದ್ದಾರೆ. ದಿವಂಗತ ಕೆ.ಹೆಚ್.ರಂಗನಾಥರ ಮಗ ಭಾಸ್ಕರ ಕೂಡ ಅಪ್ಪನ ಹೆಸರಲ್ಲಿ ಟಿಕೆಟ್ ಕನಸು ಕಾಣುತ್ತಿದ್ದಾರೆ.


ಮೀಸಲಾತಿ ಲೆಕ್ಕಾಚಾರ

ಕರ್ನಾಟಕದಲ್ಲಿ ಪಾರ್ಲಿಮೆಂಟ್‌ನ ಏಳು ಕ್ಷೇತ್ರಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿವೆ. ಕಳೆದ ಚುನಾವಣೆಯಲ್ಲಿ ಇಂತಹ ಮೀಸಲು ಕ್ಷೇತ್ರಗಳಿಂದ ಕಾಂಗ್ರೆಸ್ ಪಕ್ಷದ ಮಲ್ಲಿಕಾರ್ಜುನ್ ಖರ್ಗೆ, ಧ್ರುವನಾರಾಯಣ ಮತ್ತು ಕೆ.ಎಚ್.ಮುನಿಯಪ್ಪ ಗೆದ್ದು ಸಂಸತ್ತಿಗೆ ಹೋಗಿದ್ದರು. ಆದರೆ ಚಿತ್ರದುರ್ಗ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್‌ನ ಡಾ. ತಿಪ್ಪೇಸ್ವಾಮಿ ಸೋಲನ್ನು ಕಂಡಿದ್ದರು.

ಆಗ ಸ್ಥಳೀಯ ರಾಜಕೀಯ ವಾತಾವರಣ ಕಾಂಗ್ರೆಸ್ ಪಾಲಿಗೆ ಪ್ರತಿಕೂಲವಾಗಿತ್ತು, ಏಕೆಂದರೆ ಆಗ ಜಿಲ್ಲೆಯಲ್ಲಿರುವ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸೇತರರೇ ಶಾಸಕರಾಗಿದ್ದರು. ಚಳ್ಳಕೆರೆಯಿಂದ ಬಿಜೆಪಿಯ ತಿಪ್ಪೇಸ್ವಾಮಿ, ಚಿತ್ರದುರ್ಗದಿಂದ ಜೆಡಿಎಸ್‌ನ ಬಸವರಾಜನ್, ಹಿರಿಯೂರಿನಿಂದ ಪಕ್ಷೇತರ ಸುಧಾಕರ್, ಹೊಸದುರ್ಗದಿಂದ ಪಕ್ಷೇತರ ಗೂಳಿಹಟ್ಟಿ ಶೇಖರ್, ಹೊಳಲ್ಕೆರೆಯಿಂದ ಬಿಜೆಪಿಯ ಚಂದ್ರಪ್ಪ ಗೆದ್ದಿದ್ದರೆ ಮೊಳಕಾಲ್ಮೂರು ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್ ಪಕ್ಷದ ಎನ್.ವೈ.ಗೋಪಾಲಕೃಷ್ಣ ಗೆದ್ದಿದ್ದರು. ಹೀಗೆ ಅಸೆಂಬ್ಲಿ ಚುನಾವಣೆಯಲ್ಲಿ ಸೋತವರು ಪಾರ್ಲಿಮೆಂಟ್ ಚುನಾವಣೆಯಲ್ಲಿ ಆಸಕ್ತಿ ವಹಿಸಲಿಲ್ಲ, ಜೊತೆಗೆ ಆಗ ಯಡಿಯೂರಪ್ಪನ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದುದ್ದರಿಂದ ಬಿಜೆಪಿಯ ಜನಾರ್ದನಸ್ವಾಮಿಯ ಎದುರು ಕಾಂಗ್ರೆಸ್‌ನ ಡಾ. ತಿಪ್ಪೇಸ್ವಾಮಿಗೆ 2.80 ಲಕ್ಷ







ಮತ ಗಳಿಸುವುದೇ ಹೆಚ್ಚಿನ ಸಾಧನೆಯಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಆಗ ಜಿಲ್ಲಾ ಕಾಂಗ್ರೆಸ್ ನಾಯಕರ ನಡುವೆಯೇ ಒಗ್ಗಟ್ಟು ಇರಲಿಲ್ಲ. ಇವೆಲ್ಲವೂ ಕಾಂಗ್ರೆಸ್‌ನ ತಿಪ್ಪೇಸ್ವಾಮಿಯ ಸೋಲಿಗೆ ಕಾರಣವಾಗಿದ್ದವು.

ಈ ಕ್ಷೇತ್ರದಲ್ಲಿ ಮಾದಿಗ ಸಮುದಾಯದ ಒಟ್ಟು ನಾಲ್ಕು ಲಕ್ಷ ಚಿಲ್ಲರೆ ಮತಗಳಿವೆ. ಆದ್ದರಿಂದ ಈ ಸಮುದಾಯವೇ ಚುನಾವಣಾ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಕಾರಣಕ್ಕೇ ಚಿತ್ರದುರ್ಗ ಪಾರ್ಲಿಮೆಂಟ್ ಚುನಾವಣೆಯಲ್ಲಿ ಎಡಗೈ ಸಮುದಾಯದವರಿಗೇ ಟಿಕೆಟ್ ಸಿಗುವುದು ಗ್ಯಾರಂಟಿ ಆಗಿದೆ.

ಕಾಂಗ್ರೆಸ್ಸೊಳಗಿನ ಮುಸುಕಿನ ಗುದ್ದಾಟ

2009ರ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಇದ್ದ ವಾತಾವರಣ 2014ರ ಮಟ್ಟಿಗಿಲ್ಲ. ಮೊದಲನೆಯದಾಗಿ ಜಿಲ್ಲೆಯ ಆರು ವಿಧಾನಸಭೆಯ ಕ್ಷೇತ್ರಗಳ ಪೈಕಿ ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು ಮತ್ತು ಚಳ್ಳಕೆರೆ ಅಸೆಂಬ್ಲಿ ಕ್ಷೇತ್ರಗಳಿಂದ ಕಾಂಗ್ರೆಸ್ ಶಾಸಕರು ಗೆದ್ದಿದ್ದಾರೆ. ಜೊತೆಗೆ ತುಮಕೂರು ಜಿಲ್ಲೆಯಲ್ಲಿದ್ದರೂ ಚಿತ್ರದುರ್ಗ ಪಾರ್ಲಿಮೆಂಟ್ ಕ್ಷೇತ್ರಕ್ಕೆ ಸೇರುವ ಶಿರಾ ಕ್ಷೇತ್ರದಿಂದಲೂ ಕಾಂಗ್ರೆಸ್‌ನ ಟಿ.ಬಿ.ಜಯಚಂದ್ರ ಗೆದ್ದು ಮಂತ್ರಿಯಾಗಿದ್ದಾರೆ. ಹೊಳಲ್ಕೆರೆ ಕ್ಷೇತ್ರದಿಂದ ಗೆದ್ದಿರುವ ಆಂಜನೇಯ ಅವರೂ ಮಂತ್ರಿಯಾಗಿದ್ದಾರೆ. ಆದರೂ ಈ ಕ್ಷೇತ್ರದಲ್ಲಿ ಈಗಲೂ ಕಾಂಗ್ರೆಸ್ ನಾಯಕರ ನಡುವೆಯೇ ಒಗ್ಗಟ್ಟು ಇಲ್ಲದಂತಾಗಿದೆ.

ಬರುವ ಚುನಾವಣೆಯಲ್ಲಿ ಮಾದಿಗ ಸಮುದಾಯದವರಿಗೆ ಟಿಕೆಟ್ ಗ್ಯಾರಂಟಿ ಎನ್ನುವ ವಾತಾವರಣ ಇರುವುದರಿಂದ ಕಳೆದ ಬಾರಿ ಸೋತ ಡಾ.ತಿಪ್ಪೇಸ್ವಾಮಿ, ಪೌರಸೇವಾ ನೌಕರರ ಸಂಘದ ಮಾಜಿ ಅಧ್ಯಕ್ಷ ಜಿ.ಎಸ್.ಮಂಜುನಾಥ್ ಮತ್ತು ಚಳ್ಳಕೆರೆಯ ಪ್ರಕಾಶಮೂರ್ತಿ ಲಾಬಿ ಶುರುಮಾಡಿದ್ದಾರೆ.

ಇವರೆಲ್ಲರ ಪೈಕಿ ತಿಪ್ಪೇಸ್ವಾಮಿಗೆ ಈ ಬಾರಿಯೂ ಟಿಕೆಟ್ ಸಿಗುವ ಸಾಧ್ಯತೆಗಳೇ ಹೆಚ್ಚು ಕಾಣಿಸುತ್ತಿವೆ. ಆದರೆ ಯಾರಿಗೆ ಟಿಕೆಟ್ ಕೊಟ್ಟರೂ ಪರವಾಗಿಲ್ಲ, ತಿಪ್ಪೇಸ್ವಾಮಿಗೆ ಕೊಡುವುದು ಬೇಡ ಎಂಬುದು ಮಂತ್ರಿ ಆಂಜನೇಯ ಅವರ ವಾದವಾಗಿದೆ.

ಜಿ.ಎಸ್.ಮಂಜುನಾಥ ಕಳೆದ ವಿಧಾನಸಭಾ ಚುನಾವಣೆಯಲ್ಲಿ ತನಗೆ ಕಾಂಗ್ರೆಸ್ ಟಿಕೆಟ್ ಸಿಗುವುದಿಲ್ಲ ಎಂದು ಗೊತ್ತಾದೊಡನೆ ಮೊದಲು ಬಿಜೆಪಿಯ, ಆನಂತರ ಕೆಜೆಪಿಯ ಬಾಗಿಲನ್ನು ತಟ್ಟಿದ್ದರು. ಆದರೆ ಅಲ್ಲೂ ಸಲ್ಲದೆ ಕಾಂಗ್ರೆಸ್ ಪಕ್ಷದಲ್ಲಿಯೇ ಉಳಿದುಕೊಂಡಿದ್ದರು. ಇಂತಹ ಮಂಜುನಾಥರಿಗೆ ಬೆಂಬಲವಾಗಿ ಹಿರಿಯೂರಿನ ಶಾಸಕ ಸುಧಾಕರನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ.

ಪ್ರಕಾಶಮೂರ್ತಿ ಕಳೆದ ಸ್ಥಳೀಯ ಚುನಾವಣೆಯಲ್ಲಿ ಚಳ್ಳಕೆರೆಯ 22ನೇ ವಾರ್ಡಿನಿಂದ ಸೋತವರು. ಈಗ ಇವರು ಪಾರ್ಲಿಮೆಂಟ್ ಕನಸು ಕಾಣುತ್ತಿದ್ದಾರೆ. ಇಂತಹ ಪ್ರಕಾಶಮೂರ್ತಿಗೆ ಮಾಜಿ ಶಾಸಕ ಎನ್.ವೈ.ಗೋಪಾಲಕೃಷ್ಣ ಮತ್ತು ಹಾಲಿ ಶಾಸಕ ರಘುಮೂರ್ತಿ ಬೆಂಬಲವಿದೆ.

ಎಸ್.ಪಿ. ಜೆಡಿಎಸ್ ಶಾಮೀಲು

ಜಿಲ್ಲೆಯಲ್ಲಿ ಜೆಡಿಎಸ್ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಕಳೆದ ವರ್ಷ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಹಿರಿಯೂರು ಕ್ಷೇತ್ರದಿಂದ ಕೃಷ್ಣಪ್ಪ ಅಲ್ಪಮತಗಳ ಅಂತರದಿಂದ ಸೋತರು. ಹಾಗೆಯೇ ಈ ಹಿಂದೆ ಚಿತ್ರದುರ್ಗದಿಂದ ಶಾಸಕರಾಗಿದ್ದ ಎಸ್.ಕೆ.ಬಸವರಾಜನ್ ಬಿಜೆಪಿಯ ತಿಪ್ಪಾರೆಡ್ಡಿ ವಿರುದ್ಧ ಸೋತರು.

ಗೂಳಿಹಟ್ಟಿ ಶೇಖರ್ ಮಾಜಿ ಶಾಸಕನಾದ ನಂತರ ಸುಮ್ಮನಿರಲಾರದೆ ಚಿತ್ರದುರ್ಗ ಪಾರ್ಲಿಮೆಂಟಿಗೆ ಸಾಮು ತೆಗೆಯಲು ಶುರುಮಾಡಿದ್ದಾರೆ. ಈ ಹಿಂದೆ ಪಕ್ಷೇತರ ಶಾಸಕರಾಗಿದ್ದ ಗೂಳಿಹಟ್ಟಿ ಈ ಬಾರಿ ಚಿತ್ರದುರ್ಗ ಪಾರ್ಲಿಮೆಂಟಿಗೆ ಉತ್ತರ ಪ್ರದೇಶದಿಂದ ಸಮಾಜವಾದಿ ಪಾರ್ಟಿಯನ್ನು ತಂದು ಸೈಕಲ್ ಹೊಡೆಯುತ್ತಿದ್ದಾರೆ. ಹೊಳಲ್ಕೆರೆ ಮತ್ತು ಹಿರಿಯೂರು ಅಸೆಂಬ್ಲಿ ಕ್ಷೇತ್ರಗಳಲ್ಲಿ ಇರುವ ಯಾದವ ಸಮುದಾಯದ ಮತಗಳ ಮೇಲೆ ಕಣ್ಣಿಟ್ಟಿರುವ ಶೇಖರ್ ಜೆಡಿಎಸ್ ಪಾರ್ಟಿಯೊಂದಿಗೆ ಕೈಜೋಡಿಸುವ ಸೂಚನೆಗಳಿವೆ. ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರಿಗೂ ಈ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯನ್ನು ನಿಲ್ಲಿಸುವ ಬದಲಾಗಿ ಎಸ್‌ಪಿಯ ಗೂಳಿಹಟ್ಟಿ ಶೇಖರರಿಗೆ ಬೆಂಬಲ ಕೊಡುವ ಸಾಧ್ಯತೆಗಳಿವೆ.

ಜನಾರ್ದನಸ್ವಾಮಿ ವರ್ಸಸ್ ತಿಪ್ಪಾರೆಡ್ಡಿ

ಕಳೆದ ಬಾರಿ ಕಾಂಗ್ರೆಸ್ಸಿಗರ ಹೊಣಗೇಡಿತನವೇ ಬಿಜೆಪಿಯ ಗೆಲುವಿಗೆ ಕಾರಣವಾಗಿತ್ತು. ಆಗ ಗೆದ್ದಿದ್ದ ಜನಾರ್ದನಸ್ವಾಮಿ ತಾನೇ ಈ ಬಾರಿಯೂ ಬಿಜೆಪಿಯ ಅಭ್ಯರ್ಥಿ ಎಂದು ನಂಬಿದ್ದಾರೆ. ಆದರೆ ಯಡ್ಡಿಯ ಕೆಜೆಪಿ ಬಿಜೆಪಿಯೊಂದಿಗೆ ಸೇರಿದ್ದರಿಂದ ಈಗ ಜನಾರ್ದನಸ್ವಾಮಿಗೆ ಕೊಕ್ ಸಿಗುವ ಸಾಧ್ಯತೆಗಳಿವೆ. ಯಾಕೆಂದರೆ 2013ರ ಅಸೆಂಬ್ಲಿ ಚುನಾವಣೆಯಲ್ಲಿ ಹೊಳಲ್ಕೆರೆಯಿಂದ ಕೆಜೆಪಿ ಅಭ್ಯರ್ಥಿಯಾಗಿ ಸೋತಿದ್ದ ಚಂದ್ರಪ್ಪನನ್ನೇ ಯಡ್ಡಿ ಚಿತ್ರದುರ್ಗದ ಪಾರ್ಲಿಮೆಂಟ್‌ನಿಂದ ಕಣಕ್ಕಿಳಿಸಲು ಹಟ ತೊಡುವುದು ಗ್ಯಾರಂಟಿ ಆಗಿದೆ.

ಹಾಲಿ ಬಿಜೆಪಿ ಶಾಸಕ ತಿಪ್ಪಾರೆಡ್ಡಿಗೂ ಜನಾರ್ದನಸ್ವಾಮಿಗೂ ಅಷ್ಟಕ್ಕಷ್ಟೇ ಆಗಿರುವುದರಿಂದ ಯಡ್ಡಿಯ ಮಾತಿಗೆ ತಿಪ್ಪಾರೆಡ್ಡಿಯು ಜೈ ಅನ್ನುವುದು ಗ್ಯಾರಂಟಿ. ಹಾಗೊಮ್ಮೆ ಚಂದ್ರಪ್ಪ ಬಿಜೆಪಿ ಕ್ಯಾಂಡಿಡೇಟ್ ಆದಲ್ಲಿ ಬಿಜೆಪಿ ಚಿತ್ರದುರ್ಗದಿಂದಲೇ ಕಾಲ್ಕೀಳುವುದು ಸತ್ಯ.

ಪಾಠ ಕಲಿಯಬೇಕು

ಕಳೆದ ಆಗಸ್ಟ್ ತಿಂಗಳಲ್ಲಿ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ತನ್ನ ಜಿಲ್ಲಾಧ್ಯಕ್ಷ ಎಂ.ಎ. ಸೇತುರಾಮ ಅವರಿಗೆ ಟಿಕೆಟ್ ಕೊಟ್ಟು ಹೀನಾಯ ಸೋಲು ಕಂಡಿತ್ತು. ಸೇತುರಾಮ ಬದಲಾಗಿ ಹನುಮಲಿ ಷಣ್ಮುಖಪ್ಪನಿಗೆ ಟಿಕೆಟ್ ನೀಡಿದ್ದರೆ ಪರಿಷತ್ ಚುನಾವಣೆಯಲ್ಲಿ ಕೈ ಪಾರ್ಟಿ ಮುಖಭಂಗ ಅನುಭವಿಸುತ್ತಿರಲಿಲ್ಲ.


ಸೇತುರಾಮ್ ವಿರುದ್ಧ ಗೆದ್ದ ರಘು ಆಚಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೂ ಮುನ್ನ ದುರ್ಗದ ಮುಖ ನೋಡಿದವನೇ ಅಲ್ಲ. ಇದ್ದಕ್ಕಿದ್ದಂತೆ ಮೈಸೂರಿನಿಂದ ಬಂದು ಚಿತ್ರದುರ್ಗದಲ್ಲಿ ಕಾಣಿಸಿಕೊಂಡ ರಘು ಆಚಾರಿ ಅಚಾನಕ್ಕಾಗಿ ಗೆದ್ದುಬಿಟ್ಟ. ಆತನ ಗೆಲುವಿಗೂ ಕಾರಣ ಚಿತ್ರದುರ್ಗ ಕಾಂಗ್ರೆಸ್ ನಾಯಕರ ನಡುವಿನ ಕಿತ್ತಾಟ.

ಬರಲಿರುವ ಪಾರ್ಲಿಮೆಂಟ್ ಚುನಾವಣೆಯಲ್ಲಾದರೂ ಕಾಂಗ್ರೆಸ್ ನಾಯಕರು ಒಂದಾದರೆ, ತಮ್ಮ ನಡುವಿನ ಮತ್ಸರಗಳನ್ನು ಮರೆತರೆ ಕಾಂಗ್ರೆಸ್ ಗೆಲುವ ಕಷ್ಟ ಸಾಧ್ಯವೇನಲ್ಲ. ಹಿಂದಿನ ಸೋಲುಗಳಿಂದ ಪಾಠ ಕಲಿತು ಅವರೆಲ್ಲರೂ ಒಂದಾಗಬೇಕಷ್ಟೇ.

● ಷಣ್ಮುಖ.ಟಿ.ಎನ್

ಕೋ.ಚೆ.ಯವರನ್ನು ಕೊಡಗು ಹೀಗೇಕೆ ನಡೆಸಿಕೊಂಡಿತು?

ಕೊಡಗಿನಲ್ಲಿ 80ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಿದ್ಯುಕ್ತವಾಗಿ ತೆರೆ ಬಿದ್ದಿದೆ. ಆದರೆ ಬಿಜಾಪುರದಲ್ಲಿ ನಡೆದ 79ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಹಿರಿಯ ಪ್ರಗತಿಪರ ಚಿಂತಕ ಕೋ. ಚೆನ್ನಬಸಪ್ಪನವರನ್ನು ಕೊಡಗಿನ ಮತೀಯ ಶಕ್ತಿಗಳು ನಡೆಸಿಕೊಂಡ ಅಮಾನವೀಯ ರೀತಿ ಈ ಸಂಭ್ರಮಕ್ಕೆ ಕವಿಸಿದ ಮಂಕು ಹಾಗೇ ಇದೆ. ಕೋ.ಚೆಯವರು 'ಅಪ್ರತಿಮ ದೇಶಭಕ್ತ ಟೀಪೂ ಸುಲ್ತಾನ್' ಕೃತಿಯಲ್ಲಿ ಟೀಪುವನ್ನು ವೈಭವೀಕರಿಸಿ ಕೊಡವರನ್ನು ಅವಮಾನಿಸಿದ್ದಾರೆಂಬ ಸುಳ್ಳನ್ನು ಸೃಷ್ಟಿಸಿ 'ಅವರು ಕ್ಷಮೆ ಕೇಳಬೇಕು; ಇಲ್ಲದಿದ್ದರೆ ಕೊಡಗಿಗೆ ಬರಲು ಬಿಡುವುದಿಲ್ಲ, ವೇದಿಕೆ ಏರಲು ಬಿಡುವುದಿಲ್ಲ' ಮುಂತಾಗಿ ಭಯವನ್ನು ಒಡ್ಡಲಾಯಿತು. ಕೋ.ಚೆ.ಯವರು ತಾನು ಕೊಡಗಿಗೆ ಬಂದೇ ತೀರುತ್ತೇನೆ, ಕೋಮುವಾದಿಗಳನ್ನು ಎದುರಿಸುತ್ತೇನೆ ಎಂಬ ದಿಟ್ಟತನವನ್ನು ಮೆರೆದಿದ್ದರು. ಆದರೆ ಕೊನೆಯ ಹಂತದಲ್ಲಿ ಏಕಾಏಕಿಯಾಗಿ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಕೊಡವರನ್ನು ಕುರಿತಾಗಿ ಮೈಸೂರು ರಾಜ್ಯ ಗೆಜೆಟಿಯರ್‌ನಲ್ಲಿ ಪ್ರಕಟವಾದ ಬರಹವನ್ನು ಸಂಗ್ರಹಿಸಿರುವುದಾಗಿಯೂ, ಅದರಲ್ಲಿ ಕೊಡವರನ್ನು ಅವಮಾನಿಸುವ ಒಂದಕ್ಷರವೂ ಇಲ್ಲವೆಂದು ವಿವರಣೆ ನೀಡಿದ್ದ ಕೋ.ಚೆ.ಯವರು ವಿಷಾದ ವ್ಯಕ್ತಪಡಿಸಿದ್ದೇಕೆ? ಕೋಮುವಾದಿಗಳ ಸಾಂಸ್ಕೃತಿಕ ಭಯೋತ್ಪಾದನೆ ಅವರಲ್ಲಿ ಆತಂಕ ತಲ್ಲಣಗಳನ್ನು ಹುಟ್ಟಿಸಿತೆ? ಸಕಾಲದಲ್ಲಿ ಕರ್ನಾಟಕದ ಪ್ರಗತಿಪರ



ಸಂಘಟನೆಗಳು ಮತ್ತು ಲೇಖಕರು ದೊಡ್ಡ ಪ್ರಮಾಣದಲ್ಲಿ ಸಮ್ಮೇಳನದಲ್ಲಿ ಕೋ.ಚೆ.ಯವರು ಈ ಕುರಿತು ತುಟಿ ಬಿಚ್ಚಲಿಲ್ಲ, ಬೆಂಬಲಿಸದ ಕಾರಣ ಏಕಾಕಿ ಅನ್ನಿಸಿತೆ? ಸಮ್ಮೇಳನದಲ್ಲಿ ಕೋ.ಚೆ.ಯವರು ಈ ಕುರಿತು ತುಟಿ ಬಿಚ್ಚಲಿಲ್ಲ, ನಾಡಿನ ಹಿರಿಯ ಜೀವವೊಂದರ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದ ಬುನಾದಿಯ ಮೇಲೆ 80ನೇ ಅಖಿಲಭಾರತ ಸಾಹಿತ್ಯ ಸಮ್ಮೇಳನ ನಡೆದು ಹೋದದ್ದು ವಿಪರ್ಯಾಸವೇ ಸರಿ.

ನವಕರ್ನಾಟಕ ಪ್ರಕಟಿಸಿರುವ ಈ ಪುಟ್ಟ ಕೃತಿ ಕೋ.ಚೆ.ಯವರ ಸ್ವತಂತ್ರ ಕೃತಿಯಲ್ಲ. ಟಿಪ್ಪು ಮತಾಂಧ ನಾಗಿರಲಿಲ್ಲ, ಹಿಂದೂ ಧರ್ಮ ರಕ್ಷಕ ಹಾಗೂ ವಸಾಹತು ವಿರೋಧೀ ಅಪ್ರತಿಮ ಹೋರಾಟಗಾರನಾಗಿದ್ದ ಎಂಬ ಚಿಂತನೆಯನ್ನು ಪ್ರತಿಪಾದಿಸುವ ಕೆಲವು ಕೃತಿಗಳ ಪ್ರಮುಖ ಭಾಗಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಇದರಲ್ಲಿ ಮೂರು ಭಾಗಗಳಿದ್ದು ಮೊದಲ ಭಾಗದಲ್ಲಿ ಟಿಪ್ಪುವನ್ನು ಹಿಂದೂ ವಿರೋಧಿಯಾಗಿ ಪ್ರತಿನಿಧಿಕರಿಸುತ್ತಿರುವ ಕರ್ನಾಟಕದ ಕೋಮುವಾದಿ ರಾಜಕಾರಣ ಹಾಗೂ ಸಾಂಸ್ಕೃತಿಕ ರಾಜಕಾರಣಗಳ ಹಿನ್ನೆಲೆ ಮುನ್ನೆಲೆಗಳ ವೈಚಾರಿಕ ಚರ್ಚೆ ಇದೆ. ಹಾಗೂ ಟಿಪ್ಪೂನನ್ನು ಹಿಂದೂ ಧರ್ಮ ರಕ್ಷಕ ಎಂದು ನಿರೂಪಿಸುವ ದಿ.ತಿ.ತಾ. ಶರ್ಮಾ ಅವರ 'ಮೈಸೂರ ಇತಿಹಾಸದ ಹಳೆಯ ಪುಟಗಳು' ಕೃತಿಯ ಚಾರಿತ್ರಿಕ ಆಧಾರಗಳನ್ನು ಸಂಗ್ರಹಿಸಲಾಗಿದೆ.

ಎರಡನೆಯ ಭಾಗದಲ್ಲಿ ಟಿಪ್ಪೂವಿನ ವಸಾಹತು ವಿರೋಧೀ ಹೋರಾಟದ ಚಾರಿತ್ರಿಕ ಮಹತ್ವವನ್ನು ಸಾರುವ ನರಸಿಂಹ ಗುಂಜವಾಲೆ ಹಾಗೂ ಅನಿಸ್ ಚಾರೂದವಾಲಿ (ಉರ್ದು ಮೂಲ)ಯವರ ಲೇಖನಗಳನ್ನು ಸಂಗ್ರಹಿಸಲಾಗಿದೆ. ಮೂರನೇ ಭಾಗದಲ್ಲಿ ಮೈಸೂರಿನ ರಾಜ್ಯ ಗೆಜೆಟಿಯರ್‌ನಲ್ಲಿ ಕೊಡವರನ್ನು ಕುರಿತು ಪ್ರಕಟವಾದ ಬರಹವನ್ನು ಅನುವಾದಿಸಿ ಪ್ರಕಟಿಸಲಾಗಿದೆ.

ಕೋ.ಚೆ.ಯವರ ಈ ಕೃತಿಯಲ್ಲಿ ಕೊಡವರನ್ನು ಅವಮಾನಿಸುವ ಯಾವ ಸಂಗತಿಗಳಿಲ್ಲದಿದ್ದರೂ ಅವರನ್ನು ವಿರೋಧಿಸಲು ಕಾರಣ ಸ್ಪಷ್ಟವಾಗಿದೆ. 'ಟಿಪ್ಪು ಮತಾಂಧನಲ್ಲ', 'ಹಿಂದೂ ಧರ್ಮ ರಕ್ಷಕ' ಎಂಬ ಸಂಕಥನವನ್ನು ಚಾರಿತ್ರಿಕ ಹಾಗೂ ಸಂಶೋಧನಾತ್ಮಕ ಆಕರಗಳ ಬಲದಿಂದ ನಿರೂಪಿಸಲು ಯತ್ನಿಸಿದ್ದಾರೆ. ಚಿದಾನಂದ ಮೂರ್ತಿಗಳ ವಾದವನ್ನು ಆಧಾರಸಹಿತ ತಳ್ಳಿಹಾಕಿದ್ದಾರೆ. ಕರ್ನಾಟಕದಲ್ಲಿ ಕೋಮುವಾದಿಗಳ ಒಂದು ಮುಖ್ಯ ಅಸ್ತ್ರವನ್ನೇ ಮೊಂಡು ಮಾಡಲು ಯತ್ನಿಸಿದ್ದಾರೆ. ಹೀಗಾಗಿ ಕರ್ನಾಟಕದ ಕೋಮುವಾದಿ ಸಾಂಸ್ಕೃತಿಕ ರಾಜಕಾರಣ ಕೊಡವರನ್ನು ಉಪಯೋಗಿಸಿಕೊಂಡು ಕೋ.ಚೆ.ಯವರ ವಿರುದ್ಧ ಪ್ರತಿಭಟನೆಯನ್ನು ತೋರಿಸಿದೆ.

ಇದು ಕೋಮುವಾದ ಮತ್ತು ಜಾತ್ಯತೀತವಾದಗಳ ನಡುವಿನ ಸಂಘರ್ಷವಾಗಿದೆ. ಕರ್ನಾಟಕದ ಮಾನವಂತರೆಲ್ಲ ಕೋ.ಚೆ.ಯವರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾದ ಬಗ್ಗೆ ದನಿ ಎತ್ತಬೇಕಾಗಿದೆ.

● ಡಾ.ಎಂ.ಡಿ.ಒಕ್ಕುಂದ

...ನ್ನು ಮುಂದೆ ಆರೆಸ್ಸೆಸ್ ಹೇಳಿದಂತೆ ಕೇಳುತ್ತೇನೆ

ಧೂತ್ತೇರಿ

ಯಾತು

...ನು ...ರ ...ಳಿ ಮಾಡಿ ... ವಿಧೇಯರನ ಕೇಜ್ರಿವಾಲ್ ದೆಹಲಿ ಕೋಟೆಯನ್ನ ವಶಪಡಿಸಿಕೊಂಡು ... ಅಲ್ಲದೆ ಮುಂಬರುವ ಲೋಕಸಭಾ ...ಗೂ ತಯಾರಿ ನಡೆಸುತ್ತಿರುವುದನ್ನು ನೋಡಿದ ...ಶಾನೆ ಬೆಚ್ಚಿ ಕೂತಿದೆಯಂತಲ್ಲಾ. ಏಕೆಂದರೆ ...ಮಾನದಂಡ ಹಿಡಿದು ವಾದಿಸಿದರೂ ಈ ... ಕೇಜ್ರಿವಾಲನ ಕೂದಲಿಗೂ ...ತ್ತಿಲ್ಲವಂತೆ. ಈ ಗುಜರಾತಿ ಮೂಲದ ... ಕಳೆದ ಶತಮಾನದಲ್ಲೇ ಮದುವೆಯಾಗಿ ...ನ್ನು ಅಲ್ಲೇ ಬಿಟ್ಟು, ಗಡ್ಡ ಬಿಟ್ಟು 'ನಾನು ಬ್ರಹ್ಮಚಾರಿ' ಎಂದುಕೊಂಡು ...ನಂತಲ್ಲಾ. ಕಟ್ಟಿಕೊಂಡ ಹೆಂಡತಿ ಏನಾಗಿದ್ದಾಳೆಂದು ತಿರುಗಿ ನೋಡದ ...ಚಾರಿ ಕೈಕೊಟ್ಟ ಪ್ರೇಯಸಿ ಏನು ಮಾಡುತ್ತಿದ್ದಾಳೆಂದು ಬೇಹುಗಾರಿಕೆ ...ತಲ್ಲಾ. ಚೆಡ್ಡಿಗಳು ಅರ್ಧರಾತ್ರಿಯಲ್ಲಿ ಆರಿಸಿರುವ ಆ ಪಾರ್ಟಿಯ ...ಭ್ಯರ್ಥಿಯಾದ ಮೋದಿ ಕೊಂದಿರುವ ಜೀವ ಬರೋಬ್ಬರಿ ಮೂರು ...ಎನ್‌ಕೌಂಟರ್ ಮಾಡಿಸಿದ್ದು ಇನ್ನೂ ಲೆಕ್ಕ ಸಿಕ್ಕಿಲ್ಲ. ಈತನ ಸಚಿವ ...ವರು ಜೈಲಿನಲ್ಲಿರಬೇಕಾದವರು. ಈತನ ಮಾತು ಕೇಳಿದ ಅಧಿಕಾರಿಗಳು ...ಸುತ್ತಿದ್ದಾರೆ. ಹಲವರು ನ್ಯಾಯಾಲಯದ ಕಟಕಟೆ ಎದುರಿಸುತ್ತಿದ್ದಾರೆ. ... ಮರೆಮಾಚಿ ಮೋದಿ ಭಾರತದ ಮೂಲ ವ್ಯಾಧಿಗೆ ಹೇಳಿಮಾಡಿಸಿದ ...ಷಧವಿದ್ದಂತೆ: ಪ್ರತಿಯೊಬ್ಬ ಭಾರತೀಯನೂ ಹಚ್ಚಿಕೊಳ್ಳಬೇಕಾದ ... ಎಂದು ಗಂಟಲು ಹರಿಯುತ್ತಿರಬೇಕಾದರೆ ಕಸಪೊರಕೆ ಹಿಡಿದು ... ಹಾಕಿಕೊಂಡು ಬಂದ ಕೇಜ್ರಿವಾಲ್ ಚೆಡ್ಡಿಗಳಿಗೆಲ್ಲಾ ...ನಾಗಿದ್ದಾನಂತಲ್ಲಾ. ಕೇಜ್ರಿವಾಲನೊಟ್ಟಿಗೆ ಯೋಗೇಂದ್ರ ಯಾದವ್ ...ರೆ ನಮ್ಮ ಕತೆಯೇ ಮುಗಿಯಿತೆಂದು ಭಾವಿಸಿರುವ ...ಮತೀಯರುಗಳಿಗೆ ಸ್ಕೆಚ್ ಹಾಕುತ್ತಿವೆಯಂತಲ್ಲಾ, ಧೂತ್ತೇರಿ!

* * * * * *

...ನಿ ಇನ್ನು ಮುಂದೆ ಯಾವ ತಪ್ಪನ್ನೂ ಮಾಡುವುದಿಲ್ಲ. ...ಸುವುದಿಲ್ಲ. ಐಶ್ವರ್ಯ ಸಂಗ್ರಹಿಸುವುದಿಲ್ಲ. ಮುಖ್ಯರಸ್ತೆಯಲ್ಲಿ ...ಹೋಟೆಲ್ ಕಟ್ಟುವುದಿಲ್ಲ. ಅರಣ್ಯ ಭೂಮಿಯನ್ನು ...ಸುವುದಿಲ್ಲ. ಖಾಲಿ ಇದ್ದ ಸೈಟುಗಳನ್ನು ಕೊಂಡು, ...ವರ ಮನೆಯವರಿಗೆ ತೊಂದರೆ ಕೊಟ್ಟು ನನಗೆ ಮಾರಿಬಿಡಿ ...ಕೇಳುವುದಿಲ್ಲ. ಅರಣ್ಯ ಭೂಮಿಯಲ್ಲಿ ಹಾಸ್ಟೆಲ್ ಕಟ್ಟಿ ... ಭೂಮಿಯಲ್ಲಿ ಕಾಲೇಜ್ ಕಟ್ಟಡ ನಿರ್ಮಿಸುವುದಿಲ್ಲ. ...ದಾನಕ್ಕಾಗಿ ಕೆರೆ ಒತ್ತುವರಿ ಮಾಡುವುದಿಲ್ಲ. ಗಣಿಗಾರಿಕೆ ...ರಿಂದ ಚೆಕ್ ಮೂಲಕ ಲಂಚ ತೆಗೆದುಕೊಳ್ಳುವುದಿಲ್ಲ. ...ವಿರುದ್ಧ ಹೋರಾಡುತ್ತೇನೆ. ಭ್ರಷ್ಟ ರಾಜಕಾರಣಿಗಳ ವಿರುದ್ಧ ...ಸುತ್ತೇನೆ. ಕಾಲಕಾಲಕ್ಕೆ ಬ್ರಾಹ್ಮಣರನ್ನ ಕರೆದು ಯಜ್ಞಯಾಗ ...ಕ್ಕ ಅವರಿಗೆ ದಾನ ಕೊಡುತ್ತೇನೆ. ಆರೆಸ್ಸೆಸ್ ಬೈಠಕ್‌ಗಳಲ್ಲಿ ...ಸುತ್ತೇನೆ. ಪ್ರತಿ ದಿನ ಗೋಳ್ವಾಲ್ಕರ್‌ನ ಚಿಂತನಗಂಗಾ ಓದುತ್ತೇನೆ. ...ನಮ್ಮದಿಗಾಗಿ ಭಗವದ್ಗೀತೆ ಓದುತ್ತೇನೆ. ಅನಂತಕುಮಾರನನ್ನ ಅಣ್ಣನಂತೆ ...ನೆ. ಈಶ್ವರಪ್ಪನನ್ನ ನನ್ನ ಹೆಂಡತಿಯ ತಮ್ಮನಂತೆ ಭಾವಿಸುತ್ತೇನೆ. ...ಸುವವರೆಗೂ ಬಿಜೆಪಿಗೆ ದ್ರೋಹ ಬಗೆಯುವುದಿಲ್ಲ. ಆರೆಸ್ಸಿಸ್ಸಿನವರು ...ತೆ ಕೇಳುತ್ತೇನೆ. ನನ್ನನ್ನು ಬಿಜೆಪಿಗೆ ಸೇರಿಸಿಕೊಂಡು ಕಾಪಾಡಿ" ಎಂದು ... ಕಂಡ ವಿಶಿಷ್ಟ ಕಾಯಿಲೆಯ ನಾಯಕನೊಬ್ಬ ಮತ್ತೊಬ್ಬ ರೋಗಿಷ್ಟನ ...ದ್ದನಂತಲ್ಲಾ! ಕಾಲಿಗೆ ಬಿದ್ದವನು ಮಠಾಧಿಪತಿಗಳು ಶ್ರೇಷ್ಠ ಶರಣನೆಂದು ...ವಂತಹ ಯಡೂರಪ್ಪನಾಗಿದ್ದು, ಆಶೀರ್ವದಿಸಿ "ಇನ್ನು ಮುಂದಾದರೂ ...ರು" ಎಂದವನು ವೈ.ಚ. ಜಯದೇವನಂತಲ್ಲಾ, ಧೂತ್ತೇರಿ!!

* * * * * *

... ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಸಿದ್ದರಾಮಯ್ಯ ಈಚೆಗೆ ...ಸತ್ವಗಳನ್ನು ಸಂಪುಟಕ್ಕೆ ಸೇರಿಸಿಕೊಂಡು ಶಾನೆ ತಿಣುಕತೊಡಗಿದ್ದಾರಂತಲ್ಲಾ. ...ಸಾಮಿಗಳನ್ನು ಮುಖ್ಯಮಂತ್ರಿಯಾದಾಗಲೇ ಮಂತ್ರಿಗಳನ್ನಾಗಿ ...ಂಡಿದ್ದರೆ ಚೆಡ್ಡಿಗಳಿಗೆ ಈ ರೂಪದಲ್ಲಿ ನಾಲಿಗೆ ಬೆಳೆಯಲು ...ಗುತ್ತಿರಲಿಲ್ಲ ಎಂಬುದು ಸಿದ್ದು ಅಭಿಮಾನಿಗಳ ವ್ಯಾಖ್ಯಾನವಾಗಿದೆಯಲ್ಲಾ. ...ತ ಮುಖ್ಯವಾಗಿ "ಸಿದ್ದು ಸಂಪುಟಕ್ಕೆ ಖದರು ಬಂದಿದ್ದೇ ರೋಷನ್‌ಬೇಗ್ ...ಕೆ. ಶಿವಕುಮಾರನಿಂದ. ರೋಷನ್‌ಬೇಗ್ ಮುಸ್ಲಿಂ ಜನಾಂಗದ ನಾಯಕ. ಏಕೆಂದರೆ ಜಾಫರ್ ಷರೀಫ್‌ಗೆ ವಯಸ್ಸಾಯಿತು. ಇಬ್ರಾಹಿಂನನ್ನು ಯಾರೂ ನಂಬುತ್ತಿಲ್ಲ, ಖಮರುಲ್ ಇಸ್ಲಾಂ ಉತ್ತರ ಕರ್ನಾಟಕದ ಕಡೆಗೆ ಸೀಮಿತ. ಇನ್ನು ಯು.ಟಿ. ಖಾದರ್ ಉದಯವಾಣಿ ಎಂಬ ಭಟ್ಟರ ಕರಪತ್ರ ಮೆಚ್ಚಿಕೊಂಡ ಸಾದು ಸಾಬಿ. ಆದ್ದರಿಂದ ಭೂಗತಲೋಕದವರಿಂದ ಹಿಡಿದು ಮನೆಹಾಳ ರಾಜಕಾರಣಿಗಳಿಗೆಲ್ಲಾ ಆಪ್ತನಂತಿರುವ ರೋಷನ್‌ಬೇಗ್ ಸಿದ್ದು ಸಂಪುಟಕ್ಕೆ ಶೋಭೆ ತರುವ ವ್ಯಕ್ತಿ. ಇನ್ನು ಡಿ.ಕೆ.ಶಿ.ಯಂತೂ ಒಕ್ಕಲಿಗ ಜನಾಂಗದ ಕೆಟ್ಟನಾಯಕರ ಲೀಡರ್. ದೇವೇಗೌಡರು ಕುಮಾರಣ್ಣರು ಗುಪ್ತವಾಗಿ ಮಾಡುವ ಕೃತ್ಯಗಳನ್ನು ಬಹಿರಂಗವಾಗಿಯೇ ಮಾಡುವ ಆಸಾಮಿ. ಚಾಮುಂಡೇಶ್ವರಿ ಚುನಾವಣೆಯಲ್ಲಿ ಮುಳುಗಿಹೋಗಲಿದ್ದ ಸಿದ್ದು ಕೈಹಿಡಿದು, ದಡಮುಟ್ಟಿಸಿದ ಆಪತ್ಬಾಂಧವ. ಅಷ್ಟೇ ಅಲ್ಲ, ಮುಂದೆ ನಡೆಯಲಿರುವ ಎಂ.ಪಿ. ಚುನಾವಣೆಯಲ್ಲಿ ಮೂರ್‍ನಾಲ್ಕು ಜಿಲ್ಲೆಯ ಕ್ಯಾಂಡೇಟುಗಳಿಗೆ ಧನಸಹಾಯ ಮಾಡಿ ಗೆಲ್ಲಿಸಿಕೊಂಡು ಬರುವಂತಹ ಹಣಬಲ- ತೋಳ್ಬಲ ಇರುವಂತಹ ಡಿ.ಕೆ.ಶಿ.ಯಿಂದ ಸಿದ್ದು ಸತ್ತ ಸಂಪುಟಕ್ಕೆ ಜೀವ ಬಂದಿದೆ ಗೊತ್ತ" ಎಂದು ಭೃಷ್ಟಪ್ರಿಯರು ಬೆನ್ನು ತಟ್ಟಿಕೊಳ್ಳುತ್ತಿವೆಯಲ್ಲಾ, ಧೂತ್ತೇರಿ!!


* * * * * *

ಲಂಕೇಶರ ಬಳಿ ಸೇರಿಕೊಂಡಿದ್ದ ಸತ್ಯವಂತರು, ಪ್ರಾಮಾಣಿಕರು ಮತ್ತು ಧ್ಯೇಯನಿಷ್ಠರೆಂಬ ಸೋಗಿನಲ್ಲಿದ್ದ ಹಲವಾರು ಜನಗಳ ಪೈಕಿ ಛದ್ಮವೇಷದಲ್ಲಿ ಚೆಡ್ಡಿಗಳೂ ಇದ್ದರೆಂಬುದು ಈಚೆಗೆ ಅನಾವರಣಗೊಳ್ಳುತ್ತಿದೆಯಲ್ಲಾ. ಈ ಪೈಕಿ




"ಪುಕ್ಕಲು ಶೆಟ್ಟಿ" ಎಂದು ಲಂಕೇಶರಿಂದಲೇ ಬಿರುದು ಗಳಿಸಿದ್ದ ಚೆಡ್ಡಿ ಕೇಶವಕೃಪಾ ಸೇರಿಕೊಂಡು ರಾಷ್ಟ್ರೋತ್ಥಾನ ಸಾಹಿತ್ಯದ ಪುನರುತ್ಥಾನ ಕೆಲಸದಲ್ಲಿ ತೊಡಗಿದ್ದಾನಲ್ಲ. "ನಿಮ್ಮನ್ನು ನೋಡದೆ ಇದ್ದರೆ ನನಗೆ ಜ್ವರ ಬರುತ್ತೆ ಸಾರ್. ನನ್ನ ಹೆಂಡತಿಯಂತೂ ನನಗಿಂತಲೂ ನಿಮಗೆ ಲಂಕೇಶ್‌ರೆ ಹೆಚ್ಚು ಪ್ರಿಯರೆ ಎಂದು ಜಗಳ ಮಾಡುತ್ತಾಳೆ" ಎಂದು ಪ್ರೇಮಿಯಂತೆ ಉಲಿಯುತ್ತಿದ್ದ ಸಿರ್ಸಿ ಕಡೆಯ ಹೈದನೊಬ್ಬ ಯಕ್ಷಗಾನದ ಸ್ತ್ರೀಪಾತ್ರದಂತೆ ಆಫೀಸಿನಲ್ಲೆಲ್ಲಾ ಕುಣಿದಾಡುತ್ತಿದ್ದನಲ್ಲಾ, ಈತ ಈಗ ಕಡಲತೀರದ ಚೆಡ್ಡಿ ಕರಪತ್ರಕ್ಕೆ ಕಾಲಮಿಷ್ಟನಾಗಿದ್ದಾನಲ್ಲ. ಅದಷ್ಟೇ ಅಲ್ಲದೆ ಆಗ ಲಂಕೇಶರ ಆರಾಧಕನಾಗಿದ್ದವನು, ಈಗ ಮೋದಿ ಆರಾಧಕನಾಗಿ ಮೋದಿ ಪ್ರಧಾನಿಯಾದರೆ ಸಾಕು ಈ ದೇಶದ ಎಲ್ಲ ಸಮಸ್ಯೆಗಳೂ ಜಾದೂ ಮಾಡಿದಂತೆ ಪರಿಹಾರ ಕಾಣುತ್ತವೆ ಎಂಬಂತೆ ವಾದಿಸುತ್ತಿದ್ದಾನಲ್ಲಾ. ಈ ಛದ್ಮವೇಷದ ಚೆಡ್ಡಿಯ ಆವೇಶ ಕಂಡು ಬೆಚ್ಚಿಬಿದ್ದ ಲಂಕೇಶ್ ಅಭಿಮಾನಿಗಳು "ಇಂಥ ಬದಲಾವಣೆ ಇಂಥವನಿಂದ ಹೇಗೆ ಸಾಧ್ಯ?" ಎಂದು ಹುಬ್ಬೇರಿಸಿದರಂತಲ್ಲಾ, ಅಚ್ಚರಿಪಡುವ ಅಗತ್ಯವೇ ಇಲ್ಲ. ಲಂಕೇಶರ ಜೊತೆ ಇಪ್ಪತ್ತು ವರ್ಷ ಸ್ವಚ್ಛ ರಾಜಕಾರಣ ಬಯಸಿ ಅಗ್ರಲೇಖನ ಬರೆದವನೇ ಶ್ರೀರಾಮುಲು ಹತ್ತಿರಕ್ಕೋಗಿ ಪರಿಚಾರಕರಾಗುತ್ತಾರೆಂದರೆ ಆಶ್ಚರ್ಯಪಡಬೇಕೆ ಹೊರತು, ಸಿರ್ಸಿ ಕಡೆಯ ಬ್ರಾಹ್ಮಣ ಪಿಂಡದ ಬುದ್ಧಿಭ್ರಮಣೆಗೆ ಯಾರೂ ಅಚ್ಚರಿಪಡಬಾರದೆಂಬುದು ಸಾಮಾನ್ಯ ಓದುಗರ ಅಭಿಪ್ರಾಯವಂತಲ್ಲಾ, ಧೂತ್ತೇರಿ!

...ಹಾರಾಷ್ಟ್ರಕ್ಕಿಂತ ಗುಜರಾತ್ ಹಿಂದಿದ್ದರೂ ಸುಳ್ಳು ಬೊಗಳಿದ ಮೋದಿ



...ಿ ಅಂಕಿಅಂಶಗಳನ್ನು ಹರಿಬಿಡುವುದರಲ್ಲಿ ಮೋದಿಗೆ ...ಯಾಗಿ ನಿಲ್ಲಬಲ್ಲವರು ಯಾರೂ ಇಲ್ಲವೆಂದರೆ ಅದು ಖಂಡಿತಾ ...ಕ್ತಿ ಆಗಲಾರದು. ಮೋದಿ ಮಾಡಿರುವ ಹತ್ತು ಹಲವಾರು ...ಳು ಈಗಾಗಲೇ ಜನಜನಿತವಾಗಿವೆ. ಆದರೂ ತಮಾಷೆ ... ಹೀಗೆ ಬಂಡವಾಳ ಪೂರ್ತಿಯಾಗಿ ಬಯಲಾಗಿದ್ದರೂ ...ತ, ಕೊಂಚವೂ ಲಜ್ಜೆಯಿಲ್ಲದೆ ತನ್ನ ನಿತ್ಯ ಕಾಯಕವನ್ನು ...ಮುಂದುವರಿಸಿರುವುದು!

...ಚೆಗೆ ಮುಂಬಯಿಯಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ...ತ್ತಾ 'ಮಹಾರಾಷ್ಟ್ರ ಕತ್ತಲಲ್ಲಿ ಮುಳುಗಿದ್ದರೆ ಗುಜರಾತ್‌ನಲ್ಲಿ ...ಳಕು ತುಂಬಿದೆ' ಎಂದು ಕೊಚ್ಚಿಕೊಂಡ. 'ಗುಜರಾತ್‌ನಿಂದ ...ನಾಸಿಕ ಮಾರ್ಗವಾಗಿ ಡ್ರೈವ್ ಮಾಡಿಕೊಂಡು ಬರುತ್ತಿರುವಾಗ ...ಷ್ಟ್ರ ಬಂದಾಕ್ಷಣ ನನಗೆ ಗೊತ್ತಾಯಿತು; ಅದು ಹೇಗೆಂದರೆ ...ಕತ್ತಲೆಯೋ ಅದೇ ಮಹಾರಾಷ್ಟ್ರ, ಎಲ್ಲಿ ಬೆಳಕಿದೆಯೋ ಅದೇ ...' ಎಂದು ತನ್ನ ಎಂದಿನ ನಾಟಕೀಯ ಶೈಲಿಯಲ್ಲಿ ಹೇಳಿದ. ...ವದಲ್ಲಿ ಮಹಾರಾಷ್ಟ್ರದ ನಾಸಿಕ್‌ಗೆ ಹೋಲಿಸಿದರೆ ಗುಜರಾತ್‌ನ ...ಲ್ಲೆಯಲ್ಲಿರುವ ಸಾಕಷ್ಟು ಒಂದು ಅತ್ಯಂತ ಹಿಂದುಳಿದ ...ಗಿದೆ. ಎರಡನೆಯದಾಗಿ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೋಲಿಸಿದಾಗ ಮೊದಲ ಸ್ಥಾನದಲ್ಲಿರುವುದು ಮಹಾರಾಷ್ಟ್ರ: ಗುಜರಾತ್ ಅಲ್ಲ. ಮಹಾರಾಷ್ಟ್ರದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 28,310.83 ಮೆವಾ ಇದ್ದರೆ ಗುಜರಾತ್‌ನ ಸಾಮರ್ಥ್ಯ ಕೇವಲ 15,306 ಮೆವಾ (2012ರ ಮಾರ್ಚ್ ತನಕ).




ಎರಡು ರಾಜ್ಯಗಳ ಅಭಿವೃದ್ಧಿ ಕುರಿತಂತೆಯೂ ಮೋದಿ ಇನ್ನೊಂದು ಅಸತ್ಯವನ್ನಾಡಿದ. '1960ರಲ್ಲಿ ವಿಶಾಲ ಮುಂಬಯಿ ಪ್ರಾಂತದಿಂದ ಗುಜರಾತ್ ಮತ್ತು ಮಹಾರಾಷ್ಟ್ರಗಳನ್ನು ಪ್ರತ್ಯೇಕಿಸಿದಾಗ ಗುಜರಾತ್ ತೀರಾ ಹಿಂದುಳಿದಿತ್ತು; ಆದರೀಗ ಅದು ಅಭಿವೃದ್ಧಿಯ ಶಿಖರವನ್ನು ತಲುಪಿದೆ' ಎಂದ. ನಿಜಸಂಗತಿ ಏನೆಂದರೆ ಶತಮಾನಗಳಿಂದಲೂ ಗುಜರಾತಿಗಳು ಅತ್ಯಂತ ಉದ್ಯಮಶೀಲ ಜನಾಂಗ. ನಿರ್ದಿಷ್ಟವಾಗಿ 1960ರ ದಶಕಕ್ಕೆ ಬಂದರೆ ಆ ಕಾಲದಲ್ಲಿ ಗುಜರಾತ್‌ನ ಬಟ್ಟೆ ಉದ್ಯಮ ಇಡೀ ದೇಶದಲ್ಲೇ ಹೆಸರುವಾಸಿಯಾಗಿತ್ತು. 2012-13ರ ಸಾಲಿನಲ್ಲಿ ಈ ಎರಡು ರಾಜ್ಯಗಳ ಆರ್ಥಿಕ ಅಭಿವೃದ್ಧಿಯನ್ನು ಹೋಲಿಸಿ ನೋಡಿದಾಗ ಗುಜರಾತ್ ಮಹಾರಾಷ್ಟ್ರಕ್ಕಿಂತ ಹಿಂದುಳಿದಿರುವ ವಿಚಾರ ಸ್ಪಷ್ಟವಾಗಿ ಗೋಚರಿಸುತ್ತದೆ.

ರಾಜ್ಯ	ಕೃಷಿ ಸಂಬಂಧಿತ	ಕೃಷಿರಂಗ	ಉದ್ಯಮರಂಗ
ಮಹಾರಾಷ್ಟ್ರ	65,504	54,044	245,147
ಗುಜರಾತ್	51,525	45,085	163,826
ರಾಜ್ಯ	ಉತ್ಪಾದನೆ	ಸೇವೆ	ಜಿಡಿಪಿ
ಮಹಾರಾಷ್ಟ್ರ	163,875	532,914	843,565
ಗುಜರಾತ್	112,521	183,533	398,884

(ಆಧಾರ: ಯೋಜನಾ ಆಯೋಗದ ಅಂಕಿಅಂಶಗಳು. ಕೋಟಿ ರೂಪಾಯಿಗಳಲ್ಲಿ)

ವನ್ ಇಂಡಿಯಾ ಎಂಬ ವೈಭವದ ಘೋಷಣೆಯೊಂದಿಗೆ ದೇಶವ... ಒಗ್ಗಟ್ಟಿಗೆ ಕರೆಕೊಡುವ ವ್ಯಕ್ತಿ ಈ ರೀತಿ ಸುಳ್ಳು ಹೇಳುತ್ತಾ ... ... ಇನ್ನೊಂದರ ವಿರುದ್ಧ ಎತ್ತಿಕಟ್ಟುತ್ತಿರುವುದನ್ನ ... (http://www.truthofgujarat.com)



ಕಟ್ಟಾ ಜಾತ್ಯತೀತ ಮತ್ತು ಅಪ್ಪಟ ಪಾರದರ್ಶಕ ವ್ಯಕ್ತಿತ್ವದ ಎ.ಕೆ. ಸುಬ್ಬಯ್ಯನವರು 1988ರಲ್ಲಿ ಕೋಮುವಾದಿ ಆರ್‌ಎಸ್‌ಎಸ್ ಕುರಿತು 'ಆರ್‌ಎಸ್‌ಎಸ್ ಅಂತರಂಗ' ಎಂಬ ಪುಸ್ತಕವನ್ನು ಬರೆದಿದ್ದರು. ಆ ಪುಸ್ತಕವು ಆಗಲೇ ಬಹಳಷ್ಟು ಜನಪ್ರಿಯವಾಗಿತ್ತು. ಅನಂತರ ಅದು ಎರಡು ಬಾರಿ ಮುದ್ರಣಗೊಂಡಿತ್ತು. ಈಗ ಆ ಪುಸ್ತಕವನ್ನು ನಮ್ಮ 'ಲಂಕೇಶ್ ಪ್ರಕಾಶನ' ಮರು ಪ್ರಕಟಿಸುತ್ತಿದ್ದು ಅದರ ಆಯ್ದ ಭಾಗಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ನೀಡಿದ್ದೇವೆ.


ಆರ್‌ಎಸ್‌ಎಸ್ ಅಂತರಂಗ

ಆರ್‌ಎಸ್‌ಎಸ್‌ನವರು ಪ್ರಾಮಾಣಿಕರೇ?

ಆರ್‌ಎಸ್‌ಎಸ್ ಮಂದಿಯೆಂದರೆ ಬಹಳ ನಂಬಿಕಸ್ಥರು, ಪ್ರಾಮಾಣಿಕರು ಎಂದೆಲ್ಲಾ ಬಣ್ಣಿಸಲಾಗುತ್ತಿದೆ. ಆದರೆ ಅವರ ನಿಜರೂಪ ಬೇರೆಯೇ ಇದೆ. ಹಿಂದೂ ಧರ್ಮದ ರಕ್ಷಕರ ಸೋಗಿನಲ್ಲಿ ಸಮಾಜದಿಂದ ಲೂಟಿ ಮಾಡುವ ಹಣ ಏನಾಗುತ್ತದೆಂದು ಯಾರಿಗೂ ತಿಳಿಸುವುದಿಲ್ಲ. ಮೀನಾಕ್ಷಿಪುರಂನಲ್ಲಿ ಕೆಲವೊಂದು ಹರಿಜನರು ಇಸ್ಲಾಂ ಧರ್ಮ ಸ್ವೀಕಾರ ಮಾಡಿದ ಘಟನೆಯ ಹಿನ್ನೆಲೆಯಲ್ಲಿ ಹಿಂದೂ ಧರ್ಮ ಮುಳುಗೇಹೋಯಿತೆಂದು ಹುಯಿಲೆಬ್ಬಿಸಿ, ಧರ್ಮರಕ್ಷಣೆಯ ಹೆಸರಿನಲ್ಲಿ ಸಂಗ್ರಹಿಸಿದ ಹಣವೆಷ್ಟು? ಈ ಹಣ ಎಲ್ಲಿದೆ? ಇಲ್ಲದಿದ್ದರೆ, ಯಾತಕ್ಕಾಗಿ ಖರ್ಚು ಮಾಡಿದರು? ಈ ಎಲ್ಲಾ ಪ್ರಶ್ನೆಗಳಿಗೆ ಸತ್ಯವಾಗಿರುವ ಉತ್ತರ ದೊರೆತರೆ; ಆರ್‌ಎಸ್‌ಎಸ್‌ನ ಬಗ್ಗೆ ಮುಗ್ಧ ಭಾವನೆಯಿಂದ ಅನವಶ್ಯಕ ಅಭಿಮಾನವಿಟ್ಟಿರುವ ಜನರ ಎದೆ ಒಡೆದುಹೋದೀತು. ಈ ಪ್ರಕರಣದಲ್ಲಿ ಹಣ ಸಂಗ್ರಹಿಸಲು ವಿತರಣೆ ಮಾಡಿರುವ ರಶೀದಿ ಪುಸ್ತಕಗಳು, ಇನ್ನೂ ಬೆಂಗಳೂರಿನ ಬೀದಿಗಳಲ್ಲಿ ಸಿಗುತ್ತವೆ. ಅಂದಮೇಲೆ ಅಂತಿಮ ಲೆಕ್ಕಪತ್ರ ಹೇಗೆ ತಯಾರು ಮಾಡಿದರು? ಜೊತೆಗೆ ನಕಲಿ ರಶೀದಿ ಪುಸ್ತಕ ಮುದ್ರಿಸಿಕೊಂಡು ಹಣ ಸಂಗ್ರಹ ಮಾಡಿದ ವ್ಯಕ್ತಿಯೊಬ್ಬ ಬೆಂಗಳೂರಿನಲ್ಲಿ ಇಂದೂ ಆರ್‌ಎಸ್‌ಎಸ್‌ನ ಕಣ್ಮಣಿಯಾಗಿದ್ದಾನೆ. ಆರ್‌ಎಸ್‌ಎಸ್‌ನ ಬಗ್ಗೆ ಕೆಲವು ಮುಗ್ಧರಲ್ಲಿರುವ ಸದ್ಭಾವನೆಯನ್ನು ದುರುಪಯೋಗಪಡಿಸಿ, ಹಣ ಸಂಗ್ರಹಿಸುವ ಸಂದರ್ಭಕ್ಕಾಗಿ ಆರ್‌ಎಸ್‌ಎಸ್‌ನವರು ಸದಾ ಕಾಯುತ್ತಿರುತ್ತಾರೆ. ನೆರೆ ಹಾವಳಿ, ಕ್ಷಾಮ, ಅಣೆಕಟ್ಟು ಒಡೆಯುವುದು ಇಂಥ ಸಂದರ್ಭಗಳು ದೊರೆತರೆ ಆರ್‌ಎಸ್‌ಎಸ್‌ಗೆ ಸುಗ್ಗಿ. ಎಷ್ಟು ಸಂಗ್ರಹಿಸುತ್ತಾರೆ, ಆ ಹಣ ಎಲ್ಲಿಗೆ ಹೋಗುತ್ತದೆ - ಇವೆಲ್ಲವೂ ರಹಸ್ಯವಾಗಿಯೇ ಉಳಿದಿದೆ. ಹೀಗೆ ಸಂಗ್ರಹಿಸಿದ ಹಣವನ್ನು ತೊಡಗಿಸುವುದಕ್ಕೆ ಅನೇಕ ವ್ಯವಸ್ಥೆಗಳಿವೆ. ಹಿಡಿಯಷ್ಟು ಇರುವ ಆರ್‌ಎಸ್‌ಎಸ್‌ನ ವರಿಷ್ಠರ ಹೆಸರಿನಲ್ಲಿ ಅನೇಕ ಟ್ರಸ್ಟುಗಳನ್ನು ಮಾಡಿಕೊಂಡಿದ್ದಾರೆ. ಗಗನಚುಂಬಿ ಕಟ್ಟಡಗಳು ನಿರ್ಮಾಣವಾಗಿವೆ. ಈ ರೀತಿ ಸಮಾಜವನ್ನು ದೋಚಿ, ದೊರೆತ ಹಣದಿಂದ ಕೆಲವು ವ್ಯಕ್ತಿಗಳ ಹೆಸರಿನಲ್ಲಿ ಮಾಡಿರುವ ಆಸ್ತಿ ಕರ್ನಾಟಕದಲ್ಲಿಯೇ ಸುಮಾರು 35 ಕೋಟಿ ಬೆಲೆ ಬಾಳಬಹುದು. ಶಿವಮೊಗ್ಗ ಜಿಲ್ಲೆಯಲ್ಲಿ ಖಾಸಗಿಯಾಗಿ ಒಂದು ಸಾರಿಗೆ ಸಂಸ್ಥೆಯನ್ನೇ ಆರ್ ಎಸ್ ಎಸ್ ನಡೆಸುತ್ತಿದೆ. ಈ ಹಿಂದೆ ಮಂಗಳೂರಿನ ಉಜಿರೆಯಲ್ಲಿ ನಡೆದ ವಿಶ್ವಹಿಂದೂ ಸಮ್ಮೇಳನದ ಸಂದರ್ಭದಲ್ಲಿ ಹರಿದ್ವಾರದಿಂದ ಮಂಗಳೂರಿನವರೆಗೆ 'ಏಕತಾಯಜ್ಞ'ವೆಂಬ ಮೇಳವೊಂದು ನಡೆಯಿತಷ್ಟೆ. ಆ ಸಂದರ್ಭದಲ್ಲಿ ಜೊತೆಯಲ್ಲಿ ತಂದ ಗಂಗಾಜಲವೆಂದು ಹೇಳಿಕೊಂಡು, ಪಾತ್ರೆಯಲ್ಲಿ ತುಂಬಿದ ನೀರನ್ನು ಬಾಟ್ಲಿಯೊಂದಕ್ಕೆ 5 ರೂಪಾಯಿ, 10 ರೂಪಾಯಿಯಂತೆ ಅಲ್ಲಲ್ಲಿ ಬೆಲೆಗೆ ಮಾರಲಾಯಿತು. ಹೀಗೆ ಎಲ್ಲಾ ಜಿಲ್ಲೆಗಳಲ್ಲಿ ಮಾರಾಟ ಮಾಡುವಷ್ಟು ಗಂಗಾಜಲವನ್ನು ತಂದಿದ್ದರೇ? ಇಲ್ಲ, ನಿಜಸ್ಥಿತಿಯೆಂದರೆ ಸಿಕ್ಕಿದ ಹಳ್ಳಕೊಳ್ಳದ ನೀರನ್ನು ತುಂಬಿ ಗಂಗಾಜಲವೆಂದು ಜನತೆಗೆ ಮಾರಿ ಹಣ ಸಂಗ್ರಹಿಸಿರುವುದು ಇವರ ಕೃತ್ಯವಾಗಿತ್ತು, ಹೀಗೆ ಇವರು ದಿನಬೆಳಗಾದರೆ ಸಮಾಜದಿಂದ ಹಣ ಸುಲಿಗೆ ಮಾಡುವ ಸೂತ್ರದಾದರೊಂದು ಕಾರ್ಯಕ್ರಮಕ್ಕಾಗಿ ಕಾಯುತ್ತಿರುತ್ತಾರೆ.

ಆರ್ ಎಸ್ ಎಸ್ ಯಾವ ರೀತಿ ಸಮಾಜವನ್ನು ವಂಚಿಸುತ್ತಿದೆಯೆನ್ನುವುದನ್ನು ಸಮರ್ಥಿಸಲು ನನ್ನದೇ ಸ್ವಂತ ಅನುಭವವನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಚಿಕ್ಕಮಗಳೂರಿನಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಲೋಕಸಭೆಗೆ ಸ್ಪರ್ಧಿಸಿದ್ದ ಉಪಚುನಾವಣೆಯ ಸಂದರ್ಭ ಅದು. ಈ ಲೋಕಸಭೆಯೊಳಗಿನ 8 ವಿಧಾನಸಭಾ ಕ್ಷೇತ್ರಗಳಲ್ಲಿ ಬೇರೆ ಬೇರೆ ಪ್ರಮುಖರುಗಳಿಗೆ ಪ್ರಚಾರ ಜವಾಬ್ದಾರಿ ವಹಿಸಲಾಗಿತ್ತು, ನಾನು ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಪ್ರಚಾರ ವ್ಯವಸ್ಥೆಯ ಜವಾಬ್ದಾರಿ ವಹಿಸಿಕೊಂಡಿದ್ದೆ, ಹಾಗೆಯೇ ಬೇರೆ ಬೇರೆ ಸಂಸ್ಥೆಗಳ ಪ್ರಮುಖರಿಗೆ ಅವರ ಶಕ್ತಿಯನ್ನು ಕ್ರೋಢೀಕರಿಸಲು ಜವಾಬ್ದಾರಿ ವಹಿಸಲಾಗಿತ್ತು, ಅಂದರೆ ಕಾರ್ಮಿಕ ಕ್ಷೇತ್ರದ ಕಮ್ಯುನಿಸ್ಟ್ ಪಾರ್ಟಿಯವರಿಗೆ, ಅವರ ಶಕ್ತಿಯನ್ನು ಜನತಾ ಪಕ್ಷದ ಅಭ್ಯರ್ಥಿಯ ಪರವಾಗಿ ವಿನಿಯೋಗಿಸುವ ಜವಾಬ್ದಾರಿ- ಹೀಗೆ ವ್ಯವಸ್ಥೆ ಮಾಡಲಾಗಿತ್ತು. ಹಾಗೆ ಆರ್‌ಎಸ್‌ಎಸ್ ಶಕ್ತಿಯನ್ನು ಚುನಾವಣೆಯಲ್ಲಿ ತೊಡಗಿಸಲು ಕೆಲವರಿಗೆ ಜವಾಬ್ದಾರಿ ಕೊಡಲಾಗಿತ್ತು. ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಆರ್ ಎಸ್ ಎಸ್ ವಲಯದ ಜವಾಬ್ದಾರಿಯನ್ನು ಅಲ್ಲಿ ಅಂದು ಪ್ರಚಾರಕರಾಗಿದ್ದ ಶ್ರೀ ರಘುಪತಿ ಶಾಸ್ತ್ರಿ ಎನ್ನುವವರು ವಹಿಸಿಕೊಂಡಿದ್ದರು. ಇವರ ಜೊತೆಗೆ ಶಿವಮೊಗ್ಗ ಜಿಲ್ಲೆಯ ಶ್ರೀ ಡಿ.ಎಚ್. ಶಂಕರಮೂರ್ತಿ (ಇಂದಿನ ಬಿ.ಜೆ.ಪಿ.ಮುಖಂಡ) ಸಹ ಇದ್ದರು. ಇಡೀ ಕ್ಷೇತ್ರದ ಚುನಾವಣಾ ಕಚೇರಿ ಚಿಕ್ಕಮಗಳೂರಿನಲ್ಲೇ ಇತ್ತಲ್ಲದೆ ಅದರ ಜವಾಬ್ದಾರಿ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಹಿಂದಿನ ಮಂತ್ರಿ) ಇವರು ವಹಿಸಿಕೊಂಡಿದ್ದರು. ಚುನಾವಣಾ ವೆಚ್ಚಕ್ಕೆ ಹಣ ಒದಗಿಸುವ ಜವಾಬ್ದಾರಿಯನ್ನು ಶ್ರೀ ಜಾರ್ಜ್ ಫರ್ನಾಂಡಿಸ್ ಮತ್ತು ಶ್ರೀ ರಾಮಕೃಷ್ಣ ಹೆಗಡೆ (ಹಿಂದಿನ ಮುಖ್ಯಮಂತ್ರಿ) ಇವರು ನೆರವೇರಿಸುತ್ತಿದ್ದರು. ಪ್ರಾರಂಭದಲ್ಲಿ ತುಂಬಾ ಹಣದ ಮುಗ್ಗಟ್ಟು ಇದ್ದಂತೆ ಕಂಡುಬಂತು. ವಾಹನಗಳಿಗೆ ಇಂಧನ ಹಾಕಲು ಸಹ ನನ್ನ ಕ್ಷೇತ್ರಕ್ಕೆ ಹಣ ಸಿಗಲಿಲ್ಲ, ಆದರೂ ನಾನು ಕಾರ್ಯಕರ್ತರ ಗುಂಪೊಂದನ್ನು ತಯಾರುಮಾಡಿ, ಅವರನ್ನು ಜೊತೆ ಸೇರಿಸಿಕೊಂಡು ಸಾರ್ವಜನಿಕರಿಂದಲೇ ಹಣ ಸಂಗ್ರಹಿಸುವುದರ ಮೂಲಕ ಚುನಾವಣಾ ಪ್ರಚಾರವನ್ನು ಮುಂದುವರಿಸಬೇಕಾಯಿತು. ಚುನಾವಣೆಗೆ ಇನ್ನು ಕೆಲವೇ ದಿವಸಗಳಿವೆಯೆನ್ನುವಾಗ ಶ್ರೀ ರಾಮಕೃಷ್ಣ ಹೆಗಡೆಯವರು ಬಂದು ಎಲ್ಲಾ ವಿಧಾನಸಭಾ ಕ್ಷೇತ್ರಗಳ ಹಣದ ಅವಶ್ಯಕತೆಯನ್ನು ಪೂರೈಸಿದರು. ಮತದಾನಕ್ಕೆ ಇನ್ನು ನಾಲ್ಕೇ ದಿವಸವಿದೆಯೆನ್ನುವಾಗ ಆರ್‌ಎಸ್‌ಎಸ್ ವಲಯದ ಜವಾಬ್ದಾರಿ ವಹಿಸಿದ್ದ ಪ್ರಚಾರಕ ಶ್ರೀ ರಘುಪತಿ ಶಾಸ್ತ್ರಿ ಹಾಗೂ ಶ್ರೀ ಶಂಕರಮೂರ್ತಿಯವರು ನನ್ನಲ್ಲಿಗೆ ಬಂದು ಕೋಪದಿಂದ ಚುನಾವಣಾ ಪ್ರಚಾರ ಕಾರ್ಯಾಲಯದ ಜವಾಬ್ದಾರಿ ವಹಿಸಿದ್ದ ಶ್ರೀ ಸಿಂಧ್ಯಾರವರ ಬಗ್ಗೆ ಬಾಯಿಗೆಬಂದಂತೆ ನಿಂದಿಸಿ ಮಾತನಾಡ ತೊಡಗಿದರು. ಕಚೇರಿಗೆ ಹೋದರೆ ಆರ್‌ಎಸ್‌ಎಸ್‌ನವರನ್ನು ನಾಯಿಗಳಂತೆ ಕಾಣಲಾಗುತ್ತಿದೆಯೆಂದೂ ಯಾವುದೇ ಹಣವನ್ನಾಗಲೀ ಪ್ರಚಾರ ಸಾಧನಗಳನ್ನಾಗಲೀ ಒದಗಿಸುತ್ತಿಲ್ಲವೆಂದೂ ಈ ಸ್ಥಿತಿಯಿಂದಾಗಿ ಆರ್‌ಎಸ್‌ಎಸ್‌ನವರು ನಿಷ್ಕ್ರಿಯರಾಗಬೇಕಾಗಿದೆಯೆಂದೆಲ್ಲಾ ಹಲುಬತೊಡಗಿದರು. ಇನ್ನು ಮತದಾನಕ್ಕೆ ಕೇವಲ ಮೂರು ದಿವಸಗಳು ಮಾತ್ರ ಉಳಿದಿದ್ದವು. ಇವರು ಚುನಾವಣೆಯಲ್ಲಿ ಕೆಲಸ ಮಾಡದೆ, ಕೆಡಿಸಬಹುದೆಂಬ ಭಯ ನನಗುಂಟಾಯಿತು. ಆದ್ದರಿಂದ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಮಟ್ಟಿಗೆ ಆರ್‌ಎಸ್‌ಎಸ್‌ಗೆ ಎಷ್ಟು ಹಣ ಬೇಕೆಂದು ಕೇಳಿದೆ. ಅದಕ್ಕವರು 15 ಸಾವಿರವೆಂದು ತಿಳಿಸಿದರು. ನೀವು ಯಾವುದೇ ಕಾರಣಕ್ಕೆ ಚುನಾವಣಾ ಕಚೇರಿಗೆ ಹೋಗಿ ಶ್ರೀ ಸಿಂಧ್ಯಾರವರಿಂದಾಗಲೀ, ಶ್ರೀ ರಾಮಕೃಷ್ಣ ಹೆಗಡೆಯವರಿಂದಾಗಲೀ ಅವಮಾನಿತರಾಗುವ ಅವಶ್ಯಕತೆಯಿಲ್ಲವೆಂದೂ, ನಿಮ್ಮ ಪಾಡಿಗೆ ನೀವು ಕೆಲಸ ಮಾಡಿ ನಿಮ್ಮ ಸಂಪೂರ್ಣ ಶಕ್ತಿಯನ್ನು ಚುನಾವಣೆಯಲ್ಲಿ ತೊಡಗಿಸುವಲ್ಲಿ ತಲ್ಲೀನರಾಗಿ, ನಾನು 15 ಸಾವಿರ ರೂಪಾಯಿಯನ್ನು ಹೇಗಾದರೂ ಒದಗಿಸುತ್ತೇನೆಂದು ಭರವಸೆ ಕೊಟ್ಟೆ ಮತ್ತು ನನ್ನಲ್ಲಿ ಕೆಲವರು ಕೊಟ್ಟಿದ್ದಂತಹ ಚೆಕ್ಕುಗಳನ್ನೆಲ್ಲಾ ಜೋಡಿಸಿ 10 ಸಾವಿರ ರೂಪಾಯಿ ಆಗಲೇ ಕೊಟ್ಟು, ಉಳಿದ 5 ಸಾವಿರ ರೂಪಾಯಿಯನ್ನು ಮಾರನೇ ದಿವಸ ಸಂಜೆ ಒದಗಿಸುತ್ತೇನೆಂದು ಅವರಿಗೆ ಹೇಳಿ, ಸಿಂಧ್ಯಾರವರ ಹತ್ತಿರವಾಗಲೀ, ಹೆಗಡೆಯವರ ಹತ್ತಿರವಾಗಲೀ ಹಣಕ್ಕೆ ಹೋಗುವ ಅವಶ್ಯಕತೆಯಿಲ್ಲವೆಂದು ತಿಳಿಸಿದೆ. ಹಾಗೆಯೇ ಆಗಲೆಂದು ಹೇಳಿ ನಾನು ಕೊಟ್ಟ 10 ಸಾವಿರ ರೂಪಾಯಿ ಪಡೆದು ಶ್ರೀ ರಘುಪತಿ ಶಾಸ್ತ್ರಿ ಮತ್ತು ಶಂಕರಮೂರ್ತಿಯವರು ಮುಂದೆ ತೆರಳಿದರು. ಮಾರನೇ ದಿವಸ ನಾನು ಶ್ರೀ ರಾಮಕೃಷ್ಣ ಹೆಗಡೆಯವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಆರ್‌ಎಸ್‌ಎಸ್‌ನವರ ದೂರನ್ನು ತಿಳಿಸಿ, ನಾನವರಿಗೆ 10 ಸಾವಿರ ರೂಪಾಯಿ ಕೊಟ್ಟ ಬಗ್ಗೆ ಹಾಗೂ ಇನ್ನು 5 ಸಾವಿರ ರೂಪಾಯಿ ಕೊಡಬೇಕಾಗಿರುವ ಬಗ್ಗೆ ವರದಿ ಮಾಡಿದೆ. ಹೆಗಡೆಯವರು ಆಶ್ಚರ್ಯದಿಂದ ಅವರಿಗೆ ಅದುವರೆಗೆ ಒದಗಿಸಲಾದ ಹಣ ಮತ್ತು ಸಾಧನಗಳ ವಿವರ ನೀಡಿದರು. ಅಲ್ಲದೇ ಅದೇ ದಿವಸ ಬೆಳಿಗ್ಗೆ ಅಂದರೆ ನನ್ನಿಂದ 10 ಸಾವಿರ ರೂಪಾಯಿ ಪಡೆದ ಮೇಲೆ ಶ್ರೀ ಹೆಗಡೆಯವರಿಂದ 15 ಸಾವಿರ ರೂಪಾಯಿ ಹಾಗೂ ಸಿಂಧ್ಯಾರವರಿಂದ 10 ಸಾವಿರ ರೂಪಾಯಿ ಪಡೆದ ವಿವರ ನೀಡಿದರು. ನನಗೆ ತುಂಬಾ ನಾಚಿಕೆಯಾಗಿ ಹೋಯಿತು. ಶ್ರೀ ಸಿಂಧ್ಯಾರವರನ್ನು ಸಂಪರ್ಕಿಸಿ, ಅದುವರೆಗೆ ಆರ್‌ಎಸ್‌ಎಸ್‌ನವರಿಗೆ ಒದಗಿಸಿದ ಹಣ ಮತ್ತು ವಾಹನಗಳ ವಿವರ ಕೇಳಿದಾಗ ಒಂದು ಕಾರು ಮತ್ತು ಒಟ್ಟು 80 ಸಾವಿರ ರೂಪಾಯಿ ಕೊಡಲಾಗಿದೆಯೆಂದು ತಿಳಿಸಿದರು. ಇದು ಕೇವಲ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಾತ್ರ. ಉಳಿದ ಕ್ಷೇತ್ರಗಳಿಗೆ ಬೇರೆ, ಅಂದರೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ಒಂದಕ್ಕೆ ಒಟ್ಟು 90 ಸಾವಿರ ರೂಪಾಯಿ ಮತ್ತು ಒಂದು ಕಾರನ್ನು ಆರ್‌ಎಸ್‌ಎಸ್‌ನವರು ಪಡೆದಂತಾಯಿ[ತು]. ನಾನು ದಿಗ್ಭ್ರಾಂತನಾಗಿ ಆರ್‌ಎಸ್‌ಎಸ್‌ನ[ವ]... ಪರಮನೀಚರೆಂದು ಶಪಿಸುತ್ತಾ ಮುಂದಿನ ಕೆ... ಪ್ರಾರಂಭಿಸಿದೆ. ಅದೇ ದಿವಸ ರಾತ್ರಿ ನನಗೆ ಶ್ರೀ ರಘು[ಪತಿ] ಶಾಸ್ತ್ರಿಯವರಿಂದ ಫೋನು ಕರೆ ಬಂತು. ನಾನು ವಿಷ[ಯ] ವಿಚಾರಿಸಿದಾಗ ಆರ್‌ಎಸ್‌ಎಸ್‌ನವರು ನನ್ನ ಭರವಸೆ ಮೇ[ಲೆ] ಕೆಲಸ ಪ್ರಾರಂಭಿಸಿರುವುದಾಗಿಯೂ ಆಗಲೇ 5 ಕಾರುಗಳ... ತಂದಿರುವುದಾಗಿಯೂ ತಿಳಿಸಿ ನಾನು ಕೊಡುತ್ತೇನೆಂ[ದು] ಹೇಳಿದ್ದ 5 ಸಾವಿರ ರೂಪಾಯಿ ಒಡನೇ ಕೊಡಬೇಕೆಂ[ದು] ಹೇಳಿದರು. ನನಗೆ ಪಿತ್ತ ನೆತ್ತಿಗೇರಿತ್ತು ಆತನನ್ನು ತರಾ[ಟೆಗೆ] ತೆಗೆದುಕೊಂಡೆ. ಶ್ರೀ ರಾಮಕೃಷ್ಣ ಹೆಗಡೆ ಹಾಗೂ ಸಿಂಧ್ಯಾರವರು ನನಗೆ ಕೊಟ್ಟ ವಿವರದ ... ತಿಳಿಸುತ್ತಿದ್ದಂತೆಯೇ ಈ ಆರ್‌ಎಸ್‌ಎಸ್ ಪ್ರಚಾರಕ ಫೋ[ನು] ಕೆಳಗಿಟ್ಟು ಪರಾರಿಯಾದ. ಆರ್‌ಎಸ್‌ಎಸ್‌ನವರು ಹೀ[ಗೆ] ಒಂದು ಕ್ಷೇತ್ರದಲ್ಲಿ ಪಡೆದಿದ್ದ ಒಟ್ಟು 90 ಸಾ[ವಿರ] ರೂಪಾಯಿಯಲ್ಲಿ ಒಂಭತ್ತು ನೂರು ರೂಪಾಯಿ ಕೂ[ಡ] ಆ ಚುನಾವಣೆಯಲ್ಲಿ ಖರ್ಚು ಮಾಡಿಲ್ಲವೆಂದು ... ದೃಢವಾಗಿ ಹೇಳಬಲ್ಲೆ. ಆ ಸಂದರ್ಭದಲ್ಲಿ ಪ್ರತಿಯೊಂ[ದು] ವಿಧಾನಸಭಾ ಕ್ಷೇತ್ರದಲ್ಲೂ ಆರ್‌ಎಸ್‌ಎಸ್ ನವರು ಇ[ದೇ] ರೀತಿ ವರ್ತಿಸಿದ್ದಾರೆಂದು ನನಗೆ ಆಮೇಲೆ ವಿಶ್ವಾಸಾ[ರ್ಹ] ಮೂಲಗಳಿಂದ ತಿಳಿಯಿತು. ಆಶ್ಚರ್ಯದ ಸಂಗತಿಯೆಂ[ದರೆ] ಈ ಎಲ್ಲಾ ವಿಷಯಗಳನ್ನು ಬೆಂಗಳೂರಿನ ಆರ್‌ಎಸ್‌ಎ[ಸ್] ಕೇಂದ್ರದ ಪ್ರಮುಖರಿಗೆ ತಿಳಿಸಿದರೂ ಅವರು ಯಾವು[ದೇ] ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ, ಅಲ್ಲದೆ ಅನಂತ[ರ] ಚಿಕ್ಕಮಗಳೂರಿನ ಆರ್‌ಎಸ್‌ಎಸ್ ಪ್ರಚಾರಕನಿಗೆ ಸಂಸ್ಥೆಯ... ಇನ್ನೂ ಹೆಚ್ಚಿನ ಜವಾಬ್ದಾರಿ ವಹಿಸಿಕೊಡಲಾಯಿತು. ಇನ್[ನೂ] ಒಂದು ಮಾತು ಹೇಳಬೇಕೆಂದರೆ ಚಿಕ್ಕಮಗಳೂ[ರು] ಲೋಕಸಭಾ ಉಪಚುನಾವಣೆಯ ಸಂದರ್ಭದಲ್ಲಿ ಕ... ಘಳಿಗೆಯಲ್ಲಿ ಅವಶ್ಯವಿದ್ದಷ್ಟು ಹಣ ಒದಗಿಸಲಾಯಿ[ತು]. ಕಡೇ ಘಳಿಗೆಯ ವೆಚ್ಚಕ್ಕೋಸ್ಕರ ನಾನು ಜವಾಬ್ದಾರಿ ವಹಿಸಿಕೊಂಡಿದ್ದ ಕ್ಷೇತ್ರಕ್ಕೆ ಅಗತ್ಯವಿದ್ದಷ್ಟು ಹಣವನ್ನು ನಾ[ನು] ಮತ್ತು ನಂತರ ಶಾಸಕರಾದ ಶ್ರೀ ನಾರಾಯಣಗೌಡ ... ಜೊತೆಯಾಗಿ ಪಡೆದೆವು. ಚುನಾವಣೆ ಮುಗಿದಮೇಲೆ ನ... ಸುಮಾರು 21 ಸಾವಿರ ರೂಪಾಯಿ ಉಳಿದಿತ್ತು, ಅದ[ನ್ನು] ಲೆಕ್ಕಪತ್ರ ಸಮೇತ ಬೆಂಗಳೂರು ಜನತಾ ಪಾರ್ಟಿ[ಯ] ಕಚೇರಿಗೆ ಕೊಟ್ಟ ಮುತ್ಸದ್ಧಿ ನಾನೊಬ್ಬನೇ ಎಂ[ದು] ತೋರುತ್ತದೆ. ಇನ್ನು ಕೆಲವರು ಇದ್ದರೂ ಇರಬಹುದು. ಆದರೆ ಮೂಡಿಗೆರೆ ಕ್ಷೇತ್ರದ ಜವಾಬ್ದಾರಿ ವಹಿಸಿಕೊಂಡಿ[ದ್ದ] ಆರ್‌ಎಸ್‌ಎಸ್ ಪ್ರಮುಖ ದಿವಂಗತ ಬಾವೂರಾ[ವ್] ದೇಶಪಾಂಡೆಯವರು ಮಾತ್ರ ಕಡೇಘಳಿಗೆಯ ವೆಚ್ಚಕ್ಕೆಂ[ದು] ಕಬ್ಜಾಡಿ ಪಡೆದ ಹಣವನ್ನೆಲ್ಲಾ ಗಂಟು ಕಟ್ಟಿ ಹುಬ್ಬಳ್ಳಿ[ಗೆ] ಸಾಗಿಸಿ ನಂತರ ಒಂದು ಮುದ್ರಣಾಲಯ ಸ್ಥಾಪಿಸಿದ ಸಂಗ[ತಿ] ಕೆಲವರಿಗೆ ಮಾತ್ರ ತಿಳಿದಿರುವಂತಹದ್ದಾಗಿದೆ.

ಇನ್ನೊಂದು ಘಟನೆಯನ್ನು ಸಹ ಇಲ್ಲಿ ಉಲ್ಲೇಖಿಸುತ್ತೇ[ನೆ]. ತುರ್ತು ಪರಿಸ್ಥಿತಿಯಲ್ಲಿ ಬೆಂಗಳೂರಿನಲ್ಲಿ ವ್ಯಾಪಾರಿಯೊಬ್ಬ[ನ] ಅಂಗಡಿಗೆ ಕೇಂದ್ರೀಯ ತೆರಿಗೆ ಇಲಾಖೆಯವರು ದಾ[ಳಿ] ಮಾಡಿ ಅಲ್ಲಿದ್ದ ಅಕ್ರಮ ಚಿನ್ನವನ್ನು ವಶಪಡಿಸಿಕೊಂಡರು. ಆಮೇಲೆ ಇಲಾಖೆಯವರು ವಶಪಡಿಸಿಕೊಂಡಿದ್ದ ಚಿನ್ನವ[ನ್ನು] ಮುಟ್ಟುಗೋಲು ಹಾಕಿ ಜೊತೆಗೆ ಒಂದು ಲಕ್ಷ ರೂಪಾಯಿ ದಂಡ ವಿಧಿಸಲಾಯಿತು. ಈ ಆಜ್ಞೆಯ ವಿರುದ್ಧ ಆಪಾದಿತ[ನು] ಮೇಲ್ಮನವಿ ಸಲ್ಲಿಸಿದರು. ಆಗ ಕೇಂದ್ರದಲ್ಲಿ ಜನತಾ ಪಾರ್ಟಿ ಆಡಳಿತದಲ್ಲಿತ್ತು. ಆರ್‌ಎಸ್‌ಎಸ್ ಸಂಬಂಧಿ ಶ್ರೀ ಸತೀಶ್‌ಚಂದ್ರ ಅಗರ್‌ವಾಲಾರವರು ಕೇಂದ್ರದಲ್ಲಿ ರಾ[ಜ್ಯ] ಆರ್ಥಿಕಮಂತ್ರಿಗಳಾಗಿದ್ದರು. ಇವರು ಸಹಾಯ ಪಡೆ[ದು] ಮೇಲ್ಮನವಿಯಲ್ಲಿ ಜಯಿಸಲು ಆಪಾದಿತ ತಮ್ಮ ಒ... ಏಜೆಂಟರ ಮೂಲಕ ತುಮಕೂರಿನ ಇಬ್ಬರು ಆರ್‌ಎಸ್‌ಎ[ಸ್] ಸಂಬಂಧಿ ಶ್ರೀ ಮಲ್ಲಿಕಾರ್ಜುನಯ್ಯ, ಶ್ರೀ ಶಿವನಂಜ... ಮತ್ತು ಆರ್‌ಎಸ್‌ಎಸ್ ಪ್ರಮುಖ ರಾಜಾಚಾರ್ (ಇವ[ರು] ಈಗ ಬಿ.ಜೆ.ಪಿ. ರಾಜ್ಯ ಕಚೇರಿಯ ವ್ಯವಸ್ಥಾಪಕರಾಗಿದ್ದಾ[ರೆ]) ಈ ಮೂವರ ಮೊರೆಹೊಕ್ಕರು. ಈ ಮೂವರು ಒಟ್ಟಾ[ಗಿ] ಶ್ರೀ ಸತೀಶ್ ಚಂದ್ರ ಅಗರ್‌ವಾಲಾರವರಿಗೆ ದಿವಂಗ[ತ] ಬಾವೂರಾವ್ ದೇಶಪಾಂಡೆ (ಮಾಜಿ ಶಾಸಕರು ಮ[ತ್ತು] ಆರ್‌ಎಸ್‌ಎಸ್‌ನ ಪ್ರಮುಖರು) ಯವರಿಂದ ಪ[ತ್ರ] ತೆಗೆದುಕೊಂಡು ದಿಲ್ಲಿಗೆ ಮೂರು ಬಾರಿ ವಿಮಾನದ[ಲ್ಲಿ] ಹೋಗಿ ಸತೀಶ್‌ಚಂದ್ರ ಅಗರ್‌ವಾಲಾರನ್ನು ಸಂಪರ್ಕಿಸಿರುವುದಾಗಿಯೂ ಅವರಿಂದ ಭರವ[ಸೆ] ದೊರೆತಿರುವುದಾಗಿಯೂ ಚಿನ್ನದ ವ್ಯಾಪಾರಿಗೆ ಭರವ[ಸೆ] ಕೊಟ್ಟು ಅವರಿಂದ 30 ಸಾವಿರ ರೂಪಾಯಿ ಪಡೆ[ದು] ಮೂವರು ಹಂಚಿಕೊಂಡರು. ಆದರೆ ಮೇಲ್ಮನವಿಯ ತೀರ್ಪು ಮಾತ್ರ ಹೊರಬೀಳಲಿಲ್ಲ. ತಿಂಗಳುಗಟ್ಟಲೆ ತೀರ್ಪು ಹೊರಬೀಳದಿದ್ದಾಗ ವ್ಯಾಪಾರಿ ಹಣ ಪಡೆದ ಮೇಲ್ಕಾಣಿಸಿ[ದ] ಆರ್ ಎಸ್ ಎಸ್ ಮಂದಿಯನ್ನು ವಿಚಾರಿಸತೊಡಗಿದರು. ಅದಕ್ಕವರು ಭರವಸೆ ಕೊಡುತ್ತಲೇ ಬಂದರು, ಆದ[ರೆ] ಕಡೆಗೆ ಮೇಲ್ಮನವಿಯ ತೀರ್ಪು ಹೊರಬಿದ್ದಾಗ ಅದು ವ್ಯಾಪಾರಿಗೆ ವಿರೋಧವಾಗಿತ್ತು, ತಬ್ಬಿಬ್ಬಾದ ಆಪಾದಿತರು ದಿಲ್ಲಿಗೆ ಮೂರು ಬಾರಿ ಮೂವರು ವಿಮಾನದಲ್ಲಿ ಹೋ[ಗಿ] ಪಂಚತಾರಾ ಹೋಟೆಲಿನಲ್ಲಿ ದೌಲತ್ತು ಮಾಡಿ ಬಂ...




...ಹೋಗಲಿ. ಬಡವ ನಗದು ಹಣ 30 ಸಾವಿರ ...ಯಿಗಳನ್ನಾದರೂ ಹಿಂತಿರುಗಿಸಿ ಎಂದು ...ಡಗಿದರು. ಹೀಗೆ ಕಾಡಿಸಿದಾಗ, ಒಬ್ಬ ಶಾಸಕರಾದ ...ನಸುಂಡಪ್ಪನವರು (ಇವರು ನಂತರ ಆರ್ ಎಸ್ ...ತರ್ಕ ಕಡಿದುಕೊಂಡು ಜನತಾ ಬಿಟ್ಟು ಕಾಂಗ್ರೆ...ಂದರು) ತಮಗೆ ದಕ್ಕಿದ್ದ 10 ಸಾವಿರ ...ಯಿಗಳನ್ನು ತಿಂಗಳಿಗೆ 2 ಸಾವಿರದಂತೆ ಚೆಕ್ಕು ಮೂಲಕ ...ಗಿಸಿ ತಮ್ಮ ಯೋಗ್ಯತೆಯನ್ನು ಕಾಪಾಡಿಕೊಂಡರು. ...ಬ್ಬರು ಹಿಂತಿರುಗಿಸದೆ ಸತಾಯಿಸುತ್ತಲೇ ಬಂದಾಗ ... ದೂರು ಬಂತು. ನಾನು ಆಗ ಬಿ.ಜೆ.ಪಿ. ...ಾಗಿದ್ದೆ. ದೂರು ತಂದವರಿಗೆ ನಾನು ನನ್ನ ...ರುಕತೆಯನ್ನು ವಿವರಿಸಿದಾಗ ಆತ ಇದನ್ನು ...ಗಪಡಿಸಿ ಬಿ.ಜೆ.ಪಿ.ಗೆ ಕಳಂಕ ಹಚ್ಚುತ್ತೇನೆಂದು ...ನ. ನೀವದನ್ನು ಬಹಿರಂಗಪಡಿಸಿದರೆ ನಾನು ಆ ...ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಹಣ ವಸೂಲಿ ...ಾಡಲು ಈಗ ನನ್ನಿಂದ ಸಾಧ್ಯವಿಲ್ಲ ಎಂದು ಹೇಳಿದೆ. ...ನಾಯಿತೋ ತಿಳಿಯದು. ಆತ ಅದನ್ನಂತೂ ...ಗಪಡಿಸಲಿಲ್ಲ. ಆದರೆ ಒಂದು ದಿವಸ ನಾನು ಮತ್ತು ...ಮಲ್ಲಿಕಾರ್ಜುನಯ್ಯನವರು ಒಟ್ಟಿಗೆ ಕಾರಿನಲ್ಲಿ ...ತ್ತಿದ್ದಾಗ ಈ ಬಗ್ಗೆ ಪ್ರಸ್ತಾಪಿಸಿದೆ. ಆಗ ಅವರು ...ನ್ನು ಅಲ್ಲಗಳೆಯಲಿಲ್ಲ. ಬದಲಾಗಿ "ನಾನು ರೈಲಿನಲ್ಲಿ ...ೆಂದರೂ ವಿಮಾನದಲ್ಲಿ ಕರೆದುಕೊಂಡು ಹೋಗಿ, ...ಖರ್ಚು, ಇಷ್ಟು ಖರ್ಚು ಎಂದು ಹೇಳಿದರೆ, ...ೀಗೆ ವಾಪಾಸು ಕೊಡಲಿ!" ಎಂದು ಉದ್ಗರಿಸಿದರು. ...ಮುಂದೇನೂ ಮಾತನಾಡಲಿಲ್ಲ.

...ಜಿ ಶಾಸಕ ಶ್ರೀ ಮಳ್ಳೂರು ಆನಂದರಾಯರು ...ಟ್ಟಾ ಆರ್ ಎಸ್ ಎಸ್ ಮನುಷ್ಯ. ಆರ್‌ಎಸ್‌ಎಸ್‌ನ ... ಸಮಯದ ಪ್ರಚಾರಕರಾಗಿಯೂ ಇವರು ಕೆಲಸ ...ಾವುದಲ್ಲದೆ ಇನ್ನೂ ಹಲವಾರು ರೀತಿಯಲ್ಲಿ ...ಎಸ್‌ಗಾಗಿ ದುಡಿದವರು. ಇವರು ಹಿಂದೆ ...ಭೆಯ ಸದಸ್ಯರಾಗಿದ್ದಾಗ ನಿಸ್ಸಹಾಯಕ ವೃದ್ಧ...ೊಬ್ಬಳು, ತಾನು ಬೆಂಗಳೂರು ಅಭಿವೃದ್ಧಿ ...ದಿಂದ ಮಂಜೂರಾಗಿದ್ದ ನಿವೇಶನಕ್ಕೆ ಸಂಬಂಧಿಸಿದ ...ಿ ಪರಿಹಾರಕ್ಕೋಸ್ಕರ ಹೋದಳು. ನಿಸ್ಸಹಾಯಕ, ...ತೆಯಿಲ್ಲದ ಆ ಮಹಿಳೆಯ ಸಮಸ್ಯೆಯನ್ನು ...ಡಿಕೊಂಡು ಆಕೆಗೆ ನೆರವು ನೀಡುವುದು ಜನತಾ ...ಸೂದ ಈ ಶಾಸಕರ ಕರ್ತವ್ಯವಾಗಿತ್ತು. ಆದರೆ ...ೀ ಪ್ರಾಮಾಣಿಕತನದ ಬಗ್ಗೆ ಪ್ರತಿಪಾದನೆ ಮಾಡುವ ...ಎಸ್‌ನ ಅಧ್ವರ್ಯರಾದ ಶ್ರೀ ಮಳ್ಳೂರು ...ಾಯರು, ಆ ಮುದುಕಿಗೆ ಸಹಾಯ ಮಾಡುವ ... ಆಕೆಯನ್ನು ವಂಚಿಸಿದರು. ಆಕೆಗೆ ಸಹಾಯ ...ವುದಾಗಿ ನಂಬಿಸಿ ಆಕೆಯ ಅಜ್ಞಾನದ ದುರ್ಲಾಭ ... ಆಕೆಗೆ ಮಂಜೂರಾಗಿದ್ದ ನಿವೇಶನವನ್ನೇ ...ಸಿಬಿಟ್ಟರು. ತುಂಬಾ ಹೇಯವಾದ ವಂಚನೆಯ ...ಕ್ಕೆ ಅಗತ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು ...ಗಳಲ್ಲಿ ದೊರೆಯುತ್ತವೆ. ಹೀಗೆ ಆರ್‌ಎಸ್‌ಎಸ್ ... ಪಡೆದವರ ಅಪ್ರಾಮಾಣಿಕ ಭಂಡ ನಡವಳಿಕೆಗೆ ...ರಣೆಗಳು ಎಷ್ಟು ಬೇಕಾದರೂ ದೊರೆಯುತ್ತವೆ. ... ಆರ್‌ಎಸ್‌ಎಸ್ ನವರ ಮಾತಿಗೂ ಕೃತಿಗೂ ...ಾಳಮೇಳವು ಇಲ್ಲವೆನ್ನುವುದು ಸ್ಪಷ್ಟ.


...ಷ್ಯ ನಡವಳಿಕೆಯನ್ನು ಪ್ರತ್ಯಕ್ಷದಲ್ಲಿ ...ವ ಈ ಜನ ತಮ್ಮ ನಿಜರೂಪ ...ತಗಿಸಿಟ್ಟುಕೊಳ್ಳುವುದಕ್ಕೆ ಅನೇಕ ...ಗಳನ್ನು ಸೃಷ್ಟಿಸಿಕೊಂಡಿದ್ದಾರೆ. ...ಬ್ಯಾಂಕಿನಲ್ಲಿ ಅಧಿಕಾರಿಯೊಬ್ಬರಿ...ವರ ಹೆಸರು ರಾಘವೇಂದ್ರ ...ಂದು. ಇವರು ಆರ್‌ಎಸ್‌ಎಸ್ ... ಪ್ರಮುಖರು. ಈ ವ್ಯಕ್ತಿ ಕೆನರಾ ...ಲ್ಲಿ ಸುಮಾರು 16 ಲಕ್ಷ ರೂಪಾಯಿ ವಂಚನೆಯ ಘಟನೆಯೊಂದರಲ್ಲಿ ಆಪಾದಿತರಾದರು. ಇದಾದನಂತರ ಇವರು ಆರ್‌ಎಸ್‌ಎಸ್‌ನಲ್ಲಿ ಇನ್ನಷ್ಟು ಪ್ರಭಾವವುಳ್ಳವರಾದರು. ಹೀಗೆ ಬ್ಯಾಂಕಿಗೆ ಕನ್ನ ಹಾಕಿ ಪಡೆದ ಹಣದಿಂದ ಬೆಂಗಳೂರು-ಮೈಸೂರು ರಸ್ತೆಯಲ್ಲಿದ್ದ ಮೆಟ್ರೋ ಮೋಲಿಯಬಲ್ ಎಂಬ ಕಾರ್ಖಾನೆಯನ್ನು ಕೆಲವು ಜನ ಆರ್‌ಎಸ್‌ಎಸ್ ಪ್ರಮುಖರು (ಉನ್ನತ ಮಟ್ಟದ ಪ್ರಚಾರಕರು ಸೇರಿ) ಸುಮಾರು 8 ಲಕ್ಷ ರೂಪಾಯಿ ಬೆಲೆಗೆ ಖರೀದಿಸಿದರು. ಆ ನಂತರ ಕಾರ್ಖಾನೆಯನ್ನು ಮುಚ್ಚಿ ಅಲ್ಲಿದ್ದ ಕಾರ್ಮಿಕರನ್ನು ವಂಚಿಸಿ, ಅಲ್ಲಿದ್ದ ಆಸ್ತಿಪಾಸ್ತಿಯನ್ನೆಲ್ಲಾ ಮಾರಾಟ ಮಾಡಲಾಯಿತು. ಹಾಗೆಯೇ ಬೆಂಗಳೂರಿನ ಮಿಥಿಕ್ ಸೊಸೈಟಿಯೆನ್ನುವ ಅಮೂಲ್ಯವಾದ ಸಂಸ್ಥೆಯೊಂದನ್ನು ಕುತಂತ್ರದಿಂದ ಆರ್‌ಎಸ್‌ಎಸ್‌ನವರು ವಶಪಡಿಸಿಕೊಂಡು ಅದರ ಆಸ್ತಿಪಾಸ್ತಿಗಳನ್ನು ಕಬಳಿಸಿ, ಸಾರ್ವಜನಿಕರಿಗೆ ಹಾಗೂ ಸರಕಾರಕ್ಕೆ ಮಾಡಿರುವ ವಂಚನೆಯ ಬಗ್ಗೆ ಆಮೂಲಾಗ್ರ ತನಿಖೆ ನಡೆಸಿದರೆ ಅನೇಕ ಆರ್ ಎಸ್ ಎಸ್ ಪ್ರಮುಖರು ಜೈಲಿಗೆ ಹೋಗಬೇಕಾದೀತು.

ಗುರುದಕ್ಷಿಣೆಯೆನ್ನುವ ಹಬ್ಬವೊಂದನ್ನು ಆರ್‌ಎಸ್‌ಎಸ್ ಪ್ರತಿ ವರ್ಷ ಆಚರಿಸಿ ಅಭಿಮಾನಿಗಳಿಂದ ಧನಸಂಗ್ರಹ ಮಾಡುವುದು ಇವರ ಕಾರ್ಯತಂತ್ರದಲ್ಲಿ ಒಂದು. ಈ ಮುಖಾಂತರ ಇವರು ದೇಶದಾದ್ಯಂತ ಕೋಟ್ಯಾಂತರ ರೂಪಾಯಿ ಸಂಗ್ರಹಿಸುತ್ತಾರೆ. ಕಾನೂನುರೀತಿ ಈ ಹಣಕ್ಕೆ ಆರ್‌ಎಸ್‌ಎಸ್‌ನವರು ಆದಾಯ ತೆರಿಗೆ ಕೊಡಬೇಕಾಗಿದ್ದರೂ ನಾನಾರೀತಿಯ ವಂಚನೆಯ ಜಾಲವನ್ನು ಒಡ್ಡಿ ತೆರಿಗೆ ಮೋಸ ಮಾಡಿ ಕಳ್ಳತನ ವ್ಯಾಪಾರಗಳನ್ನು ಅನುಸರಿಸುತ್ತಿರುವುದು ಗೊತ್ತಾದಾಗ ತುಂಬಾ ಸೋಜಿಗವೆನಿಸಿತು. ಆರ್‌ಎಸ್‌ಎಸ್‌ನ ಸರ್ವೋಚ್ಚ ಮುಖಂಡ ಶ್ರೀ ಬಾಳಾಸಾಬ್ ದೇವರಸ್‌ರವರೇ ನ್ಯಾಯಾಲಯದ ಮುಂದೆ ತೆರಿಗೆ ತಪ್ಪಿಸಲು ಆರ್‌ಎಸ್‌ಎಸ್‌ನ್ನು ರಾಜಕೀಯ ಸಂಸ್ಥೆಯೆಂದೂ ಹಾಗೂ ಇದೊಂದು ವಿದ್ಯಾಸಂಸ್ಥೆಯೆಂದೂ ಸಹ ಪರಸ್ಪರ ತದ್ವಿರುದ್ಧವಾದ ರೀತಿಯಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿರುವುದು ದಾಖಲೆಯಲ್ಲಿದೆ. ಸುಮಾರು ನಾಲ್ಕು ಕೋಟಿ ರೂಪಾಯಿ ಆದಾಯ ತೆರಿಗೆ ಆರ್‌ಎಸ್‌ಎಸ್‌ನಿಂದ ಸರಕಾರಕ್ಕೆ ಸಲ್ಲಬೇಕಿತ್ತು. ತುರ್ತು ಪರಿಸ್ಥಿತಿಯ ನಂತರ ಜನತಾ ಸರಕಾರ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಪ್ರಧಾನಮಂತ್ರಿಯಾದ ಶ್ರೀ ಮುರಾರ್ಜಿ ದೇಸಾಯಿಯವರ ಮೇಲೆ ಒತ್ತಡ ಹೇರಿ ಈ ಆದಾಯ ತೆರಿಗೆಯನ್ನು ವಜಾ ಮಾಡಿಸಿಕೊಳ್ಳಲಾಯಿತೆಂದು ನಾನು ತಿಳಿದಿದ್ದೇನೆ. ಇಷ್ಟೇ ಅಲ್ಲ, ಗುರುದಕ್ಷಿಣೆ ಹಬ್ಬಕ್ಕೆ ಹಾಜರಾಗುವ ಎಲ್ಲರಿಗೂ ಒಂದೊಂದು ಖಾಲಿ ಲಕೋಟೆ ಕೊಟ್ಟು, ಲಕೋಟೆಯೊಳಗೆ ಸಾಧ್ಯವಿದ್ದಷ್ಟು ಹಣ ಹಾಕಿ ಅರ್ಪಿಸಬಹುದೆಂದು, ಲಕೋಟೆಯಲ್ಲಿ ವಿಳಾಸವಿಲ್ಲದ ಕಾರಣ ಯಾರ್‍ಯಾರು ಎಷ್ಟೆಷ್ಟು ಹಣ ಅರ್ಪಿಸಿದರೆಂದು ತಿಳಿಯಲು ಸಾಧ್ಯವಿಲ್ಲವೆಂದು ಹೇಳಲಾಗುವುದು. ಆದರೆ ಎಲ್ಲಾ ಲಕೋಟೆಗೆ ಸೂಕ್ಷ್ಮವಾಗಿ ಅಂಕೆಗಳನ್ನು ಹಾಕಿ, ಪ್ರತಿಯೊಂದು ಲಕೋಟೆ ಪಡೆದವರ ವಿಳಾಸವನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲಾಗುವುದು. ಹಣ ಅರ್ಪಿಸಿಯಾದ ನಂತರ ಲಕೋಟೆಗೆ ಹಾಕಿಟ್ಟಿದ್ದ ಅಂಕೆಗಳ ಗುರುತಿನ ಆಧಾರದ ಮೇಲೆ ಯಾರ್‍ಯಾರು ಎಷ್ಟೆಷ್ಟು ಹಣಕೊಟ್ಟರೆಂದು ಪತ್ತೆ ಮಾಡಲಾಗುವುದು. ಲೆಕ್ಕ ಬರೆಯುವಾಗ ನೂರು ರೂಪಾಯಿ ಕೊಟ್ಟಿದ್ದರೆ ಒಂದು ರೂಪಾಯಿ ಎಂದು ಬರೆದುಕೊಳ್ಳಲಾಗುವುದು. ಇದು ಆದಾಯ ತೆರಿಗೆಯವರಿಗೆ ಮೋಸ ಮಾಡುವುದಕ್ಕೆಂದೇ ಬರೆದಿಡುವ ಲೆಕ್ಕವಾಗಿದೆ. ಸ್ವಂತ ಲೆಕ್ಕ ಬೇರೆಯೇ ಇಡಲಾಗುವುದು. ದೇಶದಾದ್ಯಂತ ಹೀಗೆ ಸಂಗ್ರಹಿಸಿದ ಹಣ ನಾಗಪುರದಲ್ಲಿ ಆರ್ ಎಸ್ ಎಸ್ ಕೇಂದ್ರ ಕಚೇರಿಗೆ ಸೇರಬೇಕು. ಈ ಹಣ ಅಪಾರವಾಗುವ ಕಾರಣ ಆದಾಯ ತೆರಿಗೆ ತಪ್ಪಿಸಲು ಸ್ಥಳೀಯ ಮಟ್ಟದಲ್ಲಿ ಸ್ಥಳೀಯ ಶಾಖೆಯ ಹೆಸರಿನಲ್ಲಿ ಬ್ಯಾಂಕಿನಲ್ಲಿಟ್ಟು ನಾಗಪುರಕ್ಕೆ ಬೇಕಾದಾಗ ಕಳುಹಿಸಿ ಕೊಡಲಾಗುವುದು. ಪ್ರಾಮಾಣಿಕತನ ತಮ್ಮ ಗುತ್ತಿಗೆಯೆಂದು ದಿನೇ ದಿನೇ ದೇಶಕ್ಕೆ ಸಾರುತ್ತಿರುವ ಜನ ನಿಜಜೀವನದಲ್ಲಿ ಈ ರೀತಿಯ ವಂಚನೆ ಮಾರ್ಗವನ್ನೇ ಅನುಸರಿಸುತ್ತಾರೆಂಬುದನ್ನು ತಿಳಿದಾಗ ಹಲವರಿಗೆ ದಿಗ್ಭ್ರಮೆಯಾದೀತು!



ಟೊಳ್ಳು ಶಿಸ್ತು

ಆರ್‌ಎಸ್‌ಎಸ್‌ನ್ನು ಒಂದು ಶಿಸ್ತುಬದ್ಧ ಸಂಘಟನೆ ಯೆಂದು ಹಾಡಿ ಹೊಗಳುವವರು ಬಹಳ ಮಂದಿ ಇದ್ದಾರೆ. ಇದು ಮೇಲು ನೋಟಕ್ಕೆ ಸರಿಯೆಂದೂ ತೋರುತ್ತದೆ. ಅವರು ಮನೆಮನೆಗೆ ಹೋಗಿ ನಡೆಸುವ ವ್ಯವಸ್ಥಿತ ಪ್ರಚಾರ ಅರ್ಥಾತ್ ಅಪಪ್ರಚಾರ ಅದರ ಕಾರ್ಯಕ್ರಮದಲ್ಲಿ ಆಜ್ಞಾವರ್ತಿಗಳಾಗಿ ನಡೆದುಕೊಳ್ಳುವ ರೀತಿ, ಇದೆಲ್ಲವನ್ನೂ ದೂರದಿಂದ ನೋಡಿ ತಲೆದೂಗುವವರ ಸಂಖ್ಯೆಯೇನೂ ಕಮ್ಮಿಯಿಲ್ಲ. ಹೀಗೆ ಮೇಲು ನೋಟಕ್ಕೆ ಶಿಸ್ತುಬದ್ಧ ಸಿಪಾಯಿಗಳಾಗಿ ಕಾಣುವವರು ನಿಜಸ್ಥಿತಿಯಲ್ಲಿ ಜೀತದಾಳುಗಳೇ ವಿನಃ, ಶಿಸ್ತಿನ ಸಿಪಾಯಿಗಳಲ್ಲ. ವ್ಯಕ್ತಿಯ ಸ್ವಯಂಪ್ರತಿಭೆ ವಿಚಾರಶೀಲತೆ ಮುಂತಾದವುಗಳನ್ನು ಕೊಂದು ಆತನನ್ನು ಜೀತದಾಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಗೆ ಆರ್‌ಎಸ್‌ಎಸ್ ನವರು ಸಂಸ್ಕಾರ ಕೊಡುವುದು ಎನ್ನುತ್ತಾರೆ. ಇತ್ತ ಸಂಸ್ಕಾರ ಕೊಡುವುದು ಎಂದರೆ, ಮೆದುಳು ತೊಳೆಯುವುದು (ಬ್ರೈನ್ ವಾಷಿಂಗ್) ಎಂದರ್ಥ. ಈ ರೀತಿ ಮೆದುಳು ತೊಳೆದು ಜೀತದಾಳುಗಳಾಗಿ ಪರಿವರ್ತನೆಗೊಂಡ ಆರ್‌ಎಸ್‌ಎಸ್ ಸ್ವಯಂಸೇವಕರೆನ್ನುವವರು ಪ್ರದರ್ಶಿಸುವ ಶಿಸ್ತು, ಸರ್ಕಸ್ ಪ್ರಾಣಿಗಳ ಶಿಸ್ತೇ ವಿನಃ ಅರ್ಥಪೂರ್ಣವಾದ ಶಿಸ್ತಲ್ಲ. ಇಂಥ ಶಿಸ್ತಿನ ಜನ ಆಗಿಂದಾಗ್ಗೆ ಶಿಬಿರ ಸೇರುತ್ತಾರೆ, ಊಟ ಮಾಡುತ್ತಾರೆ. ಬೂಟುಧಾರಿಗಳಾಗಿ ಪಥಸಂಚಲನವೆಂಬ ಕಾರ್ಯಕ್ರಮ ನಡೆಸುತ್ತಾರೆ. ಇದರಿಂದ ಇವರು ಏನು ಗಳಿಸುತ್ತಾರೆ? ಇಪ್ಪತ್ತು ಸಾವಿರ ಜನರು ಒಂದು ಕಡೆ ಸೇರಿ ಮನೆಮನೆಯಿಂದ ತಂದ ಚಪಾತಿ ತಿಂದು ವಾಪಾಸ್ಸು ಮನೆಗೆ ಹೋದರೆ ಅದು ಇಪ್ಪತ್ತು ಸಾವಿರ ಜನರ ಒಂದು ದಿವಸ ವ್ಯರ್ಥವಲ್ಲವೇ? ಕಂಡವರು ಕಷ್ಟಪಟ್ಟು ಸಂಪಾದಿಸಿದ ಚಪಾತಿ ತಿಂದು ಹೋಗುವುದು ಸಮಾಜ ಶೋಷಣೆಯಲ್ಲವೇ? ಇವರು ಸಮಾಜಕ್ಕೆ ಹೊರೆಯಲ್ಲವೇ? ಇವರು ರಸ್ತೆಯಲ್ಲಿ ಪಥಸಂಚಲನವೆಂಬ ಕಾರ್ಯಕ್ರಮ ನಡೆಸುವುದು, ಅದೂ ಬುದ್ಧಿಪೂರ್ವಕವಾಗಿ ಮಸೀದಿಗಳ ಎದುರಿನಲ್ಲಿ ಯಾವ ಪುರುಷಾರ್ಥಕ್ಕೆ? ಮುಸಲ್ಮಾನರ ಮನಸ್ಸಿನಲ್ಲಿ ಭೀತಿ ಹುಟ್ಟಿಸುವುದು ಬಿಟ್ಟರೆ, ಈ ಪಥಸಂಚಲನದ ಹಿನ್ನೆಲೆಯಲ್ಲಿ ಬೇರಾವ ಉದ್ದೇಶವೂ ಇಲ್ಲ. ಹೀಗೆ ಭಯ ಹುಟ್ಟಿಸುವುದರಿಂದ ಪರಿಣಾಮ ಕೆಟ್ಟದೇ ಆಗುತ್ತದೆ. ಭೀತಿಗೊಳಗಾದ ಅಲ್ಪಸಂಖ್ಯಾತರು ತಮ್ಮ ಉಳಿವಿಗಾಗಿ ಹೆಚ್ಚು ಸಂಘಟಿತರಾಗಲು ಅಲ್ಪಸಂಖ್ಯಾತರ ಜಾತೀಯತೆಯನ್ನು ಕೆರಳಿಸಲು ಸಹ ಪ್ರಚೋದನೆ ದೊರೆಯುವುದರಿಂದ ಅರಿವು ಮಾಡಿಕೊಳ್ಳುವಷ್ಟು ಸಹ ಮನೋವಿಕಾಸ ಆರ್‌ಎಸ್‌ಎಸ್ ಸ್ವಯಂಸೇವಕರಿಗೆ ದೊರೆಯುವುದಿಲ್ಲ.



ಆರ್‌ಎಸ್‌ಎಸ್ ಸ್ವಯಂಸೇವಕರೆನ್ನುವವರಿಗೆ ನೀಡುವ ನಿರಂತರ ತರಬೇತಿಯ ಮೂಲಕ ಅವರನ್ನು ನಿರ್ದಿಷ್ಟ ರೀತಿಯಲ್ಲಿಯೇ ವ್ಯವಹರಿಸುವಂತೆ ಸಿದ್ಧಗೊಳಿಸಲಾಗುವುದು. ಮನುಷ್ಯರಿಗೆ ನೀಡಬೇಕಾದುದು ತರಬೇತಿಯಲ್ಲ, ವಿದ್ಯಾಭ್ಯಾಸ. ಮಾನವರಿಗೆ ವಿದ್ಯಾಭ್ಯಾಸದ ಮೂಲಕ ಜ್ಞಾನಾರ್ಜನೆಗೆ ಅವಕಾಶವಾಗಿ ಹಲವು ದಿಕ್ಕಿನಿಂದ ಬರುವ ಜ್ಞಾನವನ್ನು ಸ್ವೀಕಾರ ಮಾಡುವವರಾಗಿ ಸ್ವತಂತ್ರವಾಗಿ ಚಿಂತನೆ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸಿ ವೈಜ್ಞಾನಿಕ ಮನೋಭಾವ ಹೆಚ್ಚಿಸಬೇಕಾಗಿದೆ. ಹಾಗಾದರೆ ಮಾತ್ರ ಜನಕೋಟಿಯಲ್ಲಿ ವಿಶಾಲಮನೋಭಾವ ಬೆಳೆದು, ಹಿಂದೂ ಧರ್ಮದಲ್ಲಿನ ಮೂಲೋದ್ದೇಶವೆಂದು ಸಾರುವ ವಿಶ್ವ ಕುಟುಂಬದ ಭಾವನೆ ಬೆಳೆಯಲು ಸಾಧ್ಯ. ತರಬೇತಿ ನೀಡಬೇಕಾದುದ್ದು ಪ್ರಾಣಿಗಳಿಗಲ್ಲದೇ ಮನುಷ್ಯರಿಗಲ್ಲ. ಆನೆಗಳಿಗೆ ಮರದ ದಿಮ್ಮಿಗಳನ್ನು ಸಾಗಿಸಲು, ಎತ್ತುಗಳಿಗೆ ಬಂಡಿ ಎಳೆಯಲು, ಕುದುರೆಗಳಿಗೆ ಸವಾರಿಯಲ್ಲಿ ಭಾಗವಹಿಸಲು, ಈ ಪ್ರಾಣಿಗಳಿಗೆ ಸೂಕ್ತ ತರಬೇತಿ ಬೇಕಾಗುತ್ತದೆ. ಹೀಗೆ ತರಬೇತಿ ಕೊಡಲ್ಪಟ್ಟ ಪ್ರಾಣಿಗಳು ಮನುಷ್ಯ ಹೇಳಿದ ಕೆಲಸಗಳನ್ನು ಶಿಸ್ತಿನಿಂದ ಮಾಡುತ್ತವೆ. ಪ್ರಾಣಿಗಳಿಗೆ ನೀಡಬೇಕಾದ ಇಂಥ ತರಬೇತಿಯನ್ನು ಆರ್‌ಎಸ್‌ಎಸ್‌ನಲ್ಲಿ ಮುಗ್ಧ ಮಕ್ಕಳಿಗೆ ನೀಡಿ ಮನುಷ್ಯರಾಗಿ ವಿಶಾಲ ಬುದ್ಧಿಯವರಾಗಿ ಬೆಳೆಯಬೇಕಾದವರನ್ನು ತರಬೇತಿ ಹೊಂದಿದ ಪ್ರಾಣಿಗಳನ್ನಾಗಿ ತಯಾರು ಮಾಡಲಾಗುವುದು. ಮನುಷ್ಯ ಕುಲಕ್ಕೆ ಕಳಂಕಪ್ರಾಯವಾದ ಇಂಥ ಚಟುವಟಿಕೆಗಳನ್ನು ಶಿಸ್ತಿನ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲು ಸಾಧ್ಯವಾಗುತ್ತಿರುವುದು ಒಂದು ವಿಡಂಬನೆಯೇ ಸರಿ!

ಆರ್‌ಎಸ್‌ಎಸ್ ಮತ್ತು ಚಾರಿತ್ರ್ಯದ ನಿರ್ಮಾಣ

ಚಾರಿತ್ರ್ಯ ನಿರ್ಮಾಣ ತನ್ನ ಗುರಿಯೆಂದು ಆರ್‌ಎಸ್‌ಎಸ್ ಪದೇಪದೇ ಪ್ರತಿಪಾದಿಸುತ್ತದೆ. ಈ ಮಾತು ಹಲವರಿಗೆ ಪ್ರಿಯವಾಗುವುದೂ ಸಹಜ. ಏಕೆಂದರೆ ಎಲ್ಲರಿಗೂ ಚಾರಿತ್ರ್ಯ ಸಂಪನ್ನರಾಗಬೇಕೆಂದು ಆಸೆಯಿರುತ್ತದೆ. ಈ ದಿಸೆಯಿಂದ ಜನರಿಗೆ ಆರ್‌ಎಸ್‌ಎಸ್ ನ ಪ್ರಮುಖರೆನ್ನುವವರಲ್ಲಿಯೇ ಚಾರಿತ್ರ್ಯವಾಗಲೀ ಪ್ರಾಮಾಣಿಕತನವಾಗಲೀ ಇಲ್ಲವೆನ್ನುವುದು ಸಾಬೀತಾದಾಗ ಆರ್ ಎಸ್ ಎಸ್ ನ ಬಗ್ಗೆ ಅಂಧಶ್ರದ್ಧೆಯಿಂದ ಮುಗ್ಧರಿಗೆ ಹೃದಯಾಘಾತವಾದೀತು. ನನ್ನ ನಿಕಟವರ್ತಿಯಾದ, ಚಾರಿತ್ರ್ಯದ ಬಗ್ಗೆ ಪದೇಪದೇ ಮಾತನಾಡುತ್ತಿದ್ದ ಉನ್ನತ ಮಟ್ಟದ ಆರ್‌ಎಸ್‌ಎಸ್ ಪ್ರಚಾರಕರೊಬ್ಬರಿದ್ದರು. ಅವರನ್ನು ಬಹಳ ಗೌರವಾನ್ವಿತರೆಂದೂ ಸಂಪರ್ಕವಿದ್ದವರೆಲ್ಲರೂ ಭಾವಿಸುತ್ತಿದ್ದರು. ನಾನೂ ಭಾವಿಸಿದ್ದೆ. ಅವರೀಗ ಜೀವಂತವಾಗಿಲ್ಲ. ಅವರು ತುರ್ತುಪರಿಸ್ಥಿತಿಯ ಅವಧಿಯಲ್ಲಿ ಭೂಗತ ಚಟುವಟಿಕೆ ನಡೆಸುತ್ತಿದ್ದಾಗ ಬೆಂಗಳೂರಿನ ಬೀದಿಯೊಂದರಲ್ಲಿ ನಡೆಯುತ್ತಿದ್ದಾಗಲೇ ಹೃದಯಾಘಾತದಿಂದ ಕುಸಿದು ಬಿದ್ದು ಸತ್ತುಹೋದರು. ಈ ಸುದ್ದಿ ಪೊಲೀಸರಿಗೆ ತಲುಪುವ ಮೊದಲೇ ಅವರ ಹೆಗಲಲ್ಲಿ ನೇತಾಡುತ್ತಿದ್ದ ಚೀಲವನ್ನು ಆರ್‌ಎಸ್‌ಎಸ್‌ನವರು ಅಪಹರಿಸಿಬಿಟ್ಟರು. ಚೀಲದೊಳಗೆ ದೊರೆತ ಸಾಮಾನುಗಳಲ್ಲಿ ಬ್ಯಾಂಕೊಂದರಲ್ಲಿ ಇಟ್ಟಿದ್ದ 80 ಸಾವಿರ ರೂಪಾಯಿಯ ನಿಶ್ಚಿತ ಠೇವಣಿಯ ದಾಖಲೆಯಿತ್ತು. ಇದು ವೇಶ್ಯಾವೃತ್ತಿ ನಡೆಸುತ್ತಿದ್ದ ಮಹಿಳೆಯೊಬ್ಬಳ ಹೆಸರಿನಲ್ಲಿತ್ತು. ಜೊತೆಗೆ ಈ ಚೀಲದಲ್ಲಿ ಗರ್ಭನಿರೋಧಕ್ಕೆ ಬಳಸುವ ನಿರೋಧ ಪೊಟ್ಟಣಗಳೂ ಇದ್ದವು. ನಿಶ್ಚಿತ ಠೇವಣಿ ಬಗ್ಗೆ ಇಬ್ಬರು ಹೆಂಗಸರ ನಡುವೆ, ಆಮೇಲೆ ಆರ್‌ಎಸ್‌ಎಸ್‌ನ ಕೇಂದ್ರ ಕಚೇರಿಯಲ್ಲಿಯೇ ಹಣಾಹಣಿಯಾಯಿತೆಂದೂ, ನಂತರ ವರಿಷ್ಠರು ಮಧ್ಯೆ ಪ್ರವೇಶ ಮಾಡಿ, ರಾಜಿಯಲ್ಲಿ ಇತ್ಯರ್ಥ ಮಾಡಿದರೆಂದೂ ನನಗೆ ಅಧಿಕೃತವಾಗಿ ನಂತರ ತಿಳಿಯಿತು. ಈ ಸುದ್ದಿ ಗೊತ್ತಾದಾಗ ನಾನೇ ಹೌಹಾರಿ ಹೋದೆ. ಈ ಆರ್‌ಎಸ್‌ಎಸ್‌ನ ಪ್ರಚಾರಕನ ಪ್ರತ್ಯೇಕ ಜೀವನ ಇಷ್ಟೊಂದು ಅಸಹ್ಯಕರವಾಗಿತ್ತೆಂದು ನನಗೆ ಮೊದಲು ಊಹಿಸುವುದೂ ಕೂಡ ಸಾಧ್ಯವಿರಲಿಲ್ಲ. ಯಾರಾದರೂ ಹೇಳಿದ್ದರೆ ನಾನದನ್ನು ನಂಬುವ ಸ್ಥಿತಿಯಲ್ಲಿ ಸಹ ಇರಲಿಲ್ಲ. ಹೀಗೆ ಅನಾಚಾರಕ್ಕಾಗಿ ಬಳಸಿದ ಈ 80 ಸಾವಿರ ರೂಪಾಯಿ ಯಾವುದು ಗೊತ್ತೆ? ಸಾರ್ವಜನಿಕರಿಂದ ಬೇರೆ ಬೇರೆ ಕಾರಣ ಹೇಳಿ ಎತ್ತಿದ ವಂತಿಗೆಯಲ್ಲದೆ ಬೇರೇನೂ ಅಲ್ಲ. ಇದೊಂದು ಆರ್‌ಎಸ್‌ಎಸ್ ವಲಯದಲ್ಲಿನ ಅಪರೂಪದ ಘಟನೆಯಂತೂ ಅಲ್ಲವೇ ಅಲ್ಲ. ಇಂಥವು ಆರ್‌ಎಸ್‌ಎಸ್ ಪಾಳೆಯದೊಳಗೆ ವ್ಯಾಪಕವಾಗಿ ನಡೆಯುತ್ತಿದೆಯೆನ್ನುವುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ನಾನು ಸಂಗ್ರಹಿಸಿದ್ದೇನೆ. ತುರ್ತು ಪರಿಸ್ಥಿತಿಯಲ್ಲಿ ಕೆಲವಾರು ಆರ್‌ಎಸ್‌ಎಸ್ ಪ್ರಚಾರಕರು ಭೂಗತರಾಗಿದ್ದಾಗ, ತಮಗೆ ಅನ್ನ ಕೊಡುತ್ತಿದ್ದ ಮನೆಗಳಲ್ಲಿನ ಹೆಣ್ಣುಮಕ್ಕಳಲ್ಲಿ ಅಕ್ರಮ ಸಂಬಂಧ ಬೆಳೆಸಿ ಬೀದಿಪಾಲು ಮಾಡಿದ ಘಟನೆಗಳು ಕೆಲವಾದರೆ, ಇನ್ನು ಕೆಲವು ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಪ್ರಚಾರಕರಿಂದ ಅಕ್ರಮ ಗರ್ಭವತಿಯರಾದ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಳ್ಳಲೇಬೇಕಾದ ಪ್ರಸಂಗಗಳು ಸಹ ನಡೆದಿವೆ. ಹೀಗೆ ಹಲವರು ನಂತರ ಪ್ರಚಾರಕತನ ಬಿಟ್ಟು ಸಂಸಾರ ಕಟ್ಟಿಕೊಂಡು ಜೀವಿಸುತ್ತಿರುವ ಕಾರಣ ಅವರ ವಿವರ ನೀಡುವುದು ಸೂಕ್ತವಲ್ಲ. ಇದೂ ಸಾಲದೆಂಬಂತೆ ಆರ್‌ಎಸ್‌ಎಸ್‌ನಲ್ಲಿ ಪ್ರಚಾರಕರಾಗಿರುವವರು ಸಾಕಷ್ಟು ಮಂದಿ ಸಲಿಂಗಪ್ರಿಯರಾಗಿದ್ದಾರೆ. ಶಾಖೆಗಳಿಗೆ ಹೋಗುವ ಕಂಡವರ ಹುಡುಗರನ್ನು ಇದಕ್ಕಾಗಿ ಬಳಸುವುದು ಆರ್‌ಎಸ್‌ಎಸ್‌ನಲ್ಲಿ ಅಪರೂಪವೇನಲ್ಲ. ಈ ಬಗ್ಗೆ ನಾನು ಎರಡು ವರ್ಷದ ಹಿಂದೆಯೇ 'ವೀಕ್' ಎನ್ನುವ ಇಂಗ್ಲಿಷ್ ನಿಯತಕಾಲಿಕಕ್ಕೆ ಕೊಟ್ಟಿದ್ದ ಸಂದರ್ಶನದ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದೆ. ಪತ್ರಿಕೆ ಅದನ್ನು ಜನಗಳ ಮನ ಸೆಳೆಯುವಂತೆ ಮುದ್ರಿಸಿಯೂ ಇತ್ತು. ಇದನ್ನು ನೋಡಿದ ಆರ್‌ಎಸ್‌ಎಸ್ ವರಿಷ್ಠರು ಹುಬ್ಬು ಗಂಟಿಕ್ಕಿದರೇ ವಿನಃ ಯಾವುದೇ ಪ್ರತಿಕ್ರಿಯೆ ವ್ಯಕ್ತಮಾಡದೆ ಮೌನ ತಳೆದರೆನ್ನುವುದು ಇಲ್ಲಿ ಗಮನಿಸಬೇಕಾದ ಅಂಶ. ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಹಲವಾರು ಜನ ಜೈಲಿನಲ್ಲಿದ್ದಾಗ ಮಹಾರಾಷ್ಟ್ರದ ಜೈಲೊಂದರಲ್ಲಿ ನಡೆದ ಘಟನೆಯೊಂದನ್ನು 'ಬ್ಲಿಟ್ಸ್' ಪತ್ರಿಕೆ ಅಂದೇ ವರದಿ ಮಾಡಿತ್ತು. ಅದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ.

ಅದೇನೆಂದರೆ ಜೈಲಿನೊಳಗಿದ್ದ ಪ್ರಚಾರಕರೊಬ್ಬರನ್ನು ಭೇಟಿ ಮಾಡಲು ಆಗಾಗ್ಗೆ ಅವಿವಾಹಿತ ಮಹಿಳೆಯೊಬ್ಬಳು ಜೈಲಿಗೆ ಸಂದರ್ಶಿಸುತ್ತಿದ್ದಳು. ಜೈಲು ಅಧಿಕಾರಿಗಳ ಕೃಪೆಯಿಂದ ಅವರಿಗೆ ಪ್ರತ್ಯೇಕ ಇಬ್ಬರೇ ಸೇರಲು ಅವಕಾಶ ಕಲ್ಪಿಸಿಕೊಡಲಾಗುತ್ತಿತ್ತು. ಹೀಗೆ ನಡೆಯುತ್ತಿದ್ದಾಗ ಆ ಮಹಿಳೆ ಗರ್ಭ ಧರಿಸಿದಳು. ಚಾರಿತ್ರ್ಯ ನಿರ್ಮಾಣದ ಮಾತನ್ನು ಪ್ರತಿನಿತ್ಯ ಅತಿರಂಜಿತವಾಗಿ ಆಡುವ ಈ ಜನ ಎಂಥ ಕಪಟ ವೇಷಧಾರಿಗಳೆಂಬುದಕ್ಕೆ ಇಷ್ಟೇ ವಿವರಗಳು ಸಾಕೆಂದು ತೋರುತ್ತದೆ. ●

ಜಿ.ಎಸ್.ಎಸ್ ನಮ್ಮವರು ಕಂಡ್ರೀ



ಹಾಸ್ಯ ಪ್ರಬಂಧ

ಗೆಳೆಯ ರವೀಶ್. "ಅಗಲಿದ ಕವಿ ಜಿ.ಎಸ್. ಶಿವರುದ್ರಪ್ಪನವರ ಕಾವ್ಯ ಕುರಿತ ಗೀತಗಾಯನ ಮತ್ತು ಕವಿಗೋಷ್ಠಿ ಏರ್ಪಡಿಸುವ ಬಗ್ಗೆ ಚರ್ಚಿಸಬೇಕಿದೆ. ಕೂಡಲೇ ಬನ್ನಿ" ಎಂದು ಫೋನ್ ಮಾಡಿದರು. ಸತ್ತಂತಿರುವ ಚಿಕ್ಕಮಗಳೂರಿಗೆ ಜಿ.ಎಸ್.ಎಸ್ ಕಾವ್ಯ ಸಿಂಚನದಿಂದ ಲಾದರೂ ಜೀವ ಬರಲಿ ಎಂದುಕೊಂಡು ರವೀಶ್ ಇದ್ದ ಜಾಗಕ್ಕೆ ಓಡಿದೆ. ಅಲ್ಲಾಗಲೇ ಹಲವು ಗಣ್ಯರ ಮಧ್ಯೆ ಆರ್.ಸಿ. ಬಾಟಲ್ ಮುಚ್ಚಳ ತೆಗೆಸಿಕೊಂಡು ಮುಕ್ಕಾಲಾಗಿದ್ದವು. ಆರ್.ಸಿ. ವಾಸನೆ ನನ್ನನ್ನು ಲಂಕೇಶರ ರೂಮಿನ ಬಾಗಿಲಿಗೆ ನಿಲ್ಲಿಸಿತು. ಏಕೆಂದರೆ ಲಂಕೇಶರ ರೂಮಿನ ಬಾಗಿಲು ತೆಗೆದಕೂಡಲೆ ಆರ್.ಸಿ. ಬಾಟಲಿಯ ಮುಚ್ಚಳ ತೆಗೆದಂತಾಗುತ್ತಿತ್ತು. ಅದಕ್ಕೂ ಮುನ್ನ ಒಂದು ರೀತಿಯ ಅವ್ಯಕ್ತ ಭಯ ಮತ್ತು ಸಂಭ್ರಮ ಇವೆಲ್ಲಾ ಲಂಕೇಶರು "ಬಾ" ಎಂದು ಸಂಬೋಧಿಸಿದ ನಂತರ ಮಾಯವಾಗುತ್ತಿತ್ತು. ಆದರೆ ಇಲ್ಲಿ ಆರ್.ಸಿ. ವಾಸನೆ ಬಿಟ್ಟರೆ ಅಂತಹದ್ದೇನೂ ಇರಲಿಲ್ಲ.

ಅಲ್ಲದೆ ಜಿ.ಎಸ್.ಎಸ್. ನಮ್ಮ ಜಾತಿಯವರು ಎಂದು ಹೆಮ್ಮೆ ಪಡುವ ಜ್ಯಾತ್ಯಸ್ಥರ ಸಣ್ಣ ಗುಂಪು ನೋಡಿದಂತಾಯ್ತು. ಒಂದೇ ಜಾತಿಯ ಮೂವರು ಒಟ್ಟಿಗೇ ಸೇರಿದಲ್ಲಿ ಇನ್ನೇನೂ ಮಾತನಾಡ ಲಾರರು. "ನಮ್ಮ ಜಾತಿಯವರಿಂದ ನಾವು ಕಲಿಯುವಂತದು ಏನೂ ಇರಲ್ಲ. ಆದಷ್ಟೂ ಸ್ವಜಾತಿ ಜನರಿಂದ ದೂರವಿರುವುದೇ ಒಳ್ಳೆಯದು" ಎಂದು ನಮ್ಮನ್ನು ಎಚ್ಚರಿಸುತ್ತಿದ್ದ ಲಂಕೇಶರು ನೆನಪಾಗಿ ಅಲ್ಲ ಕುಳಿತಿದ್ದವರಿಗೆ ಆ ಮಾತು ಹೇಳಬೇಕೆನಿಸಿತು. ಆದರೆ ಜಿ.ಎಸ್.ಎಸ್. ಕಾರ್ಯಕ್ರಮದ ಚರ್ಚೆ ಮುಖ್ಯವೆಂದು ಆರ್.ಸಿ. ಬಾಟಲ್ ಕಡೆ ಗಮನ ಹರಿಸಿದೆ.

ಅಷ್ಟರಲ್ಲಿ ಒಂದು ರೌಂಡ್ ಮುಗಿಸಿದ್ದ ಲಿಂಗಾಯತ ಗಣ್ಯರು ತಮಗಾಗಿರುವ ಅಗಾಧ ಅನುಭವಗಳನ್ನು ಹಂಚಿಕೊಳ್ಳಲು ಸಣ್ಣಪುಟ್ಟ ಉಪಮೆಗಳನ್ನು ಹೇಳುತ್ತಿದ್ದರು. ಆಗ ನಾನು "ನೋಡಿ, ಮನುಷ್ಯ ತಿನ್ನುವ ಪದಾರ್ಥವನ್ನು ಕೃತಕವಾಗಿ ತಯಾರಿಸಲಾರ. ಅವನು ತಿನ್ನುವುದೆಲ್ಲವೂ ಈ ಭೂಮಿಯಿಂದಲೇ ಬರಬೇಕು. ವಿದೇಶೀಯರು ಭಾರತಕ್ಕೆ ಬಂದಾಗ ಗಮನಿಸುವ ವಿಚಿತ್ರ ಯಾವುದೆಂದರೆ ತಿನ್ನಲಾರದಷ್ಟು ಹಾಕಿಸಿಕ್ಕೊಂಡು ಅದಕ್ಕೇ ಕೈತೊಳೆದು ಹೋಗುವ ದರಿದ್ರ ನಡವಳಿಕೆಯನ್ನ" ಎಂದೆ.

ಇದರಿಂದ ಪ್ರಭಾವಿತಗೊಂಡ ಗಣ್ಯರೊಬ್ಬರು ಅಗಲವಾಗಿ ಕಣ್ಣುಬಿಟ್ಟು ಯಾವುದೋ ಗಹನವಾದ ವಿಷಯ ಹೇಳಲು ತಯಾರಾಗಿ "ನೋಡಿ ಸಾರ್, ನಾನು ನನ್ನ ಬದುಕಿನಲ್ಲಿ ತುಂಬಾ ಅನುಭವ ಪಡದಿದ್ದಿನಿ" ಎಂದರು. ಆ ವ್ಯಕ್ತಿ ಆಕಾರದಲ್ಲೂ ವಿಶೇಷವಾಗಿದ್ದರಿಂದ ಮತ್ತು ತುಂಬ ಒಳ್ಳೆಯವನೂ ಆಗಿದ್ದನೊ ಏನೋ ಎಲ್ಲರೂ ಅವನ ಬಾಯಿ ನೋಡುತ್ತ ಕುಳಿತರು.

"ಒಂದು ಸತಿ ನಾನು ಊಟಕ್ಕೆ ಕುಳಿತಿದ್ದೆ ಸಾರ್. ಆದ್ರೆ ಊಟ ಮಾಡೊ ಮನಸಿಲ್ಲ. ಒಂಥರಾ ಹೊಟ್ಟೆ ತುಂಬಿದಂಗಾಗಿತ್ತು. ಕೈಗೆ ತಗೊಂಡು ಬಾಯಿಗಿಡನ ಅಂದ್ರೆ ಆಗ್ತಾಯಿರಲಿಲ್ಲ. ಆದ್ರು ನಮ್ಮತ್ತೆ ತಂದು ಇಕ್ಕುತ್ಲೇಯಿದ್ರು. ನಾನು 'ಸಾಕು ಕಣತ್ತೆ' ಅಂದ್ರೂ ಕೇಳಲಿಲ್ಲ. ಅವರ ಪ್ರೀತಿ ಒತ್ತಾಯಕ್ಕೆ ನಾನೇನು ಮಾಡಿದೆ ಅಂದ್ರೆ ಕಷ್ಟಪಟ್ಟು ಊಟ ಮಾಡಕ್ಕೆ ಟ್ರೈ ಮಾಡ್ತಾಯಿದ್ದೆ ಇದನ್ನ ನನ್ನ ನಾದನಿ ನೋಡಿದ್ಳು. ಅವುಳಿಗೆ ನನ್ನ ಕಷ್ಟ ಏನು ಅಂತ ಗೊತ್ತಾಯ್ತು. 'ಹೋಗ್ಲಿ ಬಿಡಿ ಮಾವ. ನೀವು ಕಷ್ಟ ಪಟ್ಟುಕೊಂಡು ಊಟ ಮಾಡೋದು ಬೇಡಿ. ಕೈ ತೊಳಿರಿ' ಅಂದ್ಳು ನಾನು ತೊಳಕೊಂಡೆ ಸಾರ್. ಆದ್ರೆ ಮುಂದೆ ಎಂಥ ಅನಾಹುತ ಆಯ್ತು ಅಂದ್ರೆ ನಮ್ಮತ್ತೆ ಬಂದು ನೋಡಿ 'ಮೊದಲೆ ಹೇಳಬಾರದಿತ್ತ, ಇಷ್ಟ ಇಲ್ದೆಯಿದ್ರು ಯಾಕೆ ಅನ್ನ ಇಕಿಸಿಕೊಂಡೆ' ಅಂದ್ರು ಸಾರ್. ಅವತ್ತಿನಿಂದ ಇವತ್ತಿನವರೆಗೂ ನಾನು ಊಟ ವೇಸ್ಟು ಮಾಡಲ್ಲ" ಎಂದು ತಮ್ಮ ಕಣ್ಣಗಲಿಸಿ ಒಂದು ರೌಂಡ್ ನೋಡಿದರು. ಅವರ ಶಪಥದ ಪರಿಣಾಮವನ್ನು ಅದರ ಹೊಟ್ಟೆ ನೋಡಿಯೇ ಗ್ರಹಿಸಬಹುದಿತ್ತು.

ಅಷ್ಟರಲ್ಲೊಬ್ಬ ಅಪಘಾತಗಳ ಸುದ್ದಿ ತೆಗೆದು ಚನ್ನರಾಯಪಟ್ಟಣದ ಸಮೀಪ ಏಕಕಾಲದಲ್ಲಿ ಎರಡು ಕಾರು ಬಂದು ಮೂರನೇ ಕಾರಿಗೆ ನೇರ ಡಿಕ್ಕಿ ಹೊಡೆದು ಐದಾರು ಜನರನ್ನು ಕೊಂದು ಹಾಕಿದ ಸುದ್ದಿ ಹೇಳಿದ. ಸದರಿ ಜಾಗವನ್ನ ನಾನೂ ನೋಡಿ ಅನಾಹುತವನ್ನು ನಿರೀಕ್ಷಿಸಿ ಬಂದಿದ್ದರಿಂದ ಆ ಬಗ್ಗೆ ಯೋಚಿಸತೊಡಗಿದೆ. ಗಣ್ಯರು ನನ್ನ ಗಮನವನ್ನು ತಮ್ಮತ್ತ ಸೆಳೆಯಲು "ಕೇಳಿ ಸಾರ್ ಇಲ್ಲಿ, ಇನ್ನೊಂದು ಆಕ್ಸಿಡೆಂಟ್ ಹೇಳ್ತಿನಿ. ಈಗ ನೆನೆಸಿಕೊಂಡ್ರೂ ಭಯ ಆಗುತ್ತೆ" ಎಂದು ಶುರು ಮಾಡೇಬಿಟ್ಟರು.

"ಒಂದು ಸತಿ ಏನಾಯ್ತು ಅಂದ್ರೆ ಸಾರ್, ನಮ್ಮೂರಿಗೆ ಒಬ್ಬರು ಬ್ಯಾಂಕ್ ಮ್ಯಾನೇಜರ್ ಬರ್ತಾರೆ, ಅಂದ್ರೆ ಮೆಯಿನ್ ರೋಡಲ್ಲಿ ಇಳಿದು ನಮ್ಮೂರಿಗೆ ನಡಕೊಂಡು ಬರ್ತಾರೆ. ಅವತ್ತೇನಾಯ್ತು ಅಂದ್ರೆ, ಸ್ವಲ್ಪ ಸೋನೆ ಮಳೆ ತರ ಇತ್ತು. ನಮ್ಮೂರಿಂದ ಮೇಯಿನ್ ರೋಡಿಗೆ ಹೋಗೋವಷ್ಟರಲ್ಲಿ ನೆಂದೋಗಿದ್ರು. ಇದನ್ನ ನಾನು ನೋಡಿ ಅಲಲಲೆ ಯಂಥಾ ಅನಾಹುತ ಆಯ್ತದಲ್ಲ ಅಂತ ಯೋಚನೆ ಮಾಡಿ 'ಸಾರ್ ನಡಿರಿ ನನ್ನ ಬೈಕಲ್ಲಿ ಬುಡ್ತಿನಿ' ಅಂದೆ. ಪಾಪ ಅವರು 'ಏನು ಬೇಡಿ ಸಾರ್; ನಾನು ನಡಕಂಡೆ ಹೋಗ್ತೀನಿ ಒಂದು ಛತ್ರಿ ಕೊಡಿಸಿ ಸಾಕು' ಅಂದ್ರು. ನಾನು ಕೇಳಬೇಕಲ್ಲ. ಎರಡು ರೈನ್ ಕೋಟು ತಂದು ಅವ್ರುರಿಗೊಂದಿಕ್ಕಿ ನಾನೊಂದಿಕ್ಕಂಡು ಹೊರಡಕ್ಕೆ ತಯಾರಾದ್ದೊ. ಅಂತೂ ಮುಂದೆ ನಾನು ಹಿಂದೆ ಅವುರು ಕುಂತಗಂಡು ಹೊರಟು ಮೈಯಿನ್ ರೋಡಿಗೆ ಬಂದ್ವೊ. ಯಾವ ಬಸ್ಸಿಗೆ ಕೈ ಹೊಡ್ಡಿದ್ರೂ ನಿಲ್ಲುಸ್ತುಯಿಲ್ಲ. ಮ್ಯಾನೇಜರ್ 'ನೀವು ಹೋಗಿ ಸಾರ್' ಅಂತರೆ. ನಾನು ಅವುರನ್ನ ರಸ್ತೆ ಬದಿಲಿ ನಿಲ್ಸಿ ಹೋಗಕ್ಕೆ ತಯಾರಿಲ್ಲ. ನಮ್ಮ ಗ್ರಾಚಾರಕ್ಕೆ ಯಾವ ಬಸ್ಸು ನಿಲ್ಲುಸ್ತಯಿಲ್ಲ. ಆವಾಗ ನಾನೇನು ಯೋಚನೆ ಮಾಡಿದೆ ಅಂದ್ರೆ ಹದಿನಾಲ್ಕು ಕಿಲೋಮೀಟರ್ ಇರೋ ಅವರೂರಿಗೇ ಹೋಗಿ ಬುಟ್ಟು ಬಂದ್ರೆ ಹ್ಯಾಗೇ ಅಂತ. ಆದ್ರೆ ಮ್ಯಾನೇಜರು ಕೇಳಬೇಕಲ್ಲ. 'ನೀವು ಹೋಗಿ ಸಾರ್, ನಾನು ಹೋಗ್ತಿನಿ' ಅಂದ್ರು. ನಾನು ನನ್ನ ಹಟವೇ ಸಾಧಿಸಿಬುಟ್ಟೆ. ತಿರುಗ ಅವುರು ಹಿಂದೆ, ನಾನು ಮುಂದೆ ಕೂತಗಂಡು ಹೊರಟೊ. ನಾವು ಹೊರಟಾಗ ಉದುರುತಾಯಿದ್ದ ಸೋನೆ ಆಮ್ಯಾಲೆ ನಿಂತೇ ಹೋಯ್ತು. ಅಂತೂ ಮಾತಾಡಿಕಂಡು ಅವುರೂರಿಗೆ ಬಂದೇ ಬುಟ್ವೊ. ಮ್ಯಾನೇಜರನ್ನ ಅವುರ ಮನೆತನಕ ಬುಟ್ಟು, ನಾನು ಹೋಗಿ ಒಂದು ಟೀ ಕುಡುದು ನೋಡ್ತೀನಿ, ಎದೆ ಧುಸಕ್ಕಂತು. ಏನಾಗಿತ್ತಪ್ಪಾ ಅಂದ್ರೇ ಹಿಂದುಗಡೆ ಟೈರಿನ ಗಾಳಿ ಇಳಿದೋಗ್ಯದೆ! ಈಗೇನು ಮಾಡದಪ್ಪಾ ಅಂತ ಯೋಚನೆ ಬಂದುಬುಡ್ತು. ಸರಿ ಇನ್ನೇನು ಮಾಡದು ಅಂತ ಅಲ್ಲೊಂದು ಅಂಗಡಿ ಹತ್ರ ಬೈಕ್ ನಿಲ್ಲಿಸಿ ಬಸ್ಸಲ್ಲಿ ಹೋಗನ ಅಂತ ಯೋಚನೆ ಮಾಡ್ತ ತಿರಗ ಬಂದು ಟೀ ಕುಡಿತ ಇರಬೇಕಾದ್ರೆ, ಒಂದು ಚಿಕ್ಕ ಹುಡುಗ ಬಂದು 'ಸಾರ್ ಸಾರ್ ಇಲ್ಲಿ ಪಂಚರ್‍ರಾಕ್ತರೆ' ಅಂದ. ಸರಿ ಪಂಚರ್‍ರಾಕಿಸಿಗಂಡೇ ಹೋಗನ ಅಂತ ತೀರ್ಮಾನ ತಗೊಂಡು ಆ ಅಂಗಡಿ ಹತ್ರಕ್ಕೆ ಬೈಕ್ ತಳ್ಳಿಕಂಡೋದೆ. ಪಂಚರ್‍ರಾಗಿರೊ ಬೈಕ್ ತಳ್ಳದು ಅಂದ್ರೆ ದೆವ್ವನ್ನ ತಳ್ಳಿದಂಗೆ. ಅಂತೂ ತಳಿಕಂಡೋಗಿ ನಿಲ್ಲಿಸಿ ಈ ತರಕೀತರ ಅಂತ ಹೇಳಿ ಚಕ್ರ ಬಿಚ್ಚಿಸಿ ನೋಡಿದ್ರೆ ಅವುನು 'ಟ್ಯೂಬೇ ಹೋಗಿದೆ. ಹೊಸಾ ಟ್ಯೂಬಾಕಬೇಕು ಸಾರ್' ಅಂದ. ಆಗಿನ್ನೇನು ಮಾಡದು 'ಆಯ್ತು, ಹಾಕಪ್ಪ' ಅಂತ ಹೇಳಿದೆ. ದೇವರ ದಯದಿಂದ ಜೋಬಲ್ಲಿ ದುಡ್ಡೂ ಇತ್ತು, ಇಲ್ಲ ಅಂದಿದ್ರೂ ಹೋಗಿ ಮ್ಯಾನೇಜರ್ ಕೇಳಿ ಈಸಗೊಂಡು ಬರತಿದ್ದೆ. ಅಂತೂ ಹೊಸ ಟೂಬಾಕಿಸಿಕೊಂಡು, ಅವುನಿಗೆ ಕೊಡಬೇಕಾದ ದುಡ್ನು ಕೊಟ್ಟು, ಗಾಡಿ ಸ್ಟಾರ್ಟ್ ಮಾಡಿಕೊಂಡು ಬರ್ತಾಯಿರಬೇಕಾದ್ರೆ ನನ್ನದ್ರಿಗೆ ಒಬ್ಬ ಸೈಕಲ್ ಹೊಡಕಂಡು ಬರ್ತಾಯಿದ್ದ ಅವುನು ಬರೊ ಸ್ಪೈಲ್ ನೋಡೇ ಅನ್ನಕೊಂಡೆ ಈ ಮುಂಡೆ ಮಗ ಕುಡದಿರಬೌದು ಅಂತ. ಅಂಗನ್ನಕತ್ತಿದ್ದಂಗೇ ಬಂದು ನನ್ನ ಬೈಕಿಗೆ ಗುದ್ದೇಬುಟ್ಟ. ಅವನು ಬಿದ್ದು ಹೋದ, ನಾನೂ ಬಿದ್ದೆ ಬಿದ್ದು ನೋಡಿಕತ್ತೀನೀ ನನ್ನ ಎರಡು ಬೆರಳು ಕಟ್ಟಾಗಿದ್ದೋ" ಎಂದು ಗಣ್ಯರು ತಮ್ಮ ಎಡಗೈನ ಹಸ್ತ ಚಾಚಿ ಬೆರಳು ತೋರಿದರು. ಅವೇನೂ ಕಟ್ಟಾಗಿರಲಿಲ್ಲ, ಸರಿಯಾಗಿಯೇ ಇದ್ದೊ!

ಅವರು ನನ್ನ ಅನುಮಾನದ ಕಣ್ಣುಗಳನ್ನು ಗ್ರಹಿಸಿದರೂ ಏನೊ "ಹೊಲಗೆ ಹಾಕಿಸಿಕೊಂಡ ಮೇಲೆ ಸರಿಯಾದೊ ಅನ್ನಿ. ಆ ಸೈಕಲ್ಲಿನೋನಿಗೇನಾಗಿಕತ್ತಾ ಅಂದ್ರೆ" ಎಂದ ಗಣ್ಯರು ಬಿದ್ದುಬಿದ್ದು ನಕ್ಕರು. ಅವನಿಗೇನಾಗಿತ್ತು ಎಂಬುದು ನಮಗೆ ಗೊತ್ತಿಲ್ಲದಿದ್ದರಿಂದ ನಾವು ನಗಲಿಲ್ಲ. ಆದ್ದರಿಂದ ಅವರ ನಗು ನಿಲ್ಲಿಸಿ "ಆ ಸೈಕಲ್ಲಿನೋನಿಗೆ ಕೆಳಗಡೆ ಎರಡಲ್ಲು ಮುರುದೋಗಿದ್ದೊ. ಆದ್ರು ಆತ ನನಿಗೇ ಹೆಚ್ಚು ಪೆಟ್ಟಾಗ್ಯದೆ ಅಂತ ತಿಳಕೊಂಡು, ಸೈಕಲ್ಲನ್ನೂ ತಳಿಕೊಂಡು ಓಡಿದ ಅತ್ಲಗೆ. ಏನಾದ್ರು ಹೆಚ್ಚು ಕಮ್ಮಿಯಾಗಿದ್ರ ಅವತ್ತು ಪ್ರಾಣಕ್ಕೆ ಅಪಾಯಗೊ ಬಂದಿತ್ತು" ಎಂದು ಗಣ್ಯರು ತಮ್ಮ ಭೀಕರವಾದ ಅನುಭವ ಹೇಳಿದರು.

ಅಷ್ಟರಲ್ಲಾಗಲೇ ಎರಡು ಆರ್.ಸಿ. ಬಾಟಲು ಖಾಲಿಯಾಗಿದ್ದವು. ಚಿಕ್ಕ ಮೂಟೆಗಳಂತಿದ್ದ ಚೌಚೌ, ಕಡ್ಲೆಬೀಜ, ಅವಲಕ್ಕಿ ಮತ್ತು ಹೆಸರು ಬೇಳೆ ಖಾಲಿಯಾಗಿದ್ದವು. ಗಣ್ಯರ ಈ ಅನುಭವ ಕೇಳಲೋಸ್ಕರ ಸಾವಿರಾರು ರೂಪಾಯಿ ಖರ್ಚಾಗಿತ್ತು.

ಡ್ರಿಂಕ್ಸನ್ನು ಊಟವೆಂದೇ ಪರಿಗಣಿಸಿರುವ ಇವರು ಸೋಡ, ನೀರು ಬೆರೆಸಿಕೊಂಡು ಹೊಟ್ಟೆತುಂಬ ಕುಡಿದು ಇನ್ನೂ ಅಪರೂಪದ ಅನುಭವ ಹೇಳಿಕೊಳ್ಳಲು ತಯಾರಿ ನಡೆಸಿದ್ದರು. ಅಲ್ಲಿ ಜಿ.ಎಸ್.ಎಸ್. ನೆನಪಿನ ಸಭೆಯ ಚರ್ಚೆಗೆ ಯಾವ ಅವಕಾಶವೂ ಇರದಿದ್ದುದನ್ನು ಕಂಡ ನಾನು ಎದ್ದು ನಿಂತು "ಬರ್ತೀನಿ" ಎಂದೆ. ಎಲ್ಲಿಗೆ ಎಂದರು. "ಊಟಕ್ಕೆ" ಎಂದೆ.


"ಅಯ್ಯೋ ಊಟ ಇಲ್ಲಿಗೇ ಬರುತ್ತೆ ಬನ್ನಿ. ಇಲ್ಲಿ ಇನ್ನೊಂದು ಘಟನೆ ಹೇಳ್ತೀನಿ" ಎಂದ ಗಣ್ಯರು ಕೈಹಿಡಿದು ಎಳೆದರು. "ಇಲ್ಲ, ನಾನು ಡ್ರಿಂಕ್ಸ್ ಮಾಡಿದ ಮೇಲೆ ಮಟನ್ ತಿನ್ನಲೇಬೇಕು. ಹೋಗ್ತೀನಿ" ಎಂದೆ. "ಅದನ್ನೂ ತರಸಣ ಬನ್ನಿ" ಎಂದರು.

ಸುಳ್ಳ ಹೇಳಿ ಸಿಕ್ಕಿಕೊಂಡಿದ್ದೆ. ಆದರೆ ಸುಳ್ಳಿಗಿರುವ ಶಕ್ತಿಯೆಂದರೆ ಅದು ನಡೆಯದಿದ್ದರೆ, ಇನ್ನೊಂದು ತಯಾರಾಗತ್ತೆ. "ಗೆಳೆಯರೊಬ್ಬರು ಪೋರ್ಕ್ ಮಟನ್ ಇಟ್ಟುಕೊಂಡು ಕಾಯ್ತಾಯಿದ್ದಾರೆ ಸಾರ್. ಇವತ್ತು ಎಸ್ಟೇಟಲ್ಲಿ ಹೊಡೆದರಂತೆ. ಎಂಬತ್ತು ಕೆ.ಜಿ. ಇತ್ತಂತೆ. ಇವರ ಭಾಗಕ್ಕೆ ಇಪ್ಪತ್ತು ಕೆ.ಜಿ. ಬಂದಿದೆಯಂತೆ. ಆ ಸುದ್ದಿ ಕೇಳಿದಾಗ ಶುರುವಾದ ಲಾಲಾರಸ ಇನ್ನು ನಿಂತಿಲ್ಲ" ಎಂದೆ.

"ಅಂಗಾದ್ರೆ ಹೋಗಿ ಬನ್ನಿ. ಜಿ.ಎಸ್.ಎಸ್. ಕಾರ್ಯಕ್ರಮ ಹೇಗೆ ಮಾಡಬೇಕು ಅಂತ ಇನ್ನೊಂದು ದಿನ ಸೇರನ" ಎಂದರು. ಅಷ್ಟೇ ಸಾಕು ಎಂದು ಆ ಕತ್ತಲೆಯಲ್ಲಿ ವಿಶ್ವಮಾನವನಂತೆ ಬದುಕಿದ್ದ ಜಿ.ಎಸ್.ಎಸ್. ನಮ್ಮವರು ಎಂದುಕೊಂಡು ಗುಂಪಿನಿಂದ ಪರಾರಿಯಾದೆ.

● ಬಿ. ಚಂದ್ರೇಗೌಡ

ಜಿಎಸ್ಸೆಸ್ ಹಣತೆ



ಹಣತೆ ಹಚ್ಚಿದವರು ಅವರು
ಹೊಸ್ತಿಲಾಚೆಯ ಆವರಣದ
ಸಾಲುದೀಪದ ಅಲಂಕಾರಕ್ಕಲ್ಲ;
ಮನೆಯೊಳಗಿರುವವರು
ಪರಸ್ಪರ ಮುಖ ನೋಡಲೆಂದು
ಮುಖದಲ್ಲಿ ಪ್ರಜ್ವಲಿಸುವ ಕಣ್ಣಿನಲ್ಲಿ
ಸತ್ಯ ಹೊಳೆಯಲೆಂದು

ಹಣತೆ ಹಚ್ಚಿದರವರು
ಕಾವ್ಯವನು ಪಲ್ಲಕ್ಕಿಯಲಿ
ಮೆರೆಸುವ ಸ್ಥಾವರ ಸಂಪುಟವಾಗಿಸಲಿಕ್ಕಲ್ಲ;
ಹಾಡುಹಕ್ಕಿಯ ಕೊರಳುಲಿಯಲ್ಲಿ
ಕಾವ್ಯ ಅರ್ಥವಾಗಿ ಚಿಮ್ಮಲೆಂದು

ಹಣತೆ ಹಚ್ಚಿಯೇ ಹಚ್ಚಿದರು
ತೊರೆಗೆ ಕಡಲು ಸೇರುವ ಹಂಬಲ ಕಂಡಿತು
"ಸ್ತ್ರೀ" ಎಂಬ ಒಂದೇ ಅಕ್ಷರದ ನುಡಿಯಲ್ಲಿ
ಅವಳ ಆತ್ಮಸೌಂದರ್ಯ ಹೆಚ್ಚಿತು

ಇದು ಜಿಎಸ್ಸೆಸ್ ಹಚ್ಚಿದ ಹಣತೆ
ಹತ್ತಿರವಿದ್ದೂ ದೂರ ನಿಲ್ಲದಂತೆ
ಕಾಯುವ ಪ್ರೀತಿಯ ಕಣ್ಬೆಳಕಿನ ಕ್ಷಮತೆ....

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರಿಗೆ ಶ್ರದ್ಧಾಂಜಲಿ ಕವಿತೆ

■ ಜ್ಯೋತಿ ಗುರುಪ್ರಸಾದ್

ಲಜ್ಜಾಗೌರಿಯ ದರ್ಶನ



ದಾರ್ಶನಿಕ ಕಲಾವಿದ

ಎಂ.ಎಫ್.ಹುಸೇನ್ ನಮ್ಮ ಲಕ್ಷ್ಮೀ, ಸರಸ್ವತಿ ...ತ್ತು ದುರ್ಗೆಯರನ್ನು ನಗ್ನವಾಗಿ ಚಿತ್ರಿಸಿದರೆಂದು ...ಪರ ಸಂಘಟನೆಗಳು ಬೊಬ್ಬೆ ಹೊಡೆದು ಭಾರತದ ...ವಂತಿಕೆಯ ಅಭಿವ್ಯಕ್ತಿಯನ್ನು ಹರಾಜಿಗಿಟ್ಟಾಗಲೇ ...ತ್ತಯ್ಯು, ಈ ಬೊಬ್ಬೆ ಹೊಡೆವ ಸಂಘಟನೆಗಳು ದಡ್ಡ ...ಮಣಿಗಳು ಅಂತ. ಇವರಿಗೆ ಹಿಂದೂ ಧರ್ಮ ಎಂದು ...ಂ ಹರಿದುಕೊಳ್ಳುವುದಷ್ಟೇ ಗೊತ್ತೇ ಹೊರತು ಅದರ ...ಊಮುಂದೂ ಏನೂ ಗೊತ್ತಿಲ್ಲ ಅಂತ. ಹಿಂದೂ ... ಸನಾತನಧರ್ಮದ ಸನಾತನದಲ್ಲಿ ಏನಿದೆ ಎಂಬಷ್ಟು ... ಪರಿಚಯವೂ ಇಲ್ಲದ, ಅವಿವೇಕಿಗಳಿಗಾಗಿ ಹೇಗೆ ...ಯದ ಪಾಠ ಮಾಡಿಸುವುದು ಎಂಬುದೇ ನಮಗಿರುವ ...ಕ್ಕೆ ಪ್ರಶ್ನೆ.

...ಕಲೆಯೂ ಮತ್ತು ಆಧ್ಯಾತ್ಮಿಕತೆಯೂ ತೀರಾ ...ಹೊಕ್ಕಾಗಿದೆ. ಪೂರ್ವಾಗ್ರಹಪೀಡಿತವಾಗಿಲ್ಲದ ಕಲೆಯ ...ವ್ಯಕ್ತಿಯಲ್ಲಿ ಸಹಜವಾದ ದಾರ್ಶನಿಕತೆಯು ಬಿಂಬಿತ ...ುತ್ತದೆ. ಉಡುಪುಗಳನ್ನು ಹೊದ್ದ ದೇವತೆಗಳ ಕಾಸ್ಟ್ಯೂಮ್ ...ಲ್ಪನೆಯು ತೀರಾ ಬಾಲಿಶವೂ ಅಥವಾ ಪ್ರಾಥಮಿಕ ...ದ ತಿಳುವಳಿಕೆಯೂ ಆಗಿದ್ದು, ಅದರ ಮುಂದುವರಿದ ...ವಾದ ಅರಿವು ಸಾಧಕನನ್ನು ಅನಂತದ ಕಡೆಗೆ ...ಯ್ಯುತ್ತದೆ. ಅಂತಹ ಅನಂತತೆಯ ಅನುಭಾವದಲ್ಲಿ ...-ಅಶ್ಲೀಲಗಳ ಪರಿಕಲ್ಪನೆಗಳಿಲ್ಲ, ಧರ್ಮ ಮತ್ತು ಅವುಗಳ ನಂಬಿಕೆಗಳ ಸಿದ್ಧ ಮಾರ್ಗಗಳಿಲ್ಲ, ಸಂಪ್ರದಾಯ ಮತ್ತು ...ಣೆಗಳ ಗೊಂದಲಗಳಿಲ್ಲ, ಗೋಡೆಗಳಿಲ್ಲದ ಬಯಲು. ...ಕಾಶದಿಂದ ಮಹಾಕಾಶದ ಸಾಕ್ಷಾತ್ಕಾರ. ಅಲ್ಲಿ ಬರೀ ...ಭಾವ ಮಾತ್ರವೇ ಸಿದ್ಧಿಸಿದ್ದು, ಅದು ಸಾಹಿತ್ಯದಲ್ಲಿ, ...ಲ್ಲಿ, ವ್ಯಕ್ತಿಗತವಾದ ಬದುಕುಗಳಲ್ಲಿ ಅಭಿವ್ಯಕ್ತವಾಗುತ್ತದೆ. ...ಕಾಸ್ಟ್ಯೂಮ್‌ಗಳ ಆಚೆಗೆ ದೇವರನ್ನು ಆಳದಲ್ಲಿ ಕಾಣುವ ...ಭಾವದ್ದು ನಗ್ನವಾಗಿ ಒಬ್ಬ ಕಲಾವಿದನ ಕುಂಚದಲ್ಲಿ ...ವ್ಯಕ್ತವಾದರೆ, ಆತನು ನನ್ನ ಕಣ್ಣಿಗೆ ಒಬ್ಬ ದಾರ್ಶನಿಕ ...ವಿದನಾಗಿ ಕಾಣುತ್ತಾನೆ.

ನಗ್ನತೆ ಅಶ್ಲೀಲವಲ್ಲ

...ನಮ್ಮ ಹಿಂದೂ ಧರ್ಮದ ರಕ್ಷಕರಿಗೆ ಆಗಬೇಕಾಗಿರುವ ...ಮುಖ ಪಾಠವೆಂದರೆ 'ನಗ್ನತೆ ಅಶ್ಲೀಲವಲ್ಲ' ಎಂಬುದು. ...ಯನ್ನು ಅಶ್ಲೀಲ ಎಂದು ಕರೆಯುವುದಾದರೆ, ಶ್ರವಣ ...ಳದ ಗೊಮ್ಮಟೇಶ್ವರನಿಗೆ ಬಟ್ಟೆ ತೊಡಿಸಬೇಕಾ ...ದು. ಸಂಪೂರ್ಣ ವಿರಕ್ತಿಯ ಸಂಕೇತವಾಗಿ ಸಹಜ ...ನಲ್ಲಿ ದಿಕ್ಕುಗಳನ್ನೇ ಉಡುಪನ್ನಾಗಿ ಮಾಡಿಕೊಳ್ಳುವ ...ವಲ್ಲ, ಮೂರ್ತಿಯ ಪ್ರತಿಮೆಯು ದಿಗಂಬರನಾಗಿದ್ದರೆ, ಯೋನಿ, ಸ್ತನಗಳು ಮತ್ತು ಶಿಶ್ನಗಳ ಸಂಕೇತಗಳು ಇನ್ನೂ ಆಳಕ್ಕಿಳಿವ ತತ್ವಗಳಾಗಿವೆ. ನೈಸರ್ಗಿಕ ಶಕ್ತಿಗಳ, ಅಂತಹ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧನಗಳ ಮತ್ತು ಜನಪದರ ತಾತ್ವಿಕ ದರ್ಶನದ ಅಧ್ಯಯನದ ವಸ್ತುಗಳಾಗಿವೆ.

ಲಜ್ಜಾಗೌರಿಯ ಕ್ಷೇತ್ರಗಳು

ಹುಸೇನ್ ಚಿತ್ರಗಳ ಸಂಕಲನ ಶಾಲೆಯಲ್ಲಿ ಗಲಾಟೆ ಮಾಡುವ ತಂಟೆಕೋರ ಮಕ್ಕಳಾದ ಹಿಂದೂ ಧರ್ಮ ರಕ್ಷಕರನ್ನು ಶೈಕ್ಷಣಿಕ ಪ್ರವಾಸದ ದೆಸೆಯಿಂದ ಕೆಲವು ಜಾಗಗಳಿಗೆ ಕರೆದುಕೊಂಡು ಹೋಗುತ್ತೇನೆ. ಅವು ಯಾವುವೆಂದರೆ; ಆಂಧ್ರ ಪ್ರದೇಶದ ನಾಗಾರ್ಜುನಕೊಂಡ (1940ರಲ್ಲಿ ನಮಗೆ ಲಜ್ಜಾಗೌರಿಯ ಮೂರ್ತಿ ದೊರೆತ ಸ್ಥಳ), ಸಿದ್ಧನಕೊಂಡದ ಲಕುಲೀಶ ದೇವಾಲಯ, ಮೆಹಬೂಬ್‌ನಗರದ ಅಲಂಪುರದಲ್ಲಿರುವ ಬಾಲಬ್ರಹ್ಮನ ದೇವಾಲಯ, ಕರ್ನಾಟಕದ ಬಾದಾಮಿಯಲ್ಲಿರುವ ಮಹಾಕೂಟ, ಮಹಾರಾಷ್ಟ್ರದಲ್ಲಿರುವ ಒಸ್ಮನಾಬಾದ್, ಅಹ್ಮದ್ ನಗರ್, ಪೌನರ್, ರಾಂಟೋಲಾ, ಗುಲ್ಬರ್ಗ ಮತ್ತು ಬೆಳಗಾವಿಯ ಸನ್ನತಿ ಮತ್ತು ಸಿದ್ದೇಶ್ವರ ದೇವಾಲಯ, ಉತ್ತರ ಪ್ರದೇಶದಲ್ಲಿ ಭಿಟಾ ಮತ್ತು ಅಲಹಾಬಾದ್, ಮಧ್ಯಪ್ರದೇಶದಲ್ಲಿ ಸಾಂಚೀ, ರೇವಾ, ಬುಂಧೇಲ್ ಖಂಡ್, ತಮಿಳುನಾಡಿನ ತಂಜಾವೂರು; ಇನ್ನೂ ಹಲವಾರು ಸ್ಥಳಗಳಿಗೆ ಕರೆದೊಯ್ದು ನಿರ್ಲಜ್ಜ ಹಿಂದೂವಾದಿಗಳಿಗೆ ಲಜ್ಜಾಗೌರಿಯ ದರ್ಶನ ಮಾಡಿಸಬೇಕು.

ಯಾರಿದು ಲಜ್ಜಾಗೌರಿ?

ಮೇಲ್‌ಸ್ತರದ ಆರ್ಯಸಮಾಜದ ಶಿಷ್ಟ ಮತ್ತು ವೈದಿಕ ಸಂಪ್ರದಾಯಗಳಿಂದ ಕೊಂಚ ಹೊರತಾಗಿ, ಕೆಳಸ್ತರದ, ಹಳ್ಳಿಯ ಜನಪದರಿಗೆ ಹೆಚ್ಚು ಪರಿಚಿತಳು ಈ ಲಜ್ಜಾಗೌರಿ. ಅವಳು ಮೂಲ ಮಾತೃದೇವತೆ. ಜೀವವನ್ನು ಕೊಡುವವಳೂ, ಪೋಷಿಸುವವಳೂ ಮತ್ತು ಆ ಜೀವವನ್ನು ಹಿಂದಕ್ಕೆ ತೆಗೆದುಕೊಳ್ಳುವವಳು ಅವಳೇ ಆಗಿದ್ದಾಳೆ. ಬ್ರಹ್ಮ, ವಿಷ್ಣು ಮತ್ತು ಶಿವರ ಸೃಷ್ಟಿ, ಸ್ಥಿತಿ ಮತ್ತು ಲಯಗಳ ಪೌರಾಣಿಕ ಪರಿಕಲ್ಪನೆಗೂ ಪುರಾತನವಾದ ಮಾತೃಪ್ರಧಾನ ಮಾನ್ಯತೆ ಈ ಲಜ್ಜಾಗೌರಿಗಿದೆ.

ಆದ್ಯ ಶಕ್ತಿ (ಆದಿಶಕ್ತಿಯೆಂಬ ನೇರ ಪರಿಕಲ್ಪನೆ ಇದಾಗಿದ್ದು, ಅದಿತಿ ಎಂಬ ಋಗ್ವೇದದ ಮಾತೃ ಕಲ್ಪನೆಯೂ ಇದಾಗಿದೆ) ಭೂದೇವಿ (ಭೂಮಿ ತಾಯಿ), ರೇಣುಕಾ (ಮಣ್ಣಿನ ದೇವತೆ), ಎಲ್ಲಮ್ಮ (ಎಲ್ಲರ ತಾಯಿ), ಶಾಕಾಂಬರಿ (ಸಸ್ಯಜಗತ್ತಿನ ದೇವತೆ), ನಗ್ನಾಂಬಿಕಾ (ನಗ್ನಳಾಗಿರುವ ತಾಯಿ); ಈ ಎಲ್ಲರೂ ಲಜ್ಜಾಗೌರಿಯಿಂದ ಬಂದ ವಿವಿಧ ತಾತ್ವಿಕ ಪ್ರತಿಮೆಗಳು. ಈ, ಮಾತೃದೇವತೆಯ ದೈವತ್ವವು ಜೀವದ ಸೃಷ್ಟಿಯ ಜೊತೆಗೆ ನೇರ ಸಂಬಂಧ ಹೊಂದಿದ್ದು, ಫಲವತ್ತತೆಯೇ ಇಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಲಜ್ಜಾಗೌರಿಯ ಮೂರ್ತಿಯನ್ನು ನೋಡಿ; ಅಗಲಕ್ಕೆ ಮಡಿಸಿದ ಕಾಲುಗಳು, ತೆರೆದ ಯೋನಿ, ಎತ್ತಿರುವ ಕೈಗಳು, ವಿವಸ್ತ್ರವಾಗಿರುವ ಕುಚಗಳು, ತಲೆಯಿರುವ ಜಾಗದಲ್ಲಿ ಅರಳಿರುವ ಕಮಲ. ಇಲ್ಲಿನ ವಿಶಾಲಾರ್ಥದ ಸಂಕೇತವನ್ನು ಗಮನಿಸಿ. ಸ್ತ್ರೀಗೆ ತಾಯಿಯಾಗುವ ಗುಣವಿರುವುದರಿಂದಲೇ ಮಾತೃದೇವತೆಯಾಗಿ ಪರಿಗಣಿಸಿರುವುದು. ಹಾಗಾಗಿ, ಹೆಣ್ಣಿನ ಅಂಗಗಳಾದ ಯೋನಿ, ಹೊಟ್ಟೆ, ಸ್ತನಗಳೆಲ್ಲವೂ ಪೂಜ್ಯವೂ, ತಾತ್ವಿಕಾರ್ಥಗಳನ್ನು ಹೊಂದಿರುವ ಸಂಕೇತಗಳೂ ಆಗಿವೆ. ವೀರ್ಯದಾನವಾದ ನಂತರ ಪುರುಷನ ಕ್ರಿಯಾತ್ಮಕ ಹೊಣೆಗಾರಿಕೆ ಮುಗಿಯುವುದು. ಆದರೆ, ಯಾವ ಯೋನಿಯ ಮೂಲಕ ಜೀವದ ಬೀಜವು ಪ್ರವೇಶಿಸಿ, ಗರ್ಭದಲ್ಲಿ ಧಾತುವು ಜೈವಿಕವಾಗಿ ರೂಪುಗೊಳ್ಳುವ ಪ್ರಕ್ರಿಯೆಯು ನಡೆದು, ಅದೇ ಯೋನಿಯ ದ್ವಾರದಿಂದ ಜಗತ್ತಿನ ಬಯಲಿಗೆ ಬರುತ್ತದೆ. ಆ ಜೀವಕ್ಕೆ ತೆರೆದ ತೊಡೆಗಳ ಆಸರೆ ಮಾತ್ರವಲ್ಲದೇ ಸ್ತನಗಳು ಆಹಾರದ ಕೊಡಗಳಾಗುತ್ತವೆ. ಇಡೀ ವಿಶ್ವದಲ್ಲಿ ಜೀವವಿಕಾಸವಾಗುತ್ತಿರುವುದೇ ಹೆಣ್ಣಿಂದ. ಹಾಗಾಗಿ ಈ ಲಜ್ಜಾಗೌರಿಯಲ್ಲಿ ತರ್ಕ, ಲೆಕ್ಕಾಚಾರ, ಬುದ್ಧಿವಂತಿಕೆಯ ವಾದಗಳನ್ನು ಮಾಡುವ ತಲೆಯೆಂಬುದಿಲ್ಲ. ಬದಲಿಗೆ ಫಲವತ್ತತೆಯ ಮತ್ತು ವಿಕಾಸದ ಪ್ರಾಚೀನ ಸಂಕೇತವಾದ ಅರಳಿರುವ ತಾವರೆಯೇ ತಲೆಯ ಜಾಗದಲ್ಲಿದೆ. ಬಲಾತ್ಕಾರದಿಂದಾಗಲಿ, ಶೃಂಗಾರದಿಂದಾಗಲಿ ಹೆಣ್ಣು ಜೀವವನ್ನು ತಾಳಿ, ಪೋಷಿಸಬಲ್ಲಳು. ಅವಳಲ್ಲಿನ ಈ ಸ್ವೀಕೃತಿಯ ಭಾವವೇ ಮುಕ್ತವಾಗಿ ತೆರೆದಿರುವ ಕಾಲುಗಳನ್ನು ಸಂಕೇತಿಸುತ್ತದೆ. ಇದೇ ಭಂಗಿಯು ಮಗುವನ್ನು ಹೆರುವುದೂ ಆಗಿದೆ. ಇನ್ನೂ ಕೆಲವು ಕಡೆ ಉತ್ತಾನಪಾದ ಅಂದರೆ ಸಂಪೂರ್ಣವಾಗಿ ಕಾಲುಗಳನ್ನು ಮೇಲೆತ್ತಿಕೊಂಡಿರುವ ಶಿಲ್ಪಗಳೇ ಇವೆ. ಇನ್ನು ಯೋನಿಯಂತೂ ಪೂಜಾರ್ಹವಾದ ದ್ವಾರ ಅಥವಾ ಪೀಠ. ಶಾಕ್ತರು ಮತ್ತು ಇತರೇ ತಂತ್ರೋಪಾಸಕರು ಬಹು ಶ್ರದ್ಧೆಯಿಂದ ಯೋನಿ ಪೂಜೆಯನ್ನು ಮಾಡುತ್ತಾರೆ. ಹೀಗೆ ನಗ್ನಮೂರ್ತಿಯನ್ನು ಪೂಜ್ಯಭಾವದಿಂದ ಆರಾಧಿಸುವ ಸಂಸ್ಕೃತಿಯ ಹಿನ್ನೆಲೆಯುಳ್ಳ ಭಾರತೀಯರಲ್ಲಿ ದೇವತೆಯರ ನಗ್ನಚಿತ್ರವು ಅಶ್ಲೀಲವೆಂದೋ, ಅವಹೇಳನವೆಂದೋ ಬೊಬ್ಬೆ ಹೊಡೆಯುವ ಮಂದಿಯ ತಿಳಿವಳಿಕೆ ಇಲ್ಲದ ಅವಿವೇಕದ ಸ್ಥಿತಿಗೂ ಮತ್ತು ಅವರ ದೃಷ್ಟಿಯಂತೆ ಸೃಷ್ಟಿಯನ್ನು ನೋಡುವ ಪರಿಗೂ ಮರುಗುವುದೋ, ಭಾರತೀಯ ಆಧ್ಯಾತ್ಮ ಸಂಸ್ಕೃತಿಯ ಪರಿಚಯದ ಪಾಠ ಶಾಲೆ ತೆರೆಯುವುದೋ ತಿಳಿಯದು.

ಅದಿತಿ

ಅದಿತಿಯೇ ಆಕಾಶ, ಅವಳೇ ಗಾಳಿ, ಆದಿತಿಯೇ ಎಲ್ಲಾ ದೇವತೆಗಳು, ಅವಳು ತಾಯಿ, ತಂದೆ ಮತ್ತು ಮಗ, ಮುಂದೇನು ಹುಟ್ಟಲಿದೆಯೋ ಅದೂ ಕೂಡ ಅದಿತಿಯೇ ಎಂದು ಆದ್ಯಶಕ್ತಿಯನ್ನು ಋಗ್ವೇದದಲ್ಲಿ (1.89.10) ವಿವರಿಸುತ್ತಾರೆ. ಅದಿತಿ ಅಥವಾ ಲಜ್ಜಾಗೌರಿಯನ್ನು ಈಗಲೂ ಫಲವತ್ತಿನ ದೇವತೆಯೆಂದು ಪರಿಗಣಿಸಿ ಪೂಜಿಸುವುದಾದರೂ, ಅವಳಿಗಿರುವ ವಿವರಣೆ ಮತ್ತು ಸೂಚಿತಾರ್ಥಗಳನ್ನು ಗಮನಿಸಿದರೆ ಅವಳನ್ನು ಅಷ್ಟಕ್ಕೇ ಸೀಮಿತಗೊಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಸಿಂಧೂ ಬಯಲಿನ ಹರಪ್ಪ ನಾಗರಿಕತೆ ಅಥವಾ ಸರಸ್ವತಿ ಬಯಲಿನ ನಾಗರಿಕತೆಯ ಮೂಲಕ್ಕೆ (ಕ್ರಿಸ್ತಪೂರ್ವ 2500-1500) ಇವಳನ್ನು ಒಯ್ಯಬಹುದು. ಉತ್ಖನನ ಸಮಯದಲ್ಲಿ ದೊರಕಿರುವ ನಗ್ನ ಸ್ತ್ರೀಮುದ್ರೆಗಳಲ್ಲಿ ತಲೆಕೆಳಕಾಗಿ ಮತ್ತು ಕಾಲುಗಳು ಮೇಲಾಗಿ ಚಿತ್ರಿಸಿದ್ದು, ಗರ್ಭದಿಂದ ಮಗುವನ್ನು ಹೊರತರುತ್ತಿರುವ ಮಾತೃದೇವತೆಯ ಪ್ರತಿಮೆಯಾಗಿದ್ದು, ಇದರ ಮುಂದುವರಿಕೆಯ ಪರಿಕಲ್ಪನೆ ಋಗ್ವೇದದ ಅದಿತಿ ಹಾಗೂ ಜನಪದರ ಲಜ್ಜಾಗೌರಿಯಾಗಿರಬಹುದೆಂದು ಧಾರ್ಮಿಕ ಚರಿತ್ರಾಕಾರ ಎನ್.ಎನ್.ಭಟ್ಟಾಚಾರ್ಯ ಅಭಿಪ್ರಾಯಪಡುತ್ತಾರೆ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವೇದಪೂರ್ವ ಭಾರತದ ಧಾರ್ಮಿಕತೆಯಲ್ಲಿ ಹರಪ್ಪನ್ ಸಂಸ್ಕೃತಿಯ 'ಮಗ್ನಾ ಮಾಟರ್' (ಮಹಾ ತಾಯಿ)ಯ ಪರಿಕಲ್ಪನೆಯೇ ಮುಂದಿನ ವೇದಕಾಲದಲ್ಲಿ ಅದಿತಿಯಾಗಿ ಮುಂದುವರಿದಿದ್ದು, ಇದು ಫಲವತ್ತಿನ ಮತ್ತು ಸಮೃದ್ಧಿಯ ಸಂಕೇತಗಳಾಗಿದ್ದವೆಂದು ಅವರು ಅಭಿಪ್ರಾಯ ಪಡುತ್ತಾರೆ. ಅಷ್ಟೇ ಅಲ್ಲ, ಹರಪ್ಪನ್ ಸಂಸ್ಕೃತಿಯಲ್ಲಿ ಮಹಾತಾಯಿಯ ಪರಿಕಲ್ಪನೆಯು ಪ್ರಕೃತಿಯಲ್ಲಿ ಸಂತಾನೋತ್ಪತ್ತಿಯ ಶಕ್ತಿಯ ಪ್ರತಿಮೆಯೂ ಆಗಿತ್ತು. ಹಾಗಾಗಿ, ಅದಿತಿಯೇ ವೇದಕಾಲದಲ್ಲಿಯೂ ಎಲ್ಲರ ತಾಯಿ ಎಂದು ಮಾನ್ಯ ಮಾಡಲಾಗಿತ್ತು.

ನಂತರ ಆರರಿಂದ ಹನ್ನೆರಡನೆಯ ಶತಮಾನದ ಮಧ್ಯದಲ್ಲಿ ಅದಿತಿ ಅಥವಾ ಲಜ್ಜಾಗೌರಿಯ ಆರಾಧನೆಯು ವ್ಯಾಪಕವಾಗಿರುವುದು ಗಮನಕ್ಕೆ ಬರುತ್ತದೆ. ಲಜ್ಜಾಗೌರಿಯ ಆಳೆತ್ತರದ ವಿಗ್ರಹಗಳಿಂದ ಹಿಡಿದು ಸಣ್ಣ ಸಣ್ಣ ಪ್ರಮಾಣದ ಸುಟ್ಟ ಮಣ್ಣಿನ ಪ್ರತಿಮೆಗಳವರೆಗೂ ಉತ್ಖನನಗಳಲ್ಲಿ ದೊರಕಿವೆ.

ಸಾಮಾನ್ಯವಾಗಿ ಲಜ್ಜಾಗೌರಿಯ ಪ್ರತಿಮೆಗಳು ನದಿ ಬಯಲುಗಳಲ್ಲಿ, ಕೆರೆ, ಬಾವಿ ಮತ್ತು ನೀರಿನ ಹಳ್ಳಗಳ ದಡಗಳಲ್ಲಿ ದೊರಕಿವೆ. ಇದರಿಂದ ನಮಗೆ ಸ್ಪಷ್ಟವಾಗುವುದೆಂದರೆ, ಫಲವತ್ತಿನ, ಸಮೃದ್ಧಿಯ, ಸೃಷ್ಟಿಯ ಸ್ತ್ರೀತತ್ವದ ಅಧಿದೇವತೆಯಾಗಿ ಅವಳನ್ನು ಪೂಜಿಸಿರುವುದು.

ನಂತರ ಹದಿಮೂರನೆಯ ಶತಮಾನಗಳಿಂದೀಚೆಗೆ, ಮುಸ್ಲಿಂ ರಾಜಾಡಳಿತಗಳು ಆರಂಭವಾದ ಮೇಲೆ ಲಜ್ಜಾಗೌರಿಯ ಮೂರ್ತಿ ಪೂಜೆಯು ಕ್ಷಯಿಸಲಾರಂಭಿಸಿರಬೇಕು. ಏಕೆಂದರೆ, ಮುಸ್ಲಿಂ ಆಡಳಿತಗಾರರಿಗೆ ಮೂರ್ತಿ ಪೂಜೆಗಳು, ಅದರಲ್ಲೂ ನಗ್ನವಾದ ಹೆಣ್ಣಿನ ವಿಗ್ರಹಗಳನ್ನು ಸಾರ್ವಜನಿಕವಾಗಿ ಪೂಜಿಸುವುದು ಸಮ್ಮತವಾಗಿರಲಿಲ್ಲ ಎಂದು ಕೆಲವು ಅಧ್ಯಯನಕಾರರು ಅಭಿಪ್ರಾಯಪಡುತ್ತಾರೆ.

ಪುರೋಹಿತರ ಅಜ್ಞಾನದಿಂದ ಮತ್ತು ಅವೈಚಾರಿಕ ಶಿಷ್ಟ ಧೋರಣೆಯಿಂದಾಗಿ ಆದ್ಯಶಕ್ತಿಯ ಲಜ್ಜಾ ಗೌರಿಯ ಪ್ರತಿಮೆಯು ಕಾಲುಗಳನ್ನು ಮಡಿಸಿತು, ಬಟ್ಟೆ ತೊಟ್ಟುಕೊಂಡಿತು, ರವಿಕೆಯನ್ನೂ ಕಟ್ಟಿಕೊಂಡಿತು, ಮುಖವನ್ನೂ ಹೊಂದಿತು, ಸಂಪೂರ್ಣವಾಗಿ ಅದರ ಮೂಲ ಸಂಕೇತವನ್ನೇ ಮರೆಮಾಚಿತು, ನಮ್ಮ ಪೀಳಿಗೆಗೆ ಅದು ಗೊತ್ತೇ ಇಲ್ಲದಂತೆ ಆಯಿತು.

ಲಜ್ಜಾಗೌರಿಯ ಪ್ರತಿಮೆಯು ಕುಂಡಲಿನೀ ಶಕ್ತಿಯ ಸಂಚಾರ ಮಾರ್ಗ ಸಂಕೇತವಾಗಿಯೂ ವ್ಯಾಖ್ಯಾನಗಳನ್ನು ನೀಡುವುದುಂಟು. ಮೂಲಾಧಾರ ಚಕ್ರದ ಸ್ಥಾನವು ಲೈಂಗಿಕ ಪ್ರದೇಶದಲ್ಲಿದ್ದು ಅಲ್ಲಿಂದ ಮೇಲ್ಮುಖವಾಗಿ ಸಂಚರಿಸುವ ಶಕ್ತಿಯು ಶಿರದ ಮೇಲಿನ ಸಹಸ್ರಾರ ಚಕ್ರ(ಪದ್ಮದ ಸಂಕೇತ)ದಲ್ಲಿ ಕೊನೆಗೊಳ್ಳುತ್ತದೆ ಎಂದು ಹೇಳುವುದಾದರೂ ಅದಕ್ಕೆ ಅಷ್ಟೊಂದು ಸ್ಪಷ್ಟ ನಿರೂಪಣೆಗಳು ಸಿಗುವುದಿಲ್ಲ.

ಲಜ್ಜಾಗೌರಿಯು ಸೃಷ್ಟಿಯ ಸ್ತ್ರೀತತ್ವದ ದೇವತೆ ಮಾತ್ರವಲ್ಲದೇ ಮಾತಂಗಿ; ಪಾರ್ವತಿಯ ಕೆಳಜಾತಿಯ ಹೆಣ್ಣಿನ ಅಭಿವ್ಯಕ್ತಿಯೂ, ರೇಣುಕಾ; ಮಾತೃಪ್ರಧಾನದ ಅವಸ್ಥಿತಿಯನ್ನೂ ಸೂಚಿಸುವ ಕಥೆಗಳಿಗೂ ಬೆಸೆದುಕೊಳ್ಳುವುದನ್ನು ಮುಂದಿನ ಲೇಖನಗಳಲ್ಲಿ ನೋಡಿ. ●










ಗುರುವಿನ ಗುರು ನಿಧನ



ನಾನಾಗ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳ ಬಳಿ ಹೋಗುತ್ತಿದ್ದೆ. ಏಕೆಂದರೆ ಅವರು ಆಯುರ್ವೇದ ಪಂಡಿತರಾಗಿದ್ದು ಔಷಧಿ ಕೊಡುತ್ತಿದ್ದರು. ನನಗೆ ಚರ್ಮದ ಸಮಸ್ಯೆಯಿದ್ದುದರಿಂದ ಹೋಗಿ ಔಷಧಿ ತರುತ್ತಿದ್ದೆ. ಮೊದಲ ಬಾರಿ ಹೋದಾಗ ಅವರು "ಯಾವ ಊರು?" ಎಂದು ಕೇಳಿದರು. ನಾನು ಅಜ್ಜಂಪುರ ಎಂದೆ. "ಅಲ್ಲಿ ನಮ್ಮ ಗುರುಗಳಿದ್ದಾರೆ, ನೋಡಿದ್ದೀಯಾ" ಎಂದರು. "ಇಲ್ಲ ಸ್ವಾಮಿ" ಎಂದೆ. "ರಾಜಗೋಪಾಲ ಅಂತ ಇದಾನೆ. 'ಗೀತಾಮಿತ್ರ' ಅನ್ನುವ ಪತ್ರಿಕೆ ಸಂಪಾದಕ. ನಾನು ಸನ್ಯಾಸಿಯಾಗಿ ಗೆಲ್ಲಕ್ಕಾಗದೇ ಇರೋದನ್ನೆಲ್ಲಾ ಆತ ಗೆದ್ದಿದ್ದಾನೆ. ನಮ್ಮ ನಡುವಿನ ಮನುಷ್ಯ ಇಷ್ಟು ಒಳ್ಳೆಯವನಾಗಿ ಬದುಕೋದಕ್ಕೆ ಸಾಧ್ಯವೇ ಅಂತ ನನಗೇ ಅಚ್ಚರಿ ಹುಟ್ಟಿಸಿದ್ದಾನೆ. ಅವನನ್ನು ಭೇಟಿ ಮಾಡು" ಎಂದು ಹೇಳಿ "ದಿನಕ್ಕೆ ಕಾಫಿ ಎಷ್ಟು ಕುಡಿತಿ?" ಎಂದರು. "ಮೂರು ನಾಲ್ಕು ಸತಿ ಕುಡಿತಿನಿ ಸ್ವಾಮಿ" ಎಂದೆ. "ದಡ್ಡ, ನೀನು ಕನಿಷ್ಠ ಒಂದು ಬಕೆಟ್ ಕುಡಿಬೇಕು. ಇಲ್ಲ ಅಂದ್ರೆ ಒಂದು ತೊಟ್ಟಿ ತುಂಬ ತುಂಬಿಕೊಂಡು ಮುಳುಗಿಬುಡಬೇಕು" ಎಂದು ಹಾಸ್ಯ ಮಾಡಿ ಪಥ್ಯ ಇರಬೇಕಾದ ಒಂದು ಪಟ್ಟಿಕೊಟ್ಟು ಕಳಿಸಿದರು. ಆ ಪಟ್ಟಿಯಲ್ಲಿನ ನಿಷಿದ್ಧ ಪದಾರ್ಥಗಳನ್ನು ಓದಿದ ಮೇಲೆ ಬದುಕಿರುವುದಕ್ಕಿಂತಲೂ ಸಾಯುವುದೇ ಮೇಲು ಅನ್ನಿಸಿತು.

ಅಜ್ಜಂಪುರಕ್ಕೆ ಬಂದಮೇಲೆ ರಾಜಗೋಪಾಲ್ ಅವರನ್ನು ನೋಡಬೇಕೆನ್ನಿಸಿತು. ಸುಬ್ರಹ್ಮಣ್ಯ ಹಾರ್ಡ್‌ವೇರ್ ಎಂಬ ಅಂಗಡಿಯ ಹತ್ತಿರ ಕುಳಿತಿದ್ದರು. ಒಬ್ಬ ಆರೆಸ್ಸೆಸ್ ಸಂಚಾಲಕ ಅವರ ಸಹಾಯಕನಾಗಿ ಕುಳಿತಿದ್ದ. ಹೋಗಿ ಮಲ್ಲಾಡಿಹಳ್ಳಿ ಸ್ವಾಮಿ ಹೇಳಿದ ಸಂಗತಿ ಹೇಳಿದೆ. ರಾಜಗೋಪಾಲ್ ನಕ್ಕು "ರಾಘವೇಂದ್ರ ಸ್ವಾಮಿಗಳು ನಮ್ಮೂರಿನಲ್ಲೇ ಆಶ್ರಮ ಸ್ಥಾಪಿಸಲು ಬಂದಿದ್ದರು. ಆದರೆ ಇಲ್ಲಾಗಲೇ ಶಂಕರಾನಂದ ಸ್ವಾಮಿಗಳು ಆಶ್ರಮ ಸ್ಥಾಪಿಸಿದ್ದರಿಂದ ಮಲ್ಲಾಡಿಹಳ್ಳಿಗೆ ಹೋದರು." ಎಂದು ನಕ್ಕರು. ರಾಜಗೋಪಾಲ್ ಗಾಂಧಿವಾದಿ, ಆದರೆ ಸುತ್ತಲೂ ಇದ್ದವರು ಕಳ್ಳರು. ಹಾಗಾಗಿ ಮತ್ತೆ ನಾನು ಆ ಕಡೆ ಹೋಗಲಿಲ್ಲ.

ಈ ರಾಜಗೋಪಾಲ್ ಮನೆಗೆ ಒಂದು ಇತಿಹಾಸವಿದೆ. ಅಜ್ಜಂಪುರಕ್ಕೆ ಎಲ್ಲಾ ವಿಧದಲ್ಲೂ ಶ್ರೀಮಂತರಾಗಿದ್ದ ಸುಬ್ರಹ್ಮಣ್ಯ ಶೆಟ್ಟರು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರು. ಅವರು ಜೈಲಿನಲ್ಲಿದ್ದಾಗ ಮೋಹನದಾಸ ಎಂಬ ಏಕಮಾತ್ರ ಮಗುವಿಗೆ ಕಾಯಿಲೆಯಾಯಿತು. ಮಗು ನೋಡಿ ಬರಲು ಸರ್ಕಾರ ಪೆರೋಲ್ ಮೇಲೆ ಬಿಡುಗಡೆ ಮಾಡಿತು. ಆದರೆ "ನನ್ನ ಮಗನಿಗಿಂತಲೂ ನನಗೆ ದೇಶವೇ ಮುಖ್ಯ" ಎಂದ ಸುಬ್ರಹ್ಮಣ್ಯ ಶೆಟ್ಟರು ಮಗು ನೋಡಲು ಹೋಗಲಿಲ್ಲ. ಆದರೆ ಮಗು ಅಪ್ಪನನ್ನು ಕನವರಿಸುತ್ತ ಕೊನೆಯುಸಿರೆಳೆಯಿತು. ಸುಬ್ರಹ್ಮಣ್ಯ ಶೆಟ್ಟರು ಗಾಂಧೀಜಿ ಮೇಲಿನ ಅಭಿಮಾನದಿಂದ ಮಗನಿಗೆ ಮೋಹನದಾಸ ಎಂದು ಹೆಸರಿಟ್ಟಿದ್ದರು. ಅಂತಹ ಮಗನ ಸಾವಿಗೂ ಅವರು ಹೋಗಲಿಲ್ಲ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಶ್ರೀರಂಗಪಟ್ಟಣದ ಜೈಲಿನಿಂದ ಬಿಡುಗಡೆಯಾಯಿತು. ಊರಿಗೆ ಬಂದವರೆ ಗಾಂಧೀಜಿ ದೇಶ ಕಟ್ಟಲು ಹೇಳಿದ್ದ ಮಾರ್ಗದಲ್ಲಿ ಕಾರ್ಯಪ್ರವೃತ್ತರಾದರು. ಊರಿಗೆ ಆಧುನಿಕ ರೀತಿ ಮುನಿಸಿಪಾಲಿಟಿ ಕಟ್ಟಡ ಕಟ್ಟಿ ಮಹಾರಾಜರನ್ನು ಕರೆಸಿ ಉದ್ಘಾಟಿಸಿದರು. ದನಗಳ ಜಾತ್ರೆ ಆರಂಭಿಸಿದರು. ಸಂತೆ ನಡೆಯುವಂತೆ ಮಾಡಿದರು. ಜೂನಿಯರ್ ಕಾಲೇಜ್ ಬಂತು. ಕಲಾಶ್ರೀ ರಂಗಮಂದಿರ ರೆಡಿಯಾಯಿತು. ಅತ್ತ ಆಶ್ರಮದಲ್ಲಿ ಗೀತಾ ಜಯಂತಿ ನಡೆಯಿತು. ಇಡೀ ಊರೇ ದೇಶಕಟ್ಟುವ ಸಂಭ್ರಮದಲ್ಲಿ ಮುಳುಗಿತು.

ಇಪ್ಪತ್ತೈದು ವರ್ಷ ಮುನಿಸಿಪಲ್ ಅಧ್ಯಕ್ಷರಾಗಿದ್ದ ಅವರು ನಿಜಲಿಂಗಪ್ಪನವರಿಗೆ ಆಪ್ತರಾಗಿದ್ದರು. ಹಾಗಾಗಿ ಸರ್ಕಾರದ ಮಟ್ಟದ ಎಲ್ಲ ಕೆಲಸಗಳೂ ಸರಾಗವಾಗಿ ನಡೆಯುತ್ತಿದ್ದವು. ಅವರು ಜೈಲಿನಿಂದ ಹೊರಬಂದನಂತರ ಹುಟ್ಟಿದ್ದ ರಾಜಗೋಪಾಲ್ ದಶರಥನ ಮಗ ಶ್ರೀರಾಮಚಂದ್ರನಂತೆ ಬೆಳೆದ. ದಾವಣಗೆರೆಗೆ ಹೋಗಿ ಡಿಗ್ರಿ ಮುಗಿಸಿ ಬಂದನಂತರ ಮಗನಿಗೆ ಮದುವೆ ಮಾಡಿದ ಸುಬ್ರಹ್ಮಣ್ಯ ಶೆಟ್ಟರು ಕೊನೆಯುಸಿರೆಳೆದರು. ಅಲ್ಲಿಗೆ ಒಂದು ಯುಗ ಮುಗಿದಂತಾಯ್ತು.

ರಾಜಗೋಪಾಲ್ ಮೇಲೆ ಬಿದ್ದ ಜವಾಬ್ದಾರಿಯಲ್ಲಿ 'ಗೀತಾಮಿತ್ರ'ದ ಸಂಪಾದಕತ್ವವೂ ಒಂದು. ಗಾಂಧೀಜಿಗೆ ತಾಯಿಯಾಗಿದ್ದ ಈ ಭಗವದ್ಗೀತೆ ರಾಜಗೋಪಾಲ್‌ಗೆ ತಂದೆಯಾಗಿ ತಮ್ಮನ್ನು ಸರ್ವರೀತಿಯಲ್ಲೂ ಮುನ್ನಡೆಸುವ ಸಂಜೀವಿನಿಯಾಗಿ ಕಂಡಿತು. ಅಂಗಡಿಯ ಸಾಮಾನುಗಳು ಮೇಲೆ ಸಾಗಾಣಿಕೆ ವೆಚ್ಚ ಮುನಿಸಿಪಲ್ ಟ್ಯಾಕ್ಸು ಇತ್ಯಾದಿ ನಮೂದಿಸಿ ತಮ್ಮ ಲಾಭ ಇಷ್ಟು ಎಂದು ಪ್ರಾಮಾಣಿಕವಾಗಿ ವ್ಯಾಪಾರ ಮಾಡುತ್ತಿದ್ದರು. ಜನ ನಕ್ಕು ಚೌಕಾಸಿ ಮಾಡುತ್ತಿದ್ದರು. ಆಳುಗಳು ಕದಿಯುತ್ತಿದ್ದರು.

ಅಂಗಡಿ ಲಾಭವೇ 'ಗೀತಾಮಿತ್ರ'ಕ್ಕೆ ಹೋಗತೊಡಗಿತು. ಈ ನಡುವೆ ಅವರಪ್ಪ ಕೊಂಡು ಕೊಟ್ಟಿದ್ದ ಪ್ರೆಸ್ಸನ್ನೇ ಶೆಟ್ಟಿಯೊಬ್ಬ "ಇದು ನನ್ನ ಸ್ವಂತದ್ದು" ಎಂದ. ಯಾರೊ ಮನೆ ಕಟ್ಟಿಕೊಂಡ ಜಾಗವನ್ನು "ಇದು ನಮ್ಮದೇ ಜಾಗ" ಎಂದರು. ಆ ಮನೆಯ ಜೀವನ ನಡೆಯಲು ಒಂದೊಂದೇ ಆಸ್ತಿಗಳು ಕೊಳ್ಳುವವರು ಹೇಳಿದ ರೇಟಿಗೆ ಮಾರಾಟವಾದವು. ಅಂದರೆ ಕೋಟ್ಯಂತರ ರೂಪಾಯಿ ಆಸ್ತಿ ಲಕ್ಷಾಂತರ ರೂ.ಗಳಿಗೆ ಮಾರಾಟವಾದವು. ಆಗಲೂ ಕೂಡ ರಾಜಗೋಪಾಲ್ ಮುಖದಲ್ಲಿ ಗೀತೆಯ ಕೃಷ್ಣನ ಪ್ರಸನ್ನವಾದ ನಗುವಿತ್ತೇ ಹೊರತು ಕೈಬಿಟ್ಟ ಆಸ್ತಿಗಳ ಬಗ್ಗೆ ಕಿಂಚಿತ್ತೂ ಪಶ್ಚಾತ್ತಾಪವಿರಲಿಲ್ಲ.

ಅವರ ಬಳಿ ಲಂಕೇಶ್ ಪತ್ರಿಕೆಯ ಏಜೆನ್ಸಿಯೂ ಇತ್ತು. ಲಂಕೇಶರು ಪ್ರಗತಿರಂಗ ಸ್ಥಾಪಿಸಿದಾಗ ಅದರ ಮೊದಲ ಸಭೆ ತಾಳೀಕಟ್ಟೆಯಲ್ಲಿತ್ತು. ನಾವೆಲ್ಲ ಹೊಳಲ್ಕೆರೆಯ ಬಳಿ ಲಂಕೇಶರನ್ನು ಬರಮಾಡಿಕೊಳ್ಳುವ ಗುಂಪಿನಲ್ಲಿ ರಾಜಗೋಪಾಲ್ ಕೂಡ ಇದ್ದರು. "ಅಲ್ಲಾ ಬರೆದುಕೊಂಡು ಇರಬೇಕಾದ ಲಂಕೇಶರು ಹೀಗೆ ಬೀದಿಮೇಲೆ ಬಂದರಲ್ಲ, ಇವರ ಭವಿಷ್ಯವೇನು?" ಎಂದು ತಮ್ಮ ಭವಿಷ್ಯ ಬಿಟ್ಟು ಚಿಂತಿಸಿದ್ದರು!

ಅಜ್ಜಂಪುರ ಬಿಟ್ಟು ಶಿವಮೊಗ್ಗಕ್ಕೆ ಹೋದರು. ಅಲ್ಲಿ ಒಂದೆರಡು ಮನೆಕೊಂಡು ಮಾರಿದರು. ಐದಾರು ಮಳಿಗೆ ಕಟ್ಟಿಸಿ ಅದನ್ನೂ ಮಾರಿದರು. ಬದುಕಲು ಯಾವುದೇ ದುಡಿಮೆಯಿಲ್ಲದ್ದರಿಂದ ಕೊಂಡು ಮಾರಿದ ಲಾಭದಲ್ಲೇ ಬದುಕುವಂತಾಯ್ತು, ತಮ್ಮ ಅನಾರೋಗ್ಯದ ಸ್ಥಿತಿಯಲ್ಲೂ ಸೈಕಲ್ ಮೇಲೆ ತಿರುಗುತ್ತ ಲಂಕೇಶ್ ಪತ್ರಿಕೆ ಏಜೆನ್ಸಿ ನಡೆಸುತ್ತಿದ್ದರು.


ಈ ನಡುವೆ 'ಗೀತಾಮಿತ್ರ' ಪತ್ರಿಕೆ ಸಂಪಾದಕತ್ವವನ್ನು ಸಹೋದರಿಗೆ ವಹಿಸಿ ಬೆಂಗಳೂರಿಗೆ ಹೋದರು. ಒಳ್ಳೆಯ ಕೆಲಸದಲ್ಲಿದ್ದ ಮಗ ಕರೆಸಿಕೊಂಡ. ಈ ನೆಲವನ್ನೇ ಬಿಟ್ಟ ರಾಜಗೋಪಾಲ್ ಅಂತರಿಕ್ಷದ ಅಪಾರ್ಟ್‌ಮೆಂಟ್‌ನಲ್ಲಿದ್ದರು. ಅವರು ತಲುಪಿದ ಹಲವಾರು ಮಜಲುಗಳು ಅವರನ್ನು ಏನೂ ಘಾಸಿಗೊಳಿಸಿದಂತೆ ಕಾಣಲಿಲ್ಲ, ಏಕೆಂದರೆ ಅವರು ಎಲ್ಲವನ್ನು ಕಳೆದುಕೊಂಡು ಬದುಕುವ ಶಕ್ತಿ ಗಳಿಸಿದ್ದರು.

ಅವರ ಧರ್ಮಪತ್ನಿಯದು ಲೌಕಿಕ ಬದುಕಾದರೆ ಇವರದ್ದು ಆಧ್ಯಾತ್ಮ ಜೀವನ. ಅದರಲ್ಲವರು ಸಾಧಿಸಿದ್ದೇನೆಂದರೆ ಇನ್ನೊಬ್ಬರ ವ್ಯಕ್ತಿತ್ವವನ್ನು ಗೌರವಿಸುವುದು ಮತ್ತು ಸಹಿಸಿಕೊಳ್ಳುವುದು. ಅವರ ಒಳಪ್ರಪಂಚ ತುಂಬ ವಿಶಾಲವಾಗಿತ್ತು, ಅದಕ್ಕೆ ಸ್ವಲ್ಪ ಸಿನಿಕರಂತಿದ್ದ ಮಲ್ಲಾಡಿಹಳ್ಳಿ ಗುರುವೇ ರಾಜಗೋಪಾಲರನ್ನು ಸ್ವೀಕರಿಸಿದ್ದರು ಅನ್ನಿಸುತ್ತದೆ.

■ ಬಿ. ಚಂದ್ರೇಗೌಡ

ದೇವರು ಮತ್ತು ಭಕ್ತಿ ನಂಬಿಕೆಗಳ ಪೊಳ್ಳು ಮಾನದಂಡ

ಮಿತ್ರ ಇಸ್ಮತ್ ಅವರು ಬಿಚ್ಚಿಟ್ಟ ಜೋತಿಷ್ಯ ಶಾಸ್ತ್ರದ ಟೊಳ್ಳುತನದ ಕತೆ ಹಾಗು ಯೋಗೀಶ್ ಮಾಸ್ತರರು ಹೇಳಿಕೊಂಡ ಮಹಾನ್ ವ್ರತಧಾರಿಣಿಯಾಗಿದ್ದೂ ಕೂಡ ನರಕಯಾತನೆ ಅನುಭವಿಸಿದ ಅವರ ಚಿಕ್ಕಮ್ಮನ ದುರಂತ ಕತೆ ಓದಿ ಇದನ್ನು ಬರೆಯುತ್ತಿದ್ದೇನೆ. ಭವಿಷ್ಯಕಾರರು ಅದರಲ್ಲೂ ಟಿವಿ ಜೋತಿಷಿಗಳ ಬಂಡವಾಳವೇ ಮಾತುಗಾರಿಕೆ. 2x2 ಅಂದ್ರೆ ನಾಲ್ಕೇ ಎನ್ನುವ ರೀತಿಯಲ್ಲಿ ಸಬೂತ್ ಸಲೀಸಾಗಿ ನಿಮ್ಮ ಸಮಸ್ಯೆಗೆ ಒಂಭತ್ತು ಮಂಗಳವಾರ ಇಂಥಾ ದೇಗುಲಕ್ಕೆ ಹೋಗಿ ಇಂಥಾ ಪೂಜೆ ಮಾಡಿ ಎಲ್ಲಾ ಸರಿಹೋಗುತ್ತದೆ ಎಂದು ಯಾವ ಗೊಂದಲಗಳಿಲ್ಲದೇ ಅತ್ಯಂತ ಸ್ಪಷ್ಟತೆಯಿಂದ ಹೇಳಿಬಿಡುತ್ತಾರೆ. (ಸಚ್ಚಿಬಾಬು ಎನ್ನುವ ಅ-ವೈಜ್ಞಾನಿಕ ಜೋತಿಷಿಯಂತೂ ಒಮ್ಮೆ ಜಗತ್ತಿನ ಲಕ್ಷಾಂತರ ಪೋಲಿಸ್ ಇಲಾಖೆಯ ನೌಕರರ ಕೆಲಸವೇ ಕೈಬಿಟ್ಟು ಹೋಗುವಂತಹ ಖತರ್‌ನಾಕ್ ಐಡಿಯಾ ಕೊಟ್ಟಿದ್ದ. ಪ್ರತಿದಿನ ಯಾವುದೋ ಮಂತ್ರವೊಂದನ್ನ ಉಚ್ಚರಿಸಿದರೆ ಕಳ್ಳರ ಭಯವೇ ಇರದೆಂದು ಮಂತ್ರವೊಂದನ್ನು ಇದೇ ರೀತಿ ಟೀವಿಯಲ್ಲಿ ಹೇಳಿಕೊಂಡಿದ್ದ.




ತಡಬಡಾಯಿಸದೇ ಅವರು ಹೇಳುವ ರೀತಿ ನೋಡಿದರೆ ನೋಡುಗರಿಗೆ ಇದು ಹೌದೇನೋ ಅನ್ನುವ ನಂಬಿಕೆ ಬಾರದಿರದು. 2-3 ವಾರಗಳ ಹಿಂದೆ ನಮ್ಮ ಕರಾಳ ಕಾಲ ಕೇಶಿಗ ಡಾ.ಆನಂದ ಗುರೂಜಿಯ ಮಹರ್ಷಿ ದರ್ಪಣಕ್ಕೆ ಒಬ್ಬ ಮಹಿಳೆ ಫೋನಾಯಿಸಿ "ಸ್ವಾಮೀ, ನೀವು ಹೇಳಿದ ಹಾಗೇ ಮಾಡಿದೆ ಆದರೆ ಪರಿಹಾರ ನನಗೆ ಸಿಗಲಿಲ್ಲ" ಅಂದಿದ್ದಕ್ಕೆ ನೀವೇ ಸರಿಯಾಗಿ ನಿಯಮ ಪಾಲಿಸಿಲ್ಲ ಎಂದು ಈತ ಆ ಮಹಿಳೆಗೇ ಕ್ಲಾಸ್ ತಗ್ಗೊಂಡಿದ್ದ.

ನನ್ನ ಒಬ್ಬ ವಿಜ್ಞಾನಿ ಮಿತ್ರರಿದ್ದರು ಮಹಾನ್ ದೈವ ಭಕ್ತರಾಗಿದ್ದ ಅವರು ಒಂದೊಂದು ದಿನ ಒಂದೊಂದು ದೇಗುಲಕ್ಕೆ ಹೋಗಿಬರುತ್ತಿದ್ದರು. ಈಗ ಹೈದರಾಬಾದಿನಲ್ಲಿರುವ ಅವರು ಕೇವಲ ಸೌತಡ್ಕ ಗಣಪತಿಯ ದರ್ಶನಕ್ಕಾಗೇ ಪ್ರತಿವರ್ಷ ಬರಿದುಹೋಗುವುದುಂಟು. ಅವರಿಗೆ ಒಮ್ಮೆ Devotee No. 1 ಎಂದು ತಮಾಷೆ ಮಾಡಿದ್ದಕ್ಕೆ ಅವರು "ಅದು ನಾನಲ್ಲಪ್ಪಾ" ಎಂದು ಇನ್ನೊಂದು ವಿಜ್ಞಾನಿಯ ಹೆಸರನ್ನ ಆ ಬಿರುದಿಗೆ ಸೂಚಿಸಿದ್ದರು. ಅದು ನಿಸ್ಸಂಶಯವಾಗಿ ಸತ್ಯವಾಗಿತ್ತು.

ದೈನ್ಯದಿಂದ ಬೇಡುವಂತೆ ಗಟ್ಟಿ ಸ್ವರದಲ್ಲಿ ಒಂದೆರಡು ಗಂಟೆಗಳ ದೀರ್ಘಕಾಲ ಅವರ ಪ್ರೇಯರ್ ಪ್ರತಿದಿನ ನಡೆಯುತಿತ್ತು. ಸಜ್ಜನ ವ್ಯಕ್ತಿತ್ವದ ಅವರು ಮಹಾನ್ ದೈವ ಭಕ್ತ ಅನ್ನುವುದರಲ್ಲಿ ಎರಡು ಮಾತಿಲ್ಲ, ಅವರ ಮಾತಿನಲ್ಲಿ ಅಲ್ಲದೇ ಭಾಷಣದಲ್ಲೂ ದೇವರು ಇಣುಕುವುದುಂಟು. ನನಗೆ ತುಂಬಾ ಆತ್ಮೀಯರಾಗಿದ್ದ ಅವರೊಮ್ಮೆ ಯಾವುದೋ ಮಾತಿಗೆ ತಾನು ಗಂಡುಮಗುವನ್ನು ಬಯಸುತ್ತೇನೆ ಎಂದು ಅದಕ್ಕೆ ಕಾರಣವನ್ನೂ ಹೇಳಿದ್ದರು (ಅವರ ಹೆತ್ತವರಿಗೆ ಕೊನೆಯವನನ್ನು ಬಿಟ್ಟು ಎಲ್ಲರೂ ಹೆಣ್ಣುಗಳೇ ಅಂತೆ. ಅಲ್ಲದೇ ಕೇರಳ ಕ್ರಿಶ್ಚಿಯನ್ನರಲ್ಲಿನ ಗಲ್ಫ್ ಚಿನ್ನದ ಪ್ರಭಾವದ ಕಾರಣ ಅಲ್ಲಿನ ಭಯಾನಕ ಡೌರಿ ರೋಗಕ್ಕೆ ಅಲ್ಲಿನ ಹೆಣ್ಣು ಹೆತ್ತವರು ಕ್ಷಣಕ್ಷಣಕ್ಕೂ ಬೆಚ್ಚಿಬೀಳುತ್ತಾರೆ.)

ಮೊದಲ ಮಗು ಹೆಣ್ಣಾಗಿ ಅವರು ಎರಡನೆ ಮಗುವಿನ ನಿರೀಕ್ಷೆಯಲ್ಲಿದ್ದರು. ಅತಿಯಾದ ವಿಶ್ವಾಸ ಹಾಗು ಬೇಜವಾಬ್ದಾರಿತನದಿಂದಾಗಿ ಎರಡನೆಯ ಮುದ್ದಾದ (ನೋಡಿದವರು ಹೇಳಿದಂತೆ) ಗಂಡುಮಗುವನ್ನು ಕ್ಲುಪ್ತ ಸಮಯದ ಔಷಧಿಯ ಅಲಭ್ಯತೆಯ ಕಾರಣಕ್ಕೆ ಕಳಕೊಂಡ ಅವರೀಗ ಎರಡು ಹೆಣ್ಣು ಮಕ್ಕಳ ತಾಯಿ. ಮೊದಲ



ಮಗು ಹೊಟ್ಟೆಯಲ್ಲಿದ್ದಾಗಲೇ ಜರ್ಮನಿಗೆ ಹೋಗಿ ಆರು ತಿಂಗಳಿದ್ದ ಧೈರ್ಯಸ್ಥೆಯಾದರೂ ಎರಡನೇ ಮಗುವಿಗಿರುವ ಸಮಸ್ಯೆ ತಿಳಿದೂ ಕೂಡ ವ್ಯವಸ್ಥೆ ಇರುವ ಮಂಗಳೂರಿಗೋ ಇಲ್ಲ ಬೇರೆ ಆಸ್ಪತ್ರೆಗೋ ಹೆರಿಗೆಗಾಗಿ ಸೇರುವ ಬದಲು ಅಂಥಾ ವ್ಯವಸ್ಥೆ ಇರದಿದ್ದರೂ ತಮ್ಮ ಪ್ರಾರ್ಥನೆಗೆ ಅನುಕೂಲ ಇರುವ ಅಟ್ಯಾಚ್ಡ್ ಚರ್ಚ್ ಇರುವ ಆಸ್ಪತ್ರೆಗೇ ಅವರು ಸೇರಿಕೊಂಡಿದ್ದರು. ಪರಿಹಾರ, ಔಷಧಿ ಇರುವ ಸಮಸ್ಯೆ (ಬ್ಲೂ ಬೇಬಿ ಸಿಂಡ್ರೋಮ್ ಅಥವಾ ಅಂತಾದ್ದೇ ಇನ್ಯಾವುದೋ)ಗೆ ಸ್ವತಃ ವಿಜ್ಞಾನಿಯಾಗಿದ್ದುಕೊಂಡು ಕನಿಷ್ಠ ಕಾಮನ್‌ಸೆನ್ಸ್ ಅನ್ನೂ ಬಳಸದೇ ಅತಿಯಾದ ದೈವಿಕತೆಯಿಂದ ಯೋಚಿಸಿ ತಮ್ಮ ಕನಸಿಗೇ ಅವರು ಅವತ್ತು ಕೊಳ್ಳಿ ಇಟ್ಟುಕೊಂಡಿದ್ದರು.

ನನ್ನ ಅಕ್ಕನಂತಿರುವ ಅವರನ್ನು ನೋಡಲು ಮರುದಿನ ಹೋದಾಗ ಎದುರಾದ ಆ ಮಹಾನ್ ಧೈರ್ಯಸ್ಥೆಯ ಹತಾಶ ಪೇಲವ ಮುಖವನ್ನು ನಾನೆಂದಿಗೂ ಮರೆಯಲಾರೆ. ಅವರ ದೈನ್ಯ ತುಂಬಿದ ದೈನಂದಿನ ಪ್ರಾರ್ಥನೆಗಳಿಗೆ ಭಗವಂತ ಕವಡೆ ಕಾಸಿನ ಬೆಲೆಯನ್ನೂ ಕೊಟ್ಟಿರಲಿಲ್ಲ.

ಇದು ಅಥವಾ ಇಂತಹ ಘಟನೆಯನ್ನು ಸಂಪ್ರದಾಯಿಯೊಬ್ಬನ ಬಳಿ ಹೇಳಿ ನೋಡಿ. ಆತ ತೆರೆದ ಬಾಯಿಗೆ "ಅದು ಅವರವರ ಹಿಂದಿನ ಕರ್ಮ. ಅದನ್ನು ಭಗವಂತನಿಂದಲೂ ತಪ್ಪಿಸಲಿಕ್ಕಾಗದು, ಅನುಭವಿಸಲೇಬೇಕು" ಎಂದುಬಿಡುತ್ತಾನೆ. ಇದು ಹೌದೇ ಆದರೆ, ದೇಶದಲ್ಲಿ ಆಸ್ಪತ್ರೆ, ನ್ಯಾಯಾಲಯ, ಜೈಲು ಇವಕ್ಕೆಲ್ಲ ಬೀಗ ಜಡಿಯಬೇಕಾಗುತ್ತದೆ. ರೋಗಿ ಅಥವಾ ಅಪಘಾತಕ್ಕೀಡಾದವ ತನ್ನ ಕರ್ಮವನ್ನು ಅನುಭವಿಸುತ್ತಿದ್ದಾನೆ ಎಂದಾದರೆ ಆಸ್ಪತ್ರೆ-ಉಪಚಾರದ ವಿಚಾರವೇ ತಪ್ಪಾಗುತ್ತದೆ, ಜೈಲು, ನ್ಯಾಯಾಲಯ ಇತ್ಯಾದಿಗಳೆಂದು ತೀರ್ಪು, ಶಿಕ್ಷೆ, ಉಪಚಾರ ನೀಡಲು ನಾವ್ಯಾರು? ಕಳ್ಳತನವಾದರೆ ಅದು ಅವನ ಕರ್ಮ ಹಾಗು ಕದ್ದವನಿಗೆ ಕರ್ಮಾನುಸಾರ ದೇವರೇ ಶಿಕ್ಷೆ ಕೊಡುವುದು ನಿಶ್ಚಿತವಿರುವಾಗ ಹುಲುಮಾನವ ಮಧ್ಯೆ ಇಲ್ಲಿ ಕೈ ಹಾಕುವುದೇ ತಪ್ಪಲ್ಲವೇ? "ತೇನ ವಿನಾ ತೃಣಮಪಿ ನ ಚಲತಿ" (ಅತನ ಇಚ್ಛೆ ಇರದೇ ಹುಲ್ಲುಕಡ್ಡಿಯೂ ಕೂಡ ಅಲುಗಾಡದು) ಎಂದು ಕಡ್ಡಿಯಾಡಿಸುವ ಕೆಲಸವನ್ನು ದೇವರಿಗೆ ವಹಿಸಿ ತಾನು ಮಾತ್ರ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹೊಂಚುವ ಮನುಷ್ಯ ಯಾವತ್ತಿದ್ದರೂ ಉದ್ಧಾರವಾಗಲಾರ. ಬಹುಶಃ ಯೋಗೀಶ್ ಮಾಸ್ತರು ಹೇಳಿದ ಶಾಂತಕುಮಾರಿಯವರು ತನ್ನ ದೈವಭಕ್ತಿಯನ್ನು ಒಂದು ಸಾಮಾನ್ಯ ಹಂತಕ್ಕಷ್ಟೇ ಸೀಮಿತಗೊಳಿಸಿಕೊಂಡಿದ್ದರೆ ಅವರು ಕೊನೆಗಾಲದಲ್ಲಿ ಅಂತಹ ನರಳಾಟವನ್ನು ಅನುಭವಿಸುತ್ತಿರಲಿಲ್ಲ. ದೇವರು ಹಾಗು ದೇವರ ಹೆಸರಿನ ವ್ರತವನ್ನು ಅತಿಯಾಗಿ ನಂಬಿ ಅದೇ ಕೊನೆಗೆ ಮರ್ಮಾಘಾತ ನೀಡಿದರೆ ಅದರಿಂದ ಚೇತರಿಸಿಕೊಳ್ಳುವುದು ಕಷ್ಟಸಾಧ್ಯ, ಇದ್ದರೂ ಇಲ್ಲದಂತಿದ್ದ ಗಂಡ ಹೋದರೆ ಹೋಗಲಿ ಆದರೆ ಅತಿಯಾಗಿ ನಂಬಿದ ಭಗವಂತನೇ ಅನಿರೀಕ್ಷಿತವಾದ ಶಾಕ್ ನೀಡಿದರೆ ನಂಬುವುದಾದರೂ ಯಾರನ್ನು? ಇಂತವರಲ್ಲಿ ಯಾರನ್ನೂ, ಯಾವುದನ್ನೂ ನಂಬಲಾಗದ ತೀವ್ರ ಅನಾಥ ಪ್ರಜ್ಞೆ ಕಾಡುವುದಲ್ಲದೇ ಎದುರಿನ ಜಗತ್ತೇ Blank ಆಗಿ ಮನಸ್ಸಿನ ಸ್ಥಿಮಿತ ತಪ್ಪುವುದು ಅತೀ ಸಹಜ. ಅಷ್ಟಕ್ಕೂ ವ್ಯಕ್ತಿಯ ಪೂಜೆ, ಭಕ್ತಿ- ನಂಬಿಕೆಗಳ ಮಾನದಂಡದಿಂದ ಸ್ವತಃ ದೇವರೂ ಕೂಡ ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ಖಂಡಿತಾ ಅಳೆಯಲಾರ. ಅದು ಸಾಧ್ಯವೂ ಇಲ್ಲ ಸಾಧುವೂ ಅಲ್ಲ.


-ಶಶಿ ಪುತ್ತೂರು, ದಕ

ಕೋಮುವಾದಿಗಳ ನಾಡಾಗಿರುವ ಚಿಕ್ಕಮಗಳೂರು

ಪ್ರಶಾಂತತೆಗೆ ಹಿಂದೊಮ್ಮೆ ಹೆಸರಾಗಿ ದೇಶ ವಿದೇಶಗಳಿಂದ ಪ್ರವಾಸಿಗರನ್ನು ಸೆಳೆಯುತ್ತ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಪ್ರಪಂಚದಾದ್ಯಂತ ಗುರುತಿಸಿಕೊಂಡಿದ್ದ ಚಿಕ್ಕಮಗಳೂರು ಇದೀಗ ಕೋಮುಗಲಭೆಗೆ ಮೂಲಭೂತವಾಗಿದೆ.

ಫ್ಯಾಕ್ಟರಿಯಿಂದ ಚಿತ್ರ ಸಾಹಿತ್ಯದತ್ತ ಪಯಣ

ಪದೇ ಪದೇ' ಚಿತ್ರದ 'ಮನಸಾಗಿದೆಯೋ ಮನಸಾಗಿದೆಯೋ...' ಎಂಬ ಗೀತೆಯನ್ನು ಬರೆದಿರುವ ಚಿತ್ರಸಾಹಿತಿ, ಪತ್ರಕರ್ತ, ವ್ಯಂಗ್ಯ ಚಿತ್ರಕಾರ ಗುರುನಾಥ್ ಬೋರಗಿ ಇಲ್ಲಿ ಮಾತಾಡಿದ್ದಾರೆ.



* *ನಿಮ್ಮ ಊರು, ಕುಟುಂಬ, ಶಿಕ್ಷಣದ ಕುರಿತು ...ೇರಾ?*

ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಪುಟ್ಟ ಗ್ರಾಮ ...ರಗಿ ನನ್ನೂರು. ನಾನು ಚಿಕ್ಕವನಿದ್ದಾಗಲೇ ಅಪ್ಪ ...ಕೊಂಡರು. ಅಮ್ಮ, ಕೂಲಿ ಕೆಲಸ ಮಾಡಿ ...ಸ್ಸೆಲ್ಸಿವರೆಗೂ ಓದಿಸಿದರು. ಸದ್ಯದ ನನ್ನ ವಾಸ ...ಗಳೂರಿನಲ್ಲಿ ಮಡದಿ, ಮಕ್ಕಳೊಂದಿಗೆ.

* *ಸಾಹಿತ್ಯದೆಡೆಗಿನ ಆಸಕ್ತಿ ಯಾವ ವಯಸ್ಸಿನಲ್ಲಿ ...ಟ್ಟಿಕೊಂಡಿತು?*

...ಮನೆಯಲ್ಲಿ ಸಂಗೀತ ಹಾಗೂ ಸಾಹಿತ್ಯದ ...ತಾವರಣವಿತ್ತು. ಆದರೆ, ಯಾರೂ ಯಾರಿಗೂ ...ಗಳಾಗಿರಲಿಲ್ಲ. ಎಲ್ಲರೂ ಸ್ವಯಂ ಕಲಿತವರೇ ಆಗಿದ್ದರು. ...ೂ ಕೂಡ ಹಾಗೆಯೇ ಅನ್ನಬಹುದು. ಬಹಳಷ್ಟು ...ರ್ಭಗಳಲ್ಲಿ ರೇಡಿಯೋ ನನ್ನ ಗುರುವಾಗಿತ್ತು. ಆ ...ಲಕ ಹಾರ್ಮೋನಿಯಂ ಸೇರಿದಂತೆ ಕೆಲವೊಂದು ...ದ್ಯಗಳನ್ನು ನುಡಿಸೋದು ಕಲಿತೆ. ನನ್ನ ತಾತ ತತ್ವಪದಗಳನ್ನು ...ಯುತ್ತಿದ್ದರು. ಬಹುಶಃ ಅವರ ಪ್ರಭಾವ ನನ್ನ ಮೇಲಿರ ...ಬೇಕೇನೋ ಗೊತ್ತಿಲ್ಲ. ನಾನು ಈಗಲೂ ಹಾರ್ಮೋನಿಯಂ ...ಸುತ್ತ ಹಾಡಬಲ್ಲೆ. ಸ್ವತಃ ಭಾವಗೀತೆಗಳನ್ನು ಬರೆದು ...ು ಮಟ್ಟಿಗೆ ಸ್ವರಸಂಯೋಜಿಸಬಲ್ಲೆ.

* *ನೀವು ವ್ಯಂಗ್ಯಚಿತ್ರಗಳನ್ನೂ ಬರೆಯುತ್ತೀರಿ. ಆ ...ತು ಹೇಳ್ತೀರಾ?*

...ಹೈಸ್ಕೂಲ್ ದಿನಗಳಲ್ಲಿದ್ದಾಗ ಭದ್ರಾವತಿಯ ಎಸ್.ಕೆ. ...ಗ್ ಅಂತ ಒಬ್ಬ ಪ್ರಸಿದ್ಧ ವ್ಯಂಗ್ಯಚಿತ್ರಕಾರರ ಬಗ್ಗೆ ...ಪಟ್ಟಿದ್ದೆ. ಅವರ ವಿಳಾಸ ಹುಡುಕಿ ಪತ್ರ ಬರೆದು, ...ಚಿತ್ರ ಬರೆಯುವುದರ ಕುರಿತು ಪತ್ರಮುಖೇನವೇ ...ಷ್ಟು ಮಾಹಿತಿ ಪಡೆದೆ. ಅವರು ತೀರಿಕೊಂಡ ನಂತರ ...ಾಥ್ ಬೊಂಗಾಳೆ ಅನ್ನುವ ಮತ್ತೊಬ್ಬ ವ್ಯಂಗ್ಯ ಚಿತ್ರಕಾರರ ಹತ್ತಿರ ಒಂದಿಷ್ಟು ಸೂಕ್ಷ್ಮಗಳನ್ನು ಅರಿತುಕೊಂಡೆ. ಪೇಪರ್ ಆಯ್ಕೆ ಮಾಡಿಕೊಳ್ಳುವುದರಿಂದ ಹಿಡಿದು, ಪೆನ್ನು, ಇಂಕು ಇತ್ಯಾದಿಗಳ ಬಗ್ಗೆ ಹೇಳಿಕೊಟ್ಟಿದ್ದು. ನಾನು ರಚಿಸುವ ವ್ಯಂಗ್ಯಚಿತ್ರಗಳ ಬಗ್ಗೆ ಸ್ವತಃ ನನಗೇ ವಿಶ್ವಾಸ ಮೂಡಿದ ನಂತರ ಸುಮಾರು 90ರ ದಶಕದಲ್ಲಿ ನಾಡಿನ ಪ್ರಮುಖ ಪತ್ರಿಕೆಗಳಿಗೆ ಕಳಿಸಲಾರಂಭಿಸಿದೆ. ಆ ನಿಟ್ಟಿನಲ್ಲಿ, ತುಷಾರ, ತರಂಗ, ಕರ್ಮವೀರ, ಸಂಯುಕ್ತ ಕರ್ನಾಟಕ, ಮಯೂರ, ಪ್ರಜಾವಾಣಿ, ಕಸ್ತೂರಿ ಸೇರಿದಂತೆ ಅನೇಕ ಮುಖ್ಯವಾಹಿನಿಯ ಪತ್ರಿಕೆಗಳಲ್ಲಿ ನನ್ನ ವ್ಯಂಗ್ಯ ಚಿತ್ರಗಳು ಪ್ರಕಟವಾದವು. ಜೊತೆಗೆ, ರಾಜ್ಯದ ಬಹುತೇಕ ಕಡೆ ಏಕವ್ಯಕ್ತಿ ವ್ಯಂಗ್ಯ ಚಿತ್ರ ಪ್ರದರ್ಶನವೂ ಏರ್ಪಟ್ಟಿದ್ದುಂಟು.

* *ನೀವೊಬ್ಬ ಪತ್ರಕರ್ತರೂ ಕೂಡ. ಆ ಬಗ್ಗೆ ಹೇಳ್ತೀರಾ?*

'ಕರ್ನಾಟಕ ದೂತ' ಎಂಬ ಪತ್ರಿಕೆಗೆ ಬಿಜಾಪುರ ಜಿಲ್ಲಾ ವರದಿಗಾರನಾಗುವ ಮೂಲಕ ನನ್ನ ಪತ್ರಿಕೋದ್ಯಮದ ಬದುಕು ಶುರುವಾಯಿತು. ಜೊತೆಗೆ, ವಿಜಾಪುರದ ಸ್ಥಳೀಯ ಪತ್ರಿಕೆಗಳಾಗಿದ್ದ 'ಅಗ್ನಿಸ್ಫೋಟ' ಒಳಗೊಂಡಂತೆ ಕೆಲವೊಂದು ಪತ್ರಿಕೆಗಳಿಗೆ ದುಡಿದೆ. ಆ ಕಾಲಕ್ಕೆ ನನಗೆ ನುಡಿಚಿತ್ರದೆಡೆಗೆ ಹೆಚ್ಚಿನ ಆಸಕ್ತಿಯಿತ್ತು. ಹಾಗೇನೇ, 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿನ 'ಜಿಲ್ಲಾ ಸುದ್ದಿ ಸ್ವಾರಸ್ಯ' ಅನ್ನುವ ವಿಭಾಗಕ್ಕೆ ನನ್ನೂರಿನ ಸುತ್ತಮುತ್ತಲ ಘಟನೆಗಳನ್ನು ಆಧರಿಸಿ ಲೇಖನಗಳನ್ನು ಬರೆದು ಕಳಿಸುತ್ತಿದ್ದೆ. ರಾಜ್ಯಮಟ್ಟದ ಪತ್ರಿಕೆಗಳಿಗೆ ಹೆಚ್ಚು ಬರೆಯಲು ಸಾಧ್ಯವಾಗಿದ್ದು ಬೆಂಗಳೂರಿಗೆ ಬಂದ ನಂತರವೇ ಅನ್ನಬಹುದು.

* *ಅಧಿಕೃತವಾಗಿ ಬೆಂಗಳೂರಿಗೆ ಬಂದಿದ್ದು ಯಾವಾಗ?*

1989ರಲ್ಲಿ ಒಮ್ಮೆ ಬೆಂಗಳೂರಿಗೆ ಬಂದು ಬೊಮ್ಮಸಂದ್ರದ ಕಂಪನಿಯೊಂದರಲ್ಲಿ ಸೆಕ್ಯುರಿಟಿ ಗಾರ್ಡ್ ಕೆಲಸ ಮಾಡಿ ಇಲ್ಲಿಯ ವಾತಾವರಣ ಅಡ್ಜಸ್ಟ್ ಆಗದೇ ವಾಪಾಸ್ ಊರಿಗೆ ಹೋಗಿಬಿಟ್ಟಿದ್ದೆ. ಊರಿಗೆ ಹೋದ ನಂತರ ಅಕ್ಕಸಾಲಿಗಾ ವೃತ್ತಿ ಕಲಿತು, ನಾಲ್ಕೈದು ವರ್ಷ ಆ ವೃತ್ತಿಯ ಮೂಲಕ ಕುಟುಂಬ ನಿಭಾಯಿಸಿದೆ. ಆಮೇಲೆ, ಮದುವೆಯಾದ ನಂತರ ಕುಟುಂಬ ಸಮೇತ ಅಧಿಕೃತವಾಗಿ ಉದ್ಯೋಗ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದು 2002ರಲ್ಲಿ. ಬರುತ್ತಿದ್ದಂತೆಯೇ ತಿಂಗಳಿಗೆ ರೂ.1200 ಸಂಬಳಕ್ಕೆ ಗಾರ್ಮೆಂಟ್ಸ್ ಸೇರಿಕೊಂಡೆ. ಆನಂತರ ಸ್ವಲ್ಪ ಕಾಲ ಕಾರ್ಪೆಂಟರ್ ಕೆಲಸವನ್ನು ಕಲಿತು ಬದುಕು ನಿಭಾಯಿಸಿದ್ದೂ ಉಂಟು. ಈ ನಡುವೆ ನನ್ನೊಳಗಿನ ಬರವಣಿಗೆಯ ಆಸಕ್ತಿ ಮತ್ತೆ ಪತ್ರಿಕೆಗಳ ಕಡೆ ಆಸಕ್ತಿ ಕೆರಳಿಸಿತು. ಆ ನಿಟ್ಟಿನಲ್ಲಿ ಕೆಲವೊಂದು ಸಣ್ಣಪುಟ್ಟ ಪತ್ರಿಕೆಗಳಲ್ಲಿ ವರದಿಗಾರ, ವ್ಯಂಗ್ಯ ಚಿತ್ರಕಾರ, ಪ್ರೂಫ್ ರೀಡರ್- ಹೀಗೆ ಒಂದಿಷ್ಟು ಕೆಲಸ ಮಾಡಿದ ನಂತರ 'ಕರುನಾಡ ಸಂಜೆ' ಎಂಬ ಪತ್ರಿಕೆಗೆ ಉಪಸಂಪಾದಕನಾಗಿ ಸೇರಿಕೊಂಡೆ. ಅಲ್ಲಿ ಕೆಲಕಾಲ ಕೆಲಸ ಮಾಡಿದ ನಂತರ ಸೇರಿದ್ದೇ 'ಹಾಯ್ ಬೆಂಗಳೂರ್'. ಐದು ವರ್ಷಗಳ ಕಾಲ 'ಹಾಯ್ ಬೆಂಗಳೂರ್' ಪತ್ರಿಕೆಯಲ್ಲಿ ಕಲಾವಿದ, ಮುಖಪುಟದ ಅಕ್ಷರ ವಿನ್ಯಾಸ ಸೇರಿದಂತೆ ಅಪರೂಪಕ್ಕೊಮ್ಮೆ ಲೇಖನಗಳನ್ನೂ ಬರೆದಿದ್ದುಂಟು. ಹಾಗೇನೇ, 'ಓ ಮನಸೇ'ಯಲ್ಲೂ ನನ್ನ ವ್ಯಂಗ್ಯಚಿತ್ರ, ಬರಹ ಇರುತ್ತಿದ್ದವು. ಹನಿಬಾವರದಿ ಬರೆಯುವ ಆಸಕ್ತಿ ಹುಟ್ಟಿಕೊಂಡಿದ್ದು 'ಹಾಯ್ ಬೆಂಗಳೂರ್' ಸೇರಿದ ನಂತರವೇ ಅನ್ನಬಹುದು.

* *ನೀವು ಕೆಲವೊಂದು ಸಿನಿಮಾಗಳಿಗೆ ಹಾಡು ಬರೆದಿದ್ದೂ ಉಂಟು. ಆ ಕುರಿತು ಹೇಳ್ತೀರಾ?*

ನನಗೆ ಮೊದಲಿನಿಂದಲೂ ಸಿನಿಮಾಗಳಿಗೆ ಹಾಡು ಬರೆಯಬೇಕೆಂಬ ಬಯಕೆಯಿತ್ತು. ಆದರೆ ಯಾರ ಬಳಿಯೂ ಅವಕಾಶಕ್ಕಾಗಿ ಹುಡುಕಿಕೊಂಡು ಹೋಗಿರಲಿಲ್ಲ. ಅಚಾನಕ್ಕಾಗಿ ಒಮ್ಮೆ ಗೀತಸಾಹಿತಿ ನಾಗೇಂದ್ರಪ್ರಸಾದ್ ಅವರ ಪರಿಚಯವಾಗಿ ಸದಾ ಅವರ ಒಡನಾಟವಿತ್ತು. ಆಗಾಗ ಅವರ ಆಫೀಸಿಗೆ ಹೋಗುತ್ತಿದ್ದೆ. ಈ ಮಧ್ಯೆ, ನಾಗೇಂದ್ರಪ್ರಸಾದ್ 'ವಿನಾಯಕ ಗೆಳೆಯರ ಬಳಗ' ಅನ್ನುವ ಸಿನಿಮಾ ಶುರುಮಾಡಿದ್ದರು. ಆ ಸಿನಿಮಾದಲ್ಲಿ ಡೈರೆಕ್ಷನ್ ಡಿಪಾರ್ಟ್ಮೆಂಟ್‌ನಲ್ಲಿ ಕೆಲಸ ಮಾಡಿದೆ. ಜೊತೆಜೊತೆಗೆ ಆರ್ಟ್ ಡಿಪಾರ್ಟ್ಮೆಂಟ್‌ನಲ್ಲೂ ಕೆಲಸ ಮಾಡಿದೆ.

ನಾಗೇಂದ್ರಪ್ರಸಾದ್ ಅವರ ಹತ್ತಿರ ಸಹ ನಿರ್ದೇಶಕ ಹರಿವರಾಸಂ ಅಂತ ಒಬ್ರಿದ್ರು. ಅವರು ನನ್ನ ಬಳಿಯಿದ್ದ ಕೆಲವು ಸಿದ್ಧಸಾಹಿತ್ಯವನ್ನು ನೋಡಿ ಮೆಚ್ಚಿಕೊಂಡಿದ್ದರು. ಅವರ ಮೂಲಕ 'ಫೀಲಿಂಗ್ಸ್' ಎನ್ನುವ ಒಂದು ಆಲ್ಬಮ್‌ನಲ್ಲಿ ಮೂರು ಹಾಡು ಬರೆಯುವ ಅವಕಾಶ ಒದಗಿಬಂತು. ಆನಂತರ 'ಫೀಲಿಂಗ್ಸ್' ಆಲ್ಬಮ್‌ಗೆ ಸಂಗೀತ ನೀಡಿದ್ದ ಸತೀಶ್ ಆರ್ಯನ್ ಎನ್ನುವವರು 'ಪದೇ ಪದೇ' ಎನ್ನುವ ಒಂದು ಸಿನಿಮಾಗೂ ಸಂಗೀತ ನೀಡಿದರು. ಆಗ ನನ್ನ ಕೈಯಲ್ಲಿ ಒಂದು ಹಾಡು ಬರೆಸಿದರು. 'ಮನಸಾಗಿದೆಯೋ ಮನಸಾಗಿದೆಯೋ' ಎಂಬ ಸಾಲಿನಿಂದ ಶುರುವಾಗುವ ಆ ಗೀತೆಯನ್ನು ಕುನಾಲ್ ಗಾಂಜಾವಾಲ ಹಾಡಿದ್ದಾರೆ.

* *ನೀವು ಯಾರ್‍ಯಾರ ಸಾಹಿತ್ಯವನ್ನು ಓದಿಕೊಂಡಿದ್ದೀರ?*

ನಾನು ಹೆಚ್ಚಿಗೆ ಓದಿದವನಲ್ಲ. ಹಾಗೆ ನೋಡಿದರೆ ರವಿ ಬೆಳಗೆರೆಯವರ ಗದ್ಯಬರಹಗಳು ನನಗಿಷ್ಟ. ಅದರಲ್ಲೂ ಬಾಟಮ್ ಐಟಂ ಇಷ್ಟವಾಗುತ್ತೆ. ಇನ್ನು ಕಾವ್ಯದ ವಿಷಯಕ್ಕೆ ಬಂದರೆ ಜಿ.ಎಸ್.ಶಿವರುದ್ರಪ್ಪ ಅವರ ಲಯಬದ್ಧ ಕವಿತೆಗಳು ಹಾಗೂ ಕೆ.ಎಸ್.ನಿಸಾರ್ ಅಹಮದ್ ಅವರ ಭಾವಗೀತೆಗಳು ಪ್ರಿಯವೆನಿಸುತ್ತವೆ. ಎಂಭತ್ತರ ದಶಕದಲ್ಲಿ ಲಂಕೇಶರ ಬರಹ, ವರದಿಗಳನ್ನು ಓದುತ್ತಿದ್ದೆ. ಆದರೆ, ಆ ಕಾಲಕ್ಕೆ ಅರ್ಥವಾಗುತ್ತಿರಲಿಲ್ಲ. ಪತ್ರಿಕೋದ್ಯಮದ ಸಖ್ಯ ದೊರೆತ ನಂತರವಷ್ಟೇ ಲಂಕೇಶರ ಸಾಹಿತ್ಯದ ಆಳ ಅರಿವಾಗತೊಡಗಿದ್ದು. ವಿಶೇಷವಾಗಿ ಅವರ 'ನೀಲು ಕಾವ್ಯ'ವೆಂದರೆ ನನಗೆ ಅಚ್ಚುಮೆಚ್ಚು. ಇನ್ನಷ್ಟೇ ಕನ್ನಡ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನಿಸಬೇಕಿದೆ.

* *ನಿಮ್ಮ ಮುಂದಿನ ಯೋಜನೆಗಳೇನು?*


ಭದ್ರಾವತಿ ರಾಮಾಚಾರಿ ಎನ್ನುವವರು ನಿರ್ದೇಶಿಸುತ್ತಿರುವ 'ಕುಂಬಿ' ಎನ್ನುವ ಚಿತ್ರದ ಎಲ್ಲಾ ಹಾಡುಗಳನ್ನು ಬರೆಯುತ್ತಿದ್ದೇನೆ. ಆ ಚಿತ್ರದ ಸಂಗೀತ ನಿರ್ದೇಶಕ ಶ್ರೀಲಂಕಾ ಮೂಲದವರು. ಹಾಗೇನೇ 'ಸಾರಥಿ' ಮುಂತಾದ ಚಿತ್ರಗಳಲ್ಲಿ ನಟಿಸಿದ್ದ ಹಾಸ್ಯನಟ ವಿಶ್ವನಾಥ್ ಅವರು ಹೀರೋ ಆಗಿ ಅಭಿನಯಿಸುತ್ತಿರುವ ಹೆಸರಿಡದ ಚಿತ್ರಕ್ಕೆ ಹಾಡು ಬರೆಯಲು ಹೇಳಿದ್ದಾರೆ. ನಿರ್ದೇಶನ ವಿಭಾಗದಲ್ಲಿ ತಾಂತ್ರಿಕವಾಗಿ ಒಂದಿಷ್ಟು ಪರಿಣಿತಿ ಪಡೆದು ಮುಂದೆ ನಿರ್ದೇಶಕನಾಗುವ ಕನಸೂ ಹೊಂದಿದ್ದೇನೆ. ನನ್ನ ಬಳಿ ಒಂದಿಷ್ಟು ಕಥೆಗಳೂ ಇವೆ. ಉತ್ತಮ ಅವಕಾಶಗಳ ನಿರೀಕ್ಷೆಯಲ್ಲಿದ್ದೇನೆ. ಉಳಿದಂತೆ ಸದ್ಯದಲ್ಲೇ 'ಬಿರುಕು ನೆಲದ ಬೀಜ' ಎನ್ನುವ ನನ್ನದೊಂದು ಕವನಸಂಕಲನ ಹೊರಬರಲಿದೆ.

'ಬಿರುಕು ನೆಲದ ಬೀಜ' ಸಂಕಲನದ ಒಂದೆರಡು ಸಾಲು ಹೇಳ್ತೀರಾ?

ರಾತ್ರಿಗೊಳದ
ರೊಟ್ಟಿಯನು
ಹಗಲ ಹಸಿವು
ನುಂಗಿತು
****
ತುಂಬು ಸಡಿಲಗೊಂಡ
ಹಸ್ಗೆಲೆಯ ಕಣ್ಣಲ್ಲಿ
ಮರದ ಬೇರಿಗೆ
ಗೊಬ್ಬರವಾಗಿ
ಋಣ ತೀರಿಸುತ ತುಂಬಲ




ಸಂದರ್ಶಕ: ಹೃದಯಶಿವ



...ಸಿ.ಟಿ.ರವಿ ಎಂಬ ಚಡ್ಡಿ ಚುನಾವಣೆಯ ದೃಷ್ಟಿಯಿಂದ ...ಸೌಹಾರ್ದತೆ ಕೇಂದ್ರವಾಗಿದ್ದ ಬಾಬಾ ಬುಡನ್ ಗಿರಿ ...ವನ್ನು ಹಿಂದೂಗಳ ದತ್ತಪೀಠ ಎಂದು ಗುಲು ... ಇದೀಗ ಮೂರನೇ ಬಾರಿ ಶಾಸಕನಾಗಿದ್ದಾನೆ.

...ಇಲ್ಲಿನ ಜನ ಎಷ್ಟು ಶಾಂತಿಪ್ರಿಯರಾಗಿದ್ದರೆಂದರೆ ...ಸಂಖ್ಯಾತ ಕೋಮಿನ ಸಗೀರ್ ಅಹಮದ್ ಎಂಬ ...ವರನ್ನು ಚುನಾವಣೆಯಲ್ಲಿ ಗೆಲ್ಲಿಸಿ ಕಳುಹಿಸಿದ್ದರು. ಆದರೆ ...ಹಿಂದೂ ಮುಸ್ಲಿಂರ ಮಧ್ಯೆ ಶಾಂತಿ ಕದಡಿ ಕೋಮು ...ೆ ಹಬ್ಬಿಸಿದ್ದಾನೆ. ಆತನ ಪಟಾಲಂಗಳು ದಿನಕ್ಕೊಂದು ... ಆಚರಣೆಗಳನ್ನು ಹುಟ್ಟು ಹಾಕುತ್ತ ದತ್ತಮಾಲೆ, ...ಜಯಂತಿ, ಅನುಸೂಯ ಜಯಂತಿ ಎಂಬ ...ಕಗಳನ್ನಾಡುತ್ತಿದ್ದಾರೆ.

...ಇತ್ತೀಚೆಗೆ ಬಾಬಾಬುಡನ್‌ಗಿರಿ ದರ್ಗಾದಲ್ಲಿ ವಿಶ್ವ ...ೂ ಪರಿಷತ್‌ನ ನಾಲಾಯಕ್ ನಾಯಕರು ಪೊಲೀಸರ ...ೆ ದೌರ್ಜನ್ಯವೆಸಗಿದ್ದರು. ಆಗ ಪೊಲೀಸರು ಅವರ ...ದ್ಧ ಯಾವುದೋ ಒಂದು ಕೇಸ್ ಹಾಕಿ ಸುಮ್ಮನಾದರು. ...ಕ್ಕೆ ಸುಮ್ಮನಾಗದ ಚಡ್ಡಿಗಳು ಚಿಕ್ಕಮಗಳೂರಿನ ...ಭಾಗದಲ್ಲಿರುವ ಚೋಟಾಮಕಾನ್ ದರ್ಗಾಕ್ಕೆ ಹಂದಿ ...ಿ ತುಂಡುಹಾಕಿ ಅಪವಿತ್ರಗೊಳಿಸಿ ಕೋಮುಗಲಭೆಗೆ ...ಾದರು. ಆಗಲೂ ಪೊಲೀಸರು ಮುಸ್ಲಿಂರನ್ನು ...ಟ್ ಮಾಡಿಕೊಂಡು ಹೊಡೆದರು. ಗಲಭೆ ಎಬ್ಬಿಸಿದ್ದ ಒಬ್ಬನೇ ಒಬ್ಬ ಹಿಂದೂಗೆ ಲಾಠಿ ಹೊಡೆತ ಬೀಳಲಿಲ್ಲ.




ನಗರದ ಠಾಣೆ ಸಬ್‌ಇನ್ಸಪೆಕ್ಟರ್ ರಾಕೇಶ್ ಎನ್‌ಕೌಂಟರ್ ದಯಾನಾಯಕ್ ಸಿನಿಮಾ ಅದೆಷ್ಟು ಬಾರಿ ನೋಡಿ ಪ್ರಭಾವಕ್ಕೆ ಒಳಗಾಗಿದ್ದಾರೋ ಗೊತ್ತಿಲ್ಲ. ಅವರು ಏಕಾಏಕಿ ಗನ್ ತೆಗೆದು ಶೂಟ್ ಮಾಡಲು ತಯಾರಾಗಿದ್ದರು. ಇದೀಗ ಇದೇ ಕಾರಣಕ್ಕೆ ಎತ್ತಂಗಡಿಯಾಗಲು ರೆಡಿಯಾಗಿದ್ದಾರೆ.

ಜಿಲ್ಲೆಯ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ನಾರುತ್ತಿದ್ದು ಕಾಂಗ್ರೆಸ್ ಎಂಎಲ್‌ಸಿ ಕಣ್ಣಿಗೆ ಬಟ್ಟೆಕಟ್ಟಿಕೊಂಡು ಕುಳಿತಿದ್ದಾರೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಹರಿದಾಡುತ್ತಿವೆ.

ಮಲೆನಾಡಿನ ಶಾಂತಿ ಕದಡುತ್ತಿರುವ ಕೋಮುವಾದಿಗಳಿಗೆ ಬ್ರೇಕ್ ಹಾಕುವವರು ಯಾರು ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಲಿದೆ.

-ಶೂದ್ರ, ಚಿಕ್ಕಮಗಳೂರು

ಫರೂಕ್ ಶೇಕ್ ನನ್ನ ನೆಚ್ಚಿನ ನಟ. ಬಹುಪಾಲು ಅವರ ಸಿನಿಮಾಗಳನ್ನು ನೋಡಿರುವೆ. ಅವರ ಸರಳ ಹಾಗು ಸಹಜ ಪಾತ್ರ ನಿರ್ವಹಣೆ ಮನಸ್ಸಿನ ಆಳಕ್ಕೆ ಇಳಿದುಬಿಡುತ್ತದೆ. ಅವರ ಮಾನವೀಯ ನಡವಳಿಕೆ ಬಗ್ಗೆ ಓದಿ ಕಣ್ಣು ತುಂಬಿ ಬಂತು. ಅವರನ್ನು ನೆನೆದ ಪತ್ರಿಕೆಗೆ ಅನಂತ ಧನ್ಯವಾದಗಳು.



ಅಂದಹಾಗೆ, ಈ ವಾರದ ಕಂಡಹಾಗೆ ಬಹಳ ಸಕಾಲಿಕ. ಮೋದಿಗೆ ಹಿಟ್ಲರ್ ಅನ್ನು ಬಿಟ್ಟರೆ ಇನ್ನು ಯಾರೂ ಹೋಲಿಕೆ ಆಗುವುದಿಲ್ಲ. ಒಂದೇ ವ್ಯತ್ಯಾಸ ಯಾವುದೆಂದರೆ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡ - ಎವಾ ಬ್ರೌನ್‌ಳ ಜೊತೆ!

-ರವಿಕುಮಾರ್, ಹಾಸನ



ಜನವರಿ 15ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಬಿ. ಚಂದ್ರೇಗೌಡರು ಬರೆದ ನಮ್ಮಪ್ಪ ಬಿ. ರಾಜಣ್ಣ ಅವರ ಕುರಿತಾದ 'ಎಡತೊರೆಯ ರಾಜಣ್ಣ ಇನ್ನಿಲ್ಲ' ಲೇಖನದ ಬಗ್ಗೆ ಈ ಪತ್ರ.

ಬಿ. ಚಂದ್ರೇಗೌಡರು ನಮ್ಮಪ್ಪನ ಹತ್ತಿರದ ಗೆಳೆಯರಲ್ಲೊಬ್ಬರು. ಅಪ್ಪನ ಕಥಾಸಂಕಲನ 'ಎಡತೊರೆಯ ಕಥೆಗಳು' ಇದಕ್ಕಾಗಿ ಉತ್ತಮವಾದ ಹಿನ್ನುಡಿಯನ್ನು ಬರೆದವರು. ಬಹಳ ಪ್ರೀತಿಯಿಂದ ನಮ್ಮ ಅಪ್ಪನ ಬಗ್ಗೆ 'ಎಡತೊರೆಯ ರಾಜಣ್ಣ ಇನ್ನಿಲ್ಲ' ಲೇಖನದಲ್ಲಿ ಬರೆದಿದ್ದಾರೆ.

ಆದರೆ ಆ ಲೇಖನದಲ್ಲಿ ಬರುವ ಒಂದು ಸಾಲಿನ ಬಗ್ಗೆ ನನಗೆ ಆಕ್ಷೇಪಣೆಯಿದೆ. 'ಫ್ಯಾಕ್ಟರಿಯಿಂದ ವಿಆರ್‌ಎಸ್ ತೆಗೆದುಕೊಂಡು ಊರಿಗೆ ಹೋದವರು ನಂತರ ರೋಸಿಹೋಗಿ, ಅವರಿವರ ಮನೆಯಲ್ಲಿ ಉಂಡು ಕಡೆಗೆ ಬೆಂಗಳೂರಿಗೆ ಹೋಗಿ ಮಗನ ಬಳಿ ಸೇರಿಕೊಂಡ' ಎಂಬುದೇ ಆ ಸಾಲು.

ನಮ್ಮಪ್ಪ ಬಹಳ ಸ್ವಾಭಿಮಾನಿ ವ್ಯಕ್ತಿ. ಎಂದೂ ಯಾರ ಮನೆಗೂ ಊಟಕ್ಕೆ ಹೋದವರಲ್ಲ. ಸೀನಿಯರ್ ಮ್ಯಾನೇಜರ್ ಆಗಿ ನಿವೃತ್ತಿಯಾದ ಅವರಿಗೆ ಹಣಕಾಸಿನ ತೊಂದರೆಯೂ ಇರಲಿಲ್ಲ. ಹಾಗಾಗಿ ಹೀಗೆ ಬರೆದಿರುವುದು ಸರಿಯಲ್ಲ. ಅಪ್ಪ ಊರಿಗೆ ಹೋದಾಗಿನಿಂದ ಅವರ ಜೊತೆಗಿದ್ದ ನನ್ನ ತಮ್ಮ ನಂತರ ಅವನು ಬೆಂಗಳೂರಿಗೆ ಕೆಲಸ ಅರಸಿ ಹೋದಾಗಲೂ ತನ್ನೊಂದಿಗೆ ಅವರನ್ನು ಕರೆದುಕೊಂಡು ಹೋದ. ಅವರಿವರ ಮನೆಯಲ್ಲಿ ಉಣ್ಣುವ ದಾರಿದ್ರ್ಯ ನಮ್ಮಪ್ಪನಿಗಿರಲಿಲ್ಲ.

ಒಂದು ಉತ್ತಮ ಲೇಖನದಲ್ಲಿ ಇದೊಂದು ತಪ್ಪು ಗ್ರಹಿಕೆಯ ಸಾಲು ಬಂದಿರುವುದು ವಿಷಾದನೀಯ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ

ಬಿ. ರಾ. ಜಣ್ಣ ಅವರ ಮಗಳಾದ ಸುಮತಾ. ಆರ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 22-01-2014

ಅಭಿನೇತ್ರಿಯ ಹಾಡು-ಪಾಡು



ಎಲ್ಲಿಂದಲೋ ಬಂದು ಇಲ್ಲಿ ನೆಲೆ ನಿಂತು ಇಲ್ಲಿಯವರೇ ಆಗಿಹೋದ ನಟಿಯರ ಪೈಕಿ ಪೂಜಾ ಗಾಂಧಿ ಕೂಡ ಒಬ್ಬರು. 'ಮುಂಗಾರು ಮಳೆ' ಚಿತ್ರ ಅಕಸ್ಮಾತ್ ಹಿಟ್ ಆದನಂತರ ಈ ಹುಡುಗಿ ಯಾವ ಪರಿ ಬ್ಯುಸಿಯಾದರು ಅನ್ನೋದು ಎಲ್ಲರಿಗೂ ಗೊತ್ತಿರುವಂಥದ್ದೇ. ಸಿನಿಮಾ ಮೂಲಕ ತನ್ನ ಸ್ಟಾರ್‌ವ್ಯಾಲ್ಯೂ ಗಿಟ್ಟಿಸಿಕೊಂಡು ಅದನ್ನೇ ಬಂಡವಾಳವಾಗಿಸಿಕೊಂಡು ರಾಜಕಾರಣದ ಹಡಸಾಲೆ ಮೇಲೆ ಓಡಾಡತೊಡಗಿದರು. ಒಂದೊಂದು ಸಿನಿಮಾದಲ್ಲಿ ಹೇಗೆ ಒಂದೊಂದು ಪಾತ್ರ ನಿಭಾಯಿಸುತ್ತಾರೋ ಹಾಗೇನೆ ಒಂದೊಂದು ರಾಜಕೀಯ ಪಕ್ಷದಲ್ಲೂ ಒಂದೊಂದು ಪಾತ್ರ ನಿಭಾಯಿಸಿ ಎಲ್ಲಿಯೂ ಸಲ್ಲದ ನಟಿಯಾಗಿ ಹೆಸರು ಮಾಡಿದರು. ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರಬಿದ್ದು ಹೀನಾಯವಾಗಿ ಸೋಲುತ್ತಿದ್ದಂತೆಯೇ ತಾನು 'ಎಲ್ಲರೂ ಅಂದುಕೊಂಡಷ್ಟು ಪ್ರಭಾವಿ ಹೆಣ್ಣಲ್ಲ' ಅನ್ನುವ ಸತ್ಯವರಿತು ಸುಮ್ಮನಾದರು. ಜೊತೆಗೆ ಕನ್ನಡಿಗ ಆನಂದ್ ಗೌಡ ಎನ್ನುವ ವ್ಯಕ್ತಿಯ ಜೊತೆ ವಿವಾಹ ಸಂಬಂಧ ಬಯಸಿ ಕಡೆಗೆ ಕಿರಿಕ್ ಮಾಡಿಕೊಂಡರು. ಈ ಹುಡುಗಿ ಕಥೆ ಇನ್ನೇನು ಮುಗಿದೇಹೋಯಿತು ಅನ್ನುವಷ್ಟರಲ್ಲಿ 'ಅಭಿನೇತ್ರಿ' ಹಾಗೂ 'ತಿಪ್ಪಜ್ಜಿ ಸರ್ಕಲ್' ಎನ್ನುವ ಸಿನಿಮಾಗಳಲ್ಲಿ ಬ್ಯುಸಿಯಾಗುತ್ತ ತನ್ನ ಎಂದಿನ ಕಸುಬಾದ ನಟನೆಯತ್ತ ವಾಲಿಕೊಂಡರು. ಇಂತಹ ಇತಿಹಾಸವಿರುವ ಪೂಜಾ ಗಾಂಧಿ ಈಗ ಮತ್ತೊಂದು ಸಾಹಸಕ್ಕೆ ಕೈಹಾಕಿದ್ದಾರೆ. ಅದೇನಪಾ ಅಂದ್ರೆ 'ಪಿಜಿ ಮ್ಯೂಸಿಕ್' ಎನ್ನುವ ಹೆಸರಿನಡಿ ಒಂದು ಆಡಿಯೋ ಕಂಪನಿಯನ್ನು ಶುರುಮಾಡಿದ್ದಾರೆ. ಜನವರಿ 14 ರಂದು ತಾನು ಅಭಿನಯಿಸಿರುವ 'ಅಭಿನೇತ್ರಿ' ಚಿತ್ರದ ಧ್ವನಿಸುರುಳಿ ಬಿಡುಗಡೆಯ ಜೊತೆಗೆ 'ಪಿಜಿ ಮ್ಯೂಸಿಕ್' ಆಡಿಯೋ ಕಂಪನಿಯನ್ನೂ ಅಧಿಕೃತವಾಗಿ ಲಾಂಚ್ ಮಾಡುತ್ತಿದ್ದಾರೆ. ಸಿನಿಮಾ ಮೂಲಕ ಪ್ರಸಿದ್ಧಿಗೆ ಬಂದ ಈ ಚಂಚಲ ಹುಡುಗಿ ಕಡೆಗೂ ಸಿನಿಮಾ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ಸಮಾಧಾನ ತರುವಂಥ ವಿಷಯ ಅಲ್ಲವೇ?

ಜಯಾ ಕೊರಳಿಗೆ ಅಕಾಡೆಮಿ ಮಾಲೆ



ಕರ್ನಾಟಕ ಚಲನಚಿತ್ರ ಅಕಾಡೆಮಿಯ ನೂತನ ಅಧ್ಯಕ್ಷರಾಗಿ ಜಯಮಾಲಾ ಅವರು ಆಯ್ಕೆಯಾಗಿರುವ ಸುದ್ದಿ ಬಲ್ಲಮೂಲಗಳಿಂದ ಕೇಳಿಬರುತ್ತಿದೆ. ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ತಾರಾ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದನಂತರ ತಾರಾ ತಮ್ಮ ಸ್ಥಾನಕ್ಕೆ ಕಳೆದ ಜೂನ್‌ನಲ್ಲಿ ರಾಜೀನಾಮೆ ನೀಡಿದ್ದರು. ಈಗ ಆ ಸ್ಥಾನಕ್ಕೆ ಜಯಮಾಲ ಅವರು ಆಯ್ಕೆಯಾಗುವ ಸೂಚನೆಗಳು ಕಂಡುಬರುತ್ತಿವೆ.

ಅಂದಹಾಗೆ ತೆರವಾಗಿದ್ದ ಈ ಸ್ಥಾನಕ್ಕೆ ಚಿತ್ರರಂಗದ ಅನೇಕ ಗಣ್ಯರ ಹೆಸರುಗಳು ಕೇಳಿಬಂದಿದ್ದವು. ಅವುಗಳಲ್ಲಿ ರವಿಚಂದ್ರನ್, ಬರಗೂರು ರಾಮಚಂದ್ರಪ್ಪ ಬಸಂತ್ ಕುಮಾರ್ ಪಾಟೀಲ್, ಗಿರೀಶ್ ಕಾಸರವಳ್ಳಿ ಹಾಗೂ ಜಯಮಾಲಾ ಹೆಸರುಗಳು ಪ್ರಮುಖವಾಗಿದ್ದವು. ಆಯ್ಕೆ ಪ್ರಕ್ರಿಯೆಯನ್ನು ಸರ್ಕಾರ ಮುಂದೂಡುತ್ತಲೇ ಬಂದಿತ್ತು. ಈಗ ನೋಡಿದರೆ, ಜಯಮಾಲ ಆಯ್ಕೆಯಾಗಿದ್ದಾರೆ ಎಂಬ ಸುದ್ದಿ ಕೇಳಿಬರುತ್ತಿದೆ.

ಈ ಹಿಂದೆ ಜಯಮಾಲ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆಯಾಗಿದ್ದರು. ಈಗ ಅವರು ಕರ್ನಾಟಕ ಚಲನಚಿತ್ರ ಅಕಾಡೆಮಿಯ ನೂತನ ಅಧ್ಯಕ್ಷೆಯಾಗಿ ಅದೇನೋ ಸಾಧಿಸಿ ತೋರಿಸುತ್ತಾರೋ ಕಾದುನೋಡಬೇಕಿದೆ.



ನಮ್ಮ ಮುತ್ತು ಸುಭಾಷ್ ಶೆಟ್ಟಿ ರಕ್ಷಾ


ಶಿವಮಣಿ ಬಂದ್ರು ದಾರಿ ಬಿಡಿ



"ನಿರ್ದೇಶಕನೊಬ್ಬನ ಚಿತ್ರವೊಂದು ಸೋಲುತ್ತಿದ್ದರೆ, ಗೆದ್ದೇ ಗೆಲ್ಲಲು ಆತ ಸತತ ಚಿತ್ರಗಳನ್ನು ನಿರ್ದೇಶಿಸುತ್ತಿರಬೇಕಾಗುತ್ತದೆ. ಆದರೆ ಅದೇ ನಿರ್ದೇಶಕನ ಚಿತ್ರವೊಂದು ಗೆದ್ದಾಗ, ತನ್ನನ್ನು ತಾನು ಪುನಶ್ಚೇತನಗೊಳಿಸಿಕೊಳ್ಳಲು ಕೊಂಚ ದಿನದಮಟ್ಟಿಗೆ ವಿರಾಮ ತೆಗೆದುಕೊಳ್ಳಬೇಕಾಗುತ್ತದೆ. ನಾನೂ ಕೂಡಾ 'ಜೋಶ್' ಚಿತ್ರ ಗೆದ್ದ ನಂತರ ಇದೇ ಕೆಲಸವನ್ನು ಮಾಡಿದ್ದು. 'ಜೋಶ್' ಸಿನಿಮಾದ ಗೆಲುವಿನ ನಂತರ ದೀರ್ಘ ವಿರಾಮ ತೆಗೆದುಕೊಂಡ ನಾನು ಹೊಸ ಬಗೆಯ ಕತೆ, ಪಾತ್ರ, ನಿರೂಪಣೆಗಳೊಂದಿಗೆ ಗಾಂಧಿನಗರಕ್ಕೆ ಮರಳಿದ್ದೇನೆ. ಏಕತಾನತೆಯಿಂದ ಕೂಡಿರುವ ಚಿತ್ರಗಳನ್ನು ಮಾಡುವುದಕ್ಕಿಂತ ನಿರ್ದೇಶಕನೊಬ್ಬ ಇಂತಹ ವಿಭಿನ್ನ ಸಿನಿಮಾಗಳನ್ನು ಮಾಡಿದಾಗಲೇ ಆತನ ಕೆಲಸಕ್ಕೆ ಮನ್ನಣೆ ಸಿಗುವುದು" ಎನ್ನುವುದು ನಿರ್ದೇಶಕ ಶಿವಮಣಿಯವರ ಮಾತು.

ಅಂದಹಾಗೆ ದುನಿಯಾ ವಿಜಯ್-ಸೌಂದರ್ಯ ಜಯಮಾಲ ಜೋಡಿ ಅಣ್ಣ ತಂಗಿಯಾಗಿ ಅಭಿನಯಿಸುತ್ತಿರುವ 'ಸಿಂಹಾದ್ರಿ' ಚಿತ್ರದ ಮೂಲಕ ಶಿವಮಣಿ ಮತ್ತೆ ನಿರ್ದೇಶಕರಾಗಿ ಅಖಾಡಕ್ಕೆ ಇಳಿಯಲಿದ್ದಾರೆ. ಈ ಮೊದಲು 'ರಾಜಕೀಯ', 'ಗೋಲಿಬಾರ್', 'ಕುಬೇರ', 'ಲವ್ ಯೂ', 'ಖಾಕಿ', 'ಮದರ್ ಇಂಡಿಯಾ', 'ಮಿನುಗುತಾರೆ', 'ಅಗ್ನಿಸಾಕ್ಷಿ' ತರಹದ ಬರೀ ರಾಜಕೀಯ, ಥ್ರಿಲ್ಲರ್ ಬೇಸ್ಡ್ ಕಥೆಗಳನ್ನಷ್ಟೇ ಸಿನಿಮಾವಾಗಿಸುವಲ್ಲಿ ನಿಸ್ಸೀಮರಾಗಿದ್ದ ಇವರು ಇತ್ತೀಚೆಗಷ್ಟೇ ವಿಜಯಶಾಂತಿ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ವಿನ್ನರ್' ಎನ್ನುವ ಅಂಥದ್ದೇ ವರ್ಗಕ್ಕೆ ಸೇರಿರುವ ತೆಲುಗು ಚಿತ್ರವನ್ನು ನಿರ್ದೇಶಿಸಿ ಬಂದಿದ್ದಾರೆ. ಆ ಚಿತ್ರ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ದಿನಕರ್ ತೆಕ್ಕೆಗೆ 'ಉಗ್ರಂ'



ಮುರಳಿ ಅಭಿನಯದ 'ಉಗ್ರಂ' ಚಿತ್ರವನ್ನು ತಮ್ಮ ತೂಗುದೀಪ ಎಂಟರ್‌ಪ್ರೈಸಸ್ ಸಂಸ್ಥೆಯ ಮೂಲಕ ಕರ್ನಾಟಕ ರಾಜ್ಯದ್ಯಂತ ವಿತರಿಸಲು ದಿನಕರ್ ತೂಗುದೀಪ ತೀರ್ಮಾನಿಸಿದ್ದಾರೆ. ದಿನಕರ್ ಈ ಮೊದಲು ತಮ್ಮ ಸಂಸ್ಥೆಯ ಮೂಲಕ ತಮ್ಮ ಸಹೋದರ ದರ್ಶನ್ ಅಭಿನಯದ 'ಬುಲ್ ಬುಲ್' ಹಾಗೂ 'ಬೃಂದಾವನ' ಚಿತ್ರಗಳನ್ನು ವಿತರಿಸಿದ್ದರು. 'ಉಗ್ರಂ' ಚಿತ್ರದ ಟ್ರೇಲರ್‌ಗಳು ಇಷ್ಟವಾಗಿದ್ದರಿಂದ ಸಿನಿಮಾ ಬಗ್ಗೆ ಭರವಸೆ ಮೂಡಿ ವಿತರಣಾ ಹಕ್ಕನ್ನು ಪಡೆದುಕೊಳ್ಳಲು ತೀರ್ಮಾನಿಸಿದ್ದಾರಂತೆ. ಜನವರಿ ಕೊನೆಯ ವಾರದಲ್ಲಿ ತೆರೆ ಕಾಣಲಿರುವ 'ಉಗ್ರಂ' ಚಿತ್ರದಲ್ಲಿ ಮುರಳಿಯವರಿಗೆ ವಿಭಿನ್ನ ಪಾತ್ರವಿದೆಯಂತೆ.

ಸಂಕ್ರಾಂತಿಗೆ 'ಮೇಘ ಮಯೂರಿ'



'ಮೇಘ ಮಯೂರಿ' ಎಂಬ ಹೊಸ ಧಾರಾವಾಹಿ ಜನವರಿ 13 ರಿಂದ ಸಂಕ್ರಾಂತಿ ಪ್ರಯುಕ್ತ ರಾತ್ರಿ 7.30ಕ್ಕೆ ಜೀ ಕನ್ನಡದಲ್ಲಿ ಆರಂಭವಾಗಲಿದೆ. ಹಿಂದಿ ಧಾರಾವಾಹಿಯೊಂದರ ಯಥಾವತ್ತು ಕನ್ನಡ ರೂಪವಾಗಿರುವ ಈ ಧಾರಾವಾಹಿ ಇಬ್ಬರು ಹುಡುಗಿಯರ ಸುತ್ತ ನಡೆಯುವ ಕಥೆ ಹೊಂದಿದ್ದು ಮೇಘ ಪಾತ್ರದಲ್ಲಿ ಹರ್ಷಿತಾ ಎಂಬುವವರೂ ಮಯೂರಿ ಪಾತ್ರದಲ್ಲಿ ಅಮೃತ ರಾಮಮೂರ್ತಿ ಎಂಬುವವರೂ ಕಾಣಿಸಿಕೊಳ್ಳಲಿದ್ದಾರೆ. ಉಳಿದಂತೆ, ಹಿರಿತೆರೆಯ ಜ್ಯೋತಿ, ಮಲ್ಲಿಕಾ ಪ್ರಸಾದ್, ನಾಗೇಶ್ ಯಾದವ್, ರಮೇಶ್ ಪಂಡಿತ್, ಸುಷ್ಮಾ ನಾಣಯ್ಯ ಅಶೋಕ್, ಕುಸುಮ, ಚಿನ್ಮಯಿ, ಅನಿಲ್ ತಿಪಟೂರ್, ರಾಧಾ ರಾಮಚಂದ್ರ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ.

ಅಂದಹಾಗೆ, ತ್ರಿಶೂಲ್ ಎಂಬುವವರು 'ಮೇಘ ಮಯೂರಿ' ಧಾರಾವಾಹಿಯನ್ನು ನಿರ್ದೇಶಿಸುತ್ತಿದ್ದರೆ, ಗಣೇಶ್ ಎಂಬುವವರು ಬಂಡವಾಳ ಹಾಕಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com